# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ SUCI (C)

ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಸಂಪುಟ: 37 । ಸಂಚಿಕೆ: 06 । ಆಗಸ್ಟ್ 2024 । ಬೆಲೆ: ರೂ. 7/-


ಒಳ ಪುಟಗಳಲ್ಲಿ.............


ಜನರ ರಕ್ಷಣೆಗೆ ಬಾರದ ಆಧುನಿಕ ತಂತ್ರಜ್ಞಾನ..................2

ಕೆನ್ಯಾ ಜನತೆ ಹೋರಾಟಕ್ಕೊಂದು ಸಲಾಂ!......................3

ಅದಾನಿ ಕಲ್ಲಿದ್ದಲು ಹಗರಣ ............................................4

ಬಿಜೆಪಿಯ ಅವಕಾಶವಾದ ...............................................5

ಶೇರುಪೇಟೆಯ ಮೋಸ ....................................................6

ಎರಡು ಭಾರತಗಳು .........................................................7

ನರಮೇಧ ನಡೆಸುತ್ತಿದೆ ಇಸ್ರೇಲ್........................................9

ಹವಾಮಾನ ವೈಪರೀತ್ಯ ...................................................11





ನಮ್ಮ ದೇಶದಲ್ಲಿ ಕ್ರಾಂತಿ ನಡೆಸುವ ಮಹಾ ಹೊಣೆ ಕಾರ್ಮಿಕರ ಹಾಗೂ ರೈತರ ಹೆಗಲ ಮೇಲಿದೆ. ನೆನಪಿಡಿ, ದೊಡ್ಡವರು ಈ ಕ್ರಾಂತಿಯನ್ನು ನಿಮಗಾಗಿ ತಂದುಕೊಡುವುದಿಲ್ಲ... ಕಾರ್ಮಿಕರು ಮತ್ತು ರೈತರ ಮನೆಗಳಿಂದ... ಕ್ರಾಂತಿಕಾರಿ ಕಾರ್ಯಕರ್ತರು ಮತ್ತು ನಾಯಕರು ದೊಡ್ಡ ಸಂಖ್ಯೆಯಲ್ಲಿ ಎದ್ದು ಬಂದಾಗ... ತಮ್ಮ ನಾಯಕತ್ವದಲ್ಲಿ ಉಕ್ಕಿನಂತಹ ಸೈನ್ಯವಾಗಿ ಸಂಘಟಿತವಾದಾಗ... ಈ ಕ್ರಾಂತಿಯು ಯಶಸ್ವಿಯಾಗಿ ವಾಸ್ತವ ರೂಪಕ್ಕೆ ಬರುತ್ತದೆ. ಅಲ್ಲಿವರೆಗೂ ಕ್ರಾಂತಿ ಹತ್ತಿರ ಬರುವುದಿಲ್ಲ, ದೂರದ ಕೂಗಾಗಿ ಉಳಿಯುತ್ತದೆ.

**– ಶಿವದಾಸ್ ಘೋಷ್**

**(5 ಆಗಸ್ಟ್ 1923 – 5 ಆಗಸ್ಟ್ 1976)**

'ಕಾನೂನು' ಎಂಬುದು ಬಂಡವಾಳಗಾರನು ತನಗಾಗಿ ಸಿದ್ಧಮಾಡಿ ಇಟ್ಟುಕೊಂಡಿರುವ ಬಾರುಕೋಲು ಎಂದು ಮತ್ತೆಮತ್ತೆ ಪುನರಾವರ್ತನೆಯಾಗಿರುವ (ತನ್ನ) ಅನುಭವದಿಂದ ಕಾರ್ಮಿಕನು ಚೆನ್ನಾಗಿಯೇ ಬಲ್ಲ....... ಏನೇ ಆದರೂ ಸಹ, ಸರ್ಕಾರವನ್ನೇ ಇಲ್ಲವಾಗಿಸುವುದು ಬಂಡವಾಳಶಾಹಿಗೆ ಅಸಾಧ್ಯವಾಗಿರುವುದರಿಂದ, ಆದರೆ, ಅದರಷ್ಟೇ ಅನಿವಾರ್ಯವಾದ ಕಾರ್ಮಿಕವರ್ಗವನ್ನು (ತನ್ನ) ಅಂಕೆಯಲ್ಲಿ ಇಟ್ಟುಕೊಳ್ಳಬೇಕಾಗಿರುವುದರಿಂದ, ಸರ್ಕಾರದ ಬಲವನ್ನು ಅದು ಕಾರ್ಮಿಕ ವರ್ಗದ ವಿರುದ್ಧ ತಿರುಗಿಸುತ್ತದೆ ಮತ್ತು (ಕಾರ್ಮಿಕ ವರ್ಗವನ್ನು) ತನ್ನ ಹಾದಿಯಿಂದ ಎಷ್ಟು ಸಾಧ್ಯವೋ ಅಷ್ಟು ದೂರವಿಡುತ್ತದೆ.

'ಕಂಡೀಶನ್ ಆಫ್ ದಿ ವರ್ಕಿಂಗ್ ಕ್ಲಾಸ್ ಇನ್ ಇಂಗ್ಲೆಂಡ್' ಎಂಬ ಕೃತಿಯಿಂದ...



**– ಫ್ರೆಡರಿಕ್ ಎಂಗೆಲ್ಸ್** **(28 ನವೆಂಬರ್ 1820 – 5 ಆಗಸ್ಟ್ 1895)**

# ಅಭೂತಪೂರ್ವ ವಿಜಯ ಸಾಧಿಸಿದ ಬಾಂಗ್ಲಾದೇಶದ ಜನತೆ



ಹೋರಾಟನಿರತ ವಿದ್ಯಾರ್ಥಿಗಳು

[ಬಾಂಗ್ಲಾದೇಶದ ಪ್ರಧಾನಿ ದೇಶ ಬಿಟ್ಟು ಪಲಾಯನ ಮಾಡುವಂತೆ ಜನತೆ ಮತ್ತು ಅದರಲ್ಲೂ ನಿರ್ದಿಷ್ಟವಾಗಿ ವಿದ್ಯಾರ್ಥಿಗಳು ಸಾಧಿಸಿದ ಮಹತ್ತರವಾದ ಸಾಧನೆಗೆ ಅಭಿನಂದನೆ ಸಲ್ಲಿಸುತ್ತಾ ಸೋಷಲಿಸ್ಟ್ ಪಾರ್ಟಿ ಆಫ್ ಬಾಂಗ್ಲಾದೇಶ್(ಮಾರ್ಕ್ಸ್‌ವಾದಿ) ಪಕ್ಷವು ಆಗಸ್ಟ್ 6ರಂದು ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನು ಪಕ್ಷದ ಸಂಯೋಜಕರಾದ ಕಾಮ್ರೇಡ್ ಮಸೂದ್ ರಾಣರವರ ಅಂಕಿತದೊಂದಿಗೆ ಬಿಡುಗಡೆ ಮಾಡಿದೆ.]

**"ನೂರಾರು ಹುತಾತ್ಮರ ರಕ್ತಕ್ಕೆ ಬದಲಾಗಿ ವಿಜಯವನ್ನು ಸಾಧಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು"**

"ವಿದ್ಯಾರ್ಥಿ ಪ್ರತಿಭಟನಾಕಾರರು ಮತ್ತು ಎಲ್ಲಾ ಜನತಾಂತ್ರಿಕ ರಾಜಕೀಯ ಶಕ್ತಿಗಳೊಂದಿಗೆ ಚರ್ಚೆ ನಡೆಸಿ, ಅದರ ಆಧಾರದ ಮೇಲೆ ಮಾತ್ರ ಮಧ್ಯಂತರ ಸರ್ಕಾರವನ್ನು ರಚಿಸಬೇಕು.

"ವಿದ್ಯಾರ್ಥಿಗಳು ನಡೆಸಿದ ಸಂಪೂರ್ಣ ಜನಬೆಂಬಲ ಗಳಿಸಿದ್ದ ದಂಗೆಯಿಂದ ಶೇಖ್ ಹಸೀನಾರ ನಿರಂಕುಶ ಸರ್ಕಾರವು ಪತನಗೊಂಡಿದೆ. ವಿಜಯದ ಈ ಕ್ಷಣದಲ್ಲಿ ಇಂದು, ಈ ಚಳುವಳಿಯಲ್ಲಿ ಅಸುನೀಗಿದ ನೂರಾರು ಹೋರಾಟಗಾರರನ್ನು ಅತ್ಯಂತ ಗೌರವದಿಂದ ನಾವು ನೆನೆಯುತ್ತೇವೆ. ಈ ದೇಶದ ವಿದ್ಯಾರ್ಥಿಗಳು ಮತ್ತು ಸ್ವಾತಂತ್ರ ಪ್ರೇಮಿ ಜನತೆಯ ಹೃದಯಗಳಲ್ಲಿ ಅವರು ನೆಲೆಸುತ್ತಾರೆ.

ಈ ಹೋರಾಟವನ್ನು ವಿದ್ಯಾರ್ಥಿಗಳು ಆರಂಭಿಸಿದರು ಮತ್ತು ಆನಂತರ ಒಂದು ನಿರ್ದಿಷ್ಟ ಸಂದರ್ಭದಲ್ಲಿ, ಸಮಾಜದ ಎಲ್ಲಾ ಸ್ತರಗಳ ಜನರು ಅದನ್ನು ಸೇರಿಕೊಂಡರು. ವಿದ್ಯಾರ್ಥಿ ಚಳುವಳಿಯು ಬೃಹತ್ ಜನಸಮೂಹದ ದಂಗೆಯಾಗಿ ಪರಿವರ್ತಿತವಾಯಿತು. ಅವರ ಪರಮ ಯಾತನೆ ಮತ್ತು ತ್ಯಾಗಗಳ ಸರಮಾಲೆಯಿಂದಲೇ ಶೇಖ್ ಹಸೀನಾ ಪತನವಾದದ್ದು.

ಈ ಸಂದರ್ಭದಲ್ಲಿ, ಭವಿಷ್ಯದ ರೂಪರೇಷೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಮಧ್ಯಂತರ ಸರ್ಕಾರದ ರಚನೆಯ ಬಗ್ಗೆ ಯೋಜನೆ ಘೋಷಣೆಯಾಗಿದೆ. ವಿದ್ಯಾರ್ಥಿ ಹೋರಾಟಗಾರರು ಮತ್ತು ಜನತಾಂತ್ರಿಕ ರಾಜಕೀಯ ಶಕ್ತಿಗಳ ಜೊತೆಯಲ್ಲಿ ಚರ್ಚೆಗಳನ್ನು ನಡೆಸದೆ ಯಾವುದೇ ಸರ್ಕಾರವನ್ನು ರಚಿಸಬಾರದು ಎಂದು ನಾವು ಸ್ಪಷ್ಟವಾಗಿ ನಂಬುತ್ತೇವೆ.

ಈ ಮಧ್ಯಂತರ ಸರ್ಕಾರವು 2 ನೇ ಪುಟಕ್ಕೆ

# ನೀಟ್ ಹಾಗೂ ನೆಟ್ ಹಗರಣ

## ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಅನಾವರಣ

ನೀಟ್ ಪರೀಕ್ಷೆಯು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಮಹಾದ್ವಾರ. ಈ ವರ್ಷದ ನೀಟ್(ನ್ಯಾಷನಲ್ ಎಂಟ್ರೆನ್ಸ್ ಅಂಡ್ ಎಲಿಜಿಬಿಲಿಟಿ ಟೆಸ್ಟ್) ಪರೀಕ್ಷೆಯು ಮೇ 5 ರಂದು ನಡೆಯಿತು ಹಾಗೂ ಅದರ ಫಲಿತಾಂಶ ಜೂನ್ 4ರಂದು ಪ್ರಕಟಗೊಂಡಿತು. ಈ ಪರೀಕ್ಷೆಯನ್ನು ಈಗ ಎನ್‌ಟಿಎ ನಡೆಸುತ್ತಿದೆ. ಈ ವರ್ಷದ ನೀಟ್ ಪರೀಕ್ಷೆಯ ಫಲಿತಾಂಶ ಬಹಳಷ್ಟು ಚರ್ಚೆ–ಅನುಮಾನಗಳಿಗೆ ಎಡೆಮಾಡಿಕೊಟ್ಟಿತು. ಪ್ರಶ್ನೆ ಪತ್ರಿಕೆಯಲ್ಲಿ ಕಂಡುಬಂದ ತಪ್ಪುಗಳಿಂದ ಹಿಡಿದು ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿದ ಬಗೆ, ಪ್ರಶ್ನೆ ಪತ್ರಿಕೆ ಸೋರಿಕೆಯ ಆಪಾದನೆಯೊಂದಿಗೆ ಹಗರಣದ ದುರ್ವಾಸನೆಯೂ ಬಂತು. ಹಲವು ವಿದ್ಯಾರ್ಥಿಗಳು, ಪೋಷಕರು ಮರು ಪರೀಕ್ಷೆಗಾಗಿ ಒತ್ತಾಯಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಕೋಟ್ಯಾಂತರ ರೂಪಾಯಿಗಳಿಗೆ ದೊಡ್ಡ ಮಟ್ಟದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಕ್ರಮೇಣವಾಗಿ ಬೆಳಕಿಗೆ ಬಂತು. ಆರಂಭದಲ್ಲಿ ಹಗರಣದ ಆಪಾದನೆಯನ್ನು ಎನ್‌ಟಿಎ ಸಾರಾಸಗಟವಾಗಿ ತಿರಸ್ಕರಿಸಿತ್ತು.

ಕೇಂದ್ರ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ ಕೂಡ ಇಂತಹದ್ದೇ ನಿಲುವು ತಳೆದಿದ್ದರೂ ಸಹ ನಂತರದ ದಿನಗಳಲ್ಲಿ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ 'ಕೆಲವು ಅಕ್ರಮಗಳು' ನಡೆದಿವೆ ಎಂದು ಒಪ್ಪಬೇಕಾಯಿತು! ಅರ್ಜಿದಾರರ ಮನವಿಯೊಂದಕ್ಕೆ ಪ್ರತಿಕ್ರಿಯಿಸುತ್ತಾ ಸರ್ವೋಚ್ಚ ನ್ಯಾಯಾಲಯವು "ಪರೀಕ್ಷಾ ಪ್ರಕ್ರಿಯೆಯಲ್ಲಿ ಶೇ.0.001 ರಷ್ಟು ಪ್ರಮಾಣದ ನಿರ್ಲಕ್ಷ್ಯ ಕಂಡು ಬಂದರೂ ಆ ಪ್ರಕರಣವನ್ನು ಗಂಭೀರವಾಗಿಯೇ ಪರಿಗಣಿಸಬೇಕು" ಎಂದಿತು.

ಪ್ರಕರಣ ಹೊರಬಂದ ಮೊದಲ ದಿನದಿಂದಲೂ ಎಐಡಿಎಸ್‌ಓ ದೇಶದಾದ್ಯಂತ ಹಗರಣದ ವಿರುದ್ಧ ನ್ಯಾಯಾಂಗ ತನಿಖೆ ನಡೆಯಬೇಕೆಂಬ ಬೇಡಿಕೆ ಎತ್ತಿ ವಿದ್ಯಾರ್ಥಿಗಳೊಂದಿಗೆ ಬೀದಿಗಿಳಿಯಿತು. ಹಾಗೂ ಎಲ್ಲಾ ಆರೋಪಗಳ ಸೂಕ್ತ ತನಿಖೆ ನಡೆಯುವವರೆಗೂ ನೀಟ್ ಕೌನ್ಸೆಲಿಂಗ್‌ನ ಪ್ರಕ್ರಿಯೆಯನ್ನು ತಡೆಹಿಡಿಯಬೇಕೆಂದು ಆಗ್ರಹಿಸಿತು. ಹಗರಣದ ಆಳ ಬೆಳಕಿಗೆ ಬರುತ್ತಿರುವಾಗಲೇ ದೇಶದ ಹಗರಣದ ಕೇಂದ್ರಗಳಾಗಿ ಗುಜರಾತ್, ಹರಿಯಾಣ, ಮಧ್ಯಪ್ರದೇಶ ಹಾಗೂ ಬಿಹಾರದ ಕೆಲವೆಡೆ ಅಕ್ರಮಗಳು ನಡೆದಿವೆ ಎಂಬುದು ತನಿಖೆಯಿಂದ ಹೊರಬಂತು. ಈ ಸಂದರ್ಭದಲ್ಲಿಯೇ ಏಷಿಯಾ ಪೆಸಿಫಿಕ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್ಮೇಶನ್ ಆಂಡ್ ಟೆಕ್ನಾಲಜಿ ಸಂಸ್ಥೆಯು ನಡೆಸುತ್ತಿದ್ದ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ – ನ್ಯಾಶನಲ್ ಎಲಿಜಿಬಿಲಿಟಿ ಟೆಸ್ಟ್ (ಯುಜಿಸಿ–ನೆಟ್) ನಡೆದ ಮರುದಿನವೇ ಜೂನ್ 18ರಂದು ಸರ್ಕಾರವು ಪರೀಕ್ಷೆಯನ್ನು ರದ್ದು ಪಡಿಸಿತು. ಯುಜಿಸಿ–ನೆಟ್ ಪರೀಕ್ಷೆಯು ಭಾರತೀಯ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಹಾಗೂ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರಾಗಲು ಅಥವಾ ಸಂಶೋಧನಾ ವಿಧ್ಯಾರ್ಥಿಗಳಿಗೆ ಶಿಷ್ಯವೇತನ ಪಡೆಯಲು ಬೇಕಿರುವ ಅರ್ಹತಾ ಪರೀಕ್ಷೆಯಾಗಿದೆ.

ಮೊದಲು ನೀಟ್, ನಂತರ ನೆಟ್ ಪರೀಕ್ಷಾ ಪ್ರಕರಣಗಳು ಭಾರತದ ಶಿಕ್ಷಣ ವ್ಯವಸ್ಥೆಯ ಕರಾಳ ಮುಖವನ್ನು ಅನಾವರಣಗೊಳಿಸಿದವು ಎಂದು ಎಐಡಿಎಸ್‌ಓ ಭಾವಿಸುತ್ತದೆ. ತಿಂಗಳುಗಳ ಕಾಲ, ಕೆಲವೊಮ್ಮೆ ವರ್ಷಗಳ ಕಾಲ ವಿದ್ಯಾರ್ಥಿಗಳು ತಯಾರಿ ನಡೆಸುವ ದೇಶದ ಈ ಎರಡು ಪರೀಕ್ಷೆಗಳು ಬೃಹತ್ ಭ್ರಷ್ಟಚಾರ ಹಾಗೂ ಅಕ್ರಮಗಳ ಆಕ್ರಮಣಕ್ಕೆ ಸಿಲುಕಿ ನೆಲಸಮವಾದವು. ನಡೆದ ಎಲ್ಲಾ ಘಟನಾವಳಿಗಳು ಪ್ರಶ್ನೆಗಳ ಅಲೆ ಎಬ್ಬಿಸಿದವು. ಇವೆಲ್ಲದರ ಜೊತೆಗೆ ದೂರದ ಊರುಗಳಿಗೆ ಹೋಗಿ ಬೀಡುಬಿಟ್ಟು, ಸಾವಿರಾರು ರೂಪಾಯಿಗಳ ಶುಲ್ಕ ತೆತ್ತು ಪರೀಕ್ಷಾರ್ಥಿಗಳು ಅನುಭವಿಸಿದ ಯಾತನೆಗೆ ಯಾರು ಹೊಣೆ?

ಕಾರ್ಪೋರೇಟ್ ಮನೆತನಗಳ ಕೃಪಾಕಟಾಕ್ಷದಿಂದಾಗಿ ಹಾಗೂ ಅವರ ಆಪ್ತ ಸರ್ಕಾರಗಳಿಂದಾಗಿ, ಖಾಸಗೀಕರಣ, ವ್ಯಾಪಾರೀಕರಣದಿಂದಾಗಿ ಶಿಕ್ಷಣವು ಅತೀ ಹೆಚ್ಚು ಲಾಭಗಳಿಸುವ ಕ್ಷೇತ್ರವಾಗಿ ಇಂದು ವಿನಾಶದ ತುತ್ತ ತುದಿ ತಲುಪಿದೆ. ಎನ್.ಟಿ.ಎ ನ ಬೇಜವಾಬ್ದಾರಿತನ, ಅಪಾರದರ್ಶಕತೆಯು ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಬದುಕನ್ನು ಬಲಿಯಾಗಿಸಿತು. ಬಂಡವಾಳಶಾಹಿ ವ್ಯವಸ್ಥೆಯ ಲಕ್ಷಣಗಳಲ್ಲಿ ಒಂದಾದ ಭ್ರಷ್ಟಾಚಾರವು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿದೆ. ಎನ್‌ಟಿಎ 2 ನೇ ಪುಟಕ್ಕೆ




## ಕೇರಳ: ಎನ್‌ಇಪಿ–2020 ವಿರೋಧಿಸಿ ಎಐಡಿಎಸ್‌ಓ ಪ್ರತಿಭಟನೆ

ಜುಲೈ 1ರಂದು ತಿರುವನಂತಪುರದ ಮಹಿಳಾ ಕಾಲೇಜಿನಲ್ಲಿ ಎನ್‌ಇಪಿ–2020ರ ಭಾಗವಾಗಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಉದ್ಘಾಟಿಸಬೇಕಾಗಿದ್ದ 4 ವರ್ಷಗಳ ಪದವಿ ಕಾರ್ಯಕ್ರಮ(ಎಫ್‌ವೈಯುಪಿ)ದ ವಿರುದ್ಧ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಎಡರಂಗ ಸರ್ಕಾರದ ಈ ಕುತಂತ್ರದ ಕ್ರಮವನ್ನು ವಿದ್ಯಾರ್ಥಿ ಹೋರಾಟಗಾರರು ಬಯಲಿಗೆಳೆದದ್ದನ್ನು ಸಹಿಸದ ಪೊಲೀಸರು ಎಲ್ಲ ಪ್ರತಿಭಟನಾಕಾರರನ್ನು ಅಪ್ರಜಾತಾಂತ್ರಿಕವಾಗಿ ಬಂಧನಕ್ಕೊಳಪಡಿಸಿದರು. ■

## ನೀಟ್ ಹಾಗೂ ನೆಟ್ ಹಗರಣ...

1ನೇ ಪುಟದಿಂದ

ಕೇಂದ್ರೀಯ ಪರೀಕ್ಷೆಯು ಭ್ರಷ್ಟಾಚಾರವನ್ನು ಅಖಿಲ ಭಾರತ ಮಟ್ಟದಲ್ಲಿ ಸರ್ವವ್ಯಾಪಿಗೊಳಿಸಿತು. ಈ ಎರಡು ಪರೀಕ್ಷೆಗಳನ್ನು ಹೊರತುಪಡಿಸಿಯೂ ಎನ್‌ಟಿಎನ ಸಿ.ಯು.ಇ.ಟಿ ಯುಜಿ, ಪಿಜಿ ಪರೀಕ್ಷೆಗಳಲ್ಲಿಯೂ ನಡೆದ ಅನೇಕ ಲೋಪಗಳು ಪರೀಕ್ಷೆ ಬರೆದ ಹಲವಾರು ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲಿಗೆ ದೂಡಿದವು. ಆರ್‌ಎಸ್‌ಎಸ್‌ಗೆ ಸೇರಿದ್ದ ಯಾವ ವ್ಯಕ್ತಿ ಅಧಿಕಾರದಲ್ಲಿದ್ದಾಗ ಅಂದು ಮಧ್ಯಪ್ರದೇಶ ಹಾಗೂ ಛತ್ತೀಸಗಡದ ಶೈಕ್ಷಣಿಕ ವ್ಯವಸ್ಥೆಯಲ್ಲಿ ದೊಡ್ಡ ಹಗರಣಗಳು ನಡೆದಿದ್ದವೋ ಅದೇ ವ್ಯಕ್ತಿ ಇಂದು ಎನ್‌ಟಿಎ ಮುಖ್ಯಸ್ಥನಾಗಿರುವುದಲ್ಲದೆ ನೀಟ್ ಪರೀಕ್ಷಾ ಹಗರಣದ ತನಿಖಾ ಸಮಿತಿಯ ಅಧ್ಯಕ್ಷನೂ ಕೂಡ ಆಗಿದ್ದಾರೆ. ಇನ್ನು ನ್ಯಾಯ ಸಿಗಲು ಸಾಧ್ಯವೇ!

ಈಗ ಈ ಪರೀಕ್ಷೆಗಳನ್ನು ಕೇಂದ್ರಿಯವಾಗಿ ನಡೆಸುವ ಪ್ರಕ್ರಿಯೆ ನಿಲ್ಲಬೇಕು. ಸರ್ಕಾರವು ತನ್ನ ಹಸ್ತಕ್ಷೇಪವನ್ನು ನಿಲ್ಲಿಸಿ ಆಯಾ ಶೈಕ್ಷಣಿಕ ಸಂಸ್ಥೆಗಳಿಗೆ ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ವಹಿಸಬೇಕು. ನೀಟ್ ಹಾಗೂ ನೆಟ್ ಪರೀಕ್ಷೆಯ ಭ್ರಷ್ಟಾಚಾರದ ಬೇರುಗಳನ್ನು ಸಂಪೂರ್ಣವಾಗಿ ಪತ್ತೆ ಹಚ್ಚಿ, ಬುಡ ಸಮೇತ ಅವನ್ನು ಕಿತ್ತೊಗೆಯಬೇಕು. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಮರುರಚಿಸಿ ಅಧಿಕಾರ ವರ್ಗದೊಂದಿಗೆ ಅಪವಿತ್ರ ಮೈತ್ರಿ ಹೊಂದಿರುವ ಬೃಹತ್ ಕೋಚಿಂಗ್ ಕೇಂದ್ರಗಳನ್ನು ನಿಷ್ಕ್ರಿಯಗೊಳಿಸಿದಾಗಲೇ ಈ ಸಮಸ್ಯೆಗಳಿಗೆ ಪರಿಹಾರ ದೊರಕಲು ಸಾಧ್ಯ. ನೀಟ್ ಹಾಗೂ ನೆಟ್ ಪರೀಕ್ಷಾ ಹಗರಣಗಳು ಬಂಡವಾಳಶಾಹಿ ವ್ಯವಸ್ಥೆಯ ಸೇವೆಗೆಯ್ಯುತ್ತಿರುವ ಬಿಜೆಪಿಯ ಭ್ರಷ್ಟಾಚಾರದ ಅನಾವರಣದ ಮುನ್ನುಡಿಗಳಷ್ಟೇ. ಪರಿಸ್ಥಿತಿಯು ಹೀಗೆಯೇ ಮುಂದುವರೆದರೆ ಭವಿಷ್ಯತ್ತಿನಲ್ಲಿ ಇನ್ನಷ್ಟು ವಿರೂಪಗಳಿಗೆ ನಾವು ಸಾಕ್ಷಿಯಾಗುವುದು ಶತ:ಸಿದ್ಧ. ಆದ್ದರಿಂದಲೇ ದೇಶವ್ಯಾಪಿ ಶಿಕ್ಷಣ ಉಳಿಸಿ ಹೋರಾಟ ಬೆಳೆಸುವ ಅವಶ್ಯಕತೆ ಇಂದು ನಮ್ಮೆದುರಿದೆ. ■

## ಬಾಂಗ್ಲಾದೇಶದ ವಿಜಯ

1ನೇ ಪುಟದಿಂದ

ಜುಲೈ ಹತ್ಯಾಕಾಂಡದ ವಿಚಾರಣೆ ನಡೆಸಲು ಒಂದು ವಿಶೇಷ ಟ್ರಿಬ್ಯುನಲ್‌ನ್ನು ರಚಿಸಬೇಕು, ಸರ್ಕಾರದ ವೆಚ್ಚದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಬೇಕು, ಕಾಣೆಯಾಗಿರುವ ದೇಹಗಳನ್ನು ಅವರವರ ಕುಟುಂಬಗಳಿಗೆ ತಲುಪಿಸಬೇಕು, ಶೇಖ್ ಹಸೀನಾರನ್ನು ವಾಪಸ್ಸು ಕರೆತಂದು ವಿಚಾರಣೆಗೊಳಪಡಿಸಬೇಕು ಮತ್ತು ದೇಶದ ಆಡಳಿತದಲ್ಲಿ ಅವಶ್ಯಕ ಸುಧಾರಣೆಗಳನ್ನು ತರಬೇಕು.

ಪ್ರಸಕ್ತ ಸಂದರ್ಭದಲ್ಲಿ ಘಟಿಸುತ್ತಿರುವ ದೊಂಬಿ ಮತ್ತು ಲೂಟಿಯ ಘಟನಾವಳಿಗಳು ಪ್ರತಿಭಟನಾಕಾರರಿಂದ ನಡೆಯುತ್ತಿಲ್ಲ. ಅವಕ್ಕೆ ಕಾರಣ ಅವಕಾಶವಾದಿಗಳು. ಅಸಂಖ್ಯಾತ ಹುತಾತ್ಮರಿಂದ ಸ್ಫೂರ್ತಿ ಪಡೆದು ಹೋರಾಟಕ್ಕೆ ತಮ್ಮ ಜೀವವನ್ನು ಅರ್ಪಿಸಲು ಪ್ರತಿಭಟನಾಕಾರರು ಈ ಚಳುವಳಿಯನ್ನು ಸೇರಿದ್ದಾರೆ. ಅವಕಾಶವಾದಿಗಳ ಕೃತ್ಯಗಳನ್ನು ಅವರು ಪ್ರತಿರೋಧಿಸುತ್ತಿದ್ದಾರೆ. ಅಲ್ಪಸಂಖ್ಯಾತರ ಮನೆಗಳು ಮತ್ತು ಆಸ್ತಿಪಾಸ್ತಿಗಳನ್ನು ಕಾಯುವುದು ಅವರ ಜವಾಬ್ದಾರಿಯಾಗಿದೆ. ಹೋರಾಟ ನಿರತ ವಿದ್ಯಾರ್ಥಿ ನಾಯಕರು ಇದೇ ಕರೆಯನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಬಹಳ ಎಚ್ಚರಿಕೆಯಿಂದಿದ್ದು, ಸಾಮಾನ್ಯಜನರಿಗೆ ರಕ್ಷಣೆಯನ್ನು ಒದಗಿಸಬೇಕು ಎಂದು ನಾವು ಕರೆ ನೀಡುತ್ತೇವೆ.” ■

## ಜನರ ರಕ್ಷಣೆಗೆ ಬಾರದ ಆಧುನಿಕ ತಂತ್ರಜ್ಞಾನ!

ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಮಂತ್ರಿಮಂಡಲದ ಸಚಿವರು, ಭಾರತ ತಂತ್ರಜ್ಞಾನದ ಕ್ಷೇತ್ರದಲ್ಲಿ ಬೃಹತ್ ಸಾಧನೆಗಳನ್ನು ಮಾಡಿದೆ ಎಂದು ಹೇಳುತ್ತಾರೆ. ಅದಕ್ಕೆ ಉದಾಹರಣೆಯಾಗಿ, ಬಾಹ್ಯಾಕಾಶ ತಂತ್ರಜ್ಞಾನದ ಕ್ಷೇತ್ರದಲ್ಲಿ ದೇಶದ ಸಾಧನೆಗಳನ್ನು ಬಣ್ಣಿಸುತ್ತಾರೆ. ಚಂದ್ರನ ಮೇಲೆ ಯಶಸ್ವಿ ತಿರುಗಾಟ ನಡೆಸಿದ ಚಂದ್ರಯಾನ– 2 ಹಾಗೂ ಅದರ ತರುವಾಯ ನಡೆಸಿದ ಚಂದ್ರಯಾನ – 3 ರ ಕಾರ್ಯಾಚರಣೆಯನ್ನು ಅವರು ಅಂತಹ ಬೆಳವಣಿಗೆಗಳು ಎಂದು ವಿವರಿಸುತ್ತಾರೆ. ಮಂಗಳ ಗ್ರಹದ ಕಕ್ಷೆಯ ಮೇಲೆ ನಿಲುಗಡೆ ಸಾಧಿಸಿದ ಭಾರತದ ಮಂಗಳಯಾನ ಕಾರ್ಯಾಚರಣೆಯೂ ಇದೇ ಸಾಲಿಗೆ ಸೇರುತ್ತದೆ. ಈ ಕಾರ್ಯಾಚರಣೆಯು ಎಂಟು ವರ್ಷಗಳ ಕಾಲ ಮಂಗಳ ಗ್ರಹದ ಕಕ್ಷೆಯ ಸುತ್ತಲಿನ ಹಲವು ವೈಜ್ಞಾನಿಕ ದಾಖಲೆಗಳನ್ನು ಭೂಮಿಗೆ ರವಾನಿಸಿತು; ಕೇವಲ 6 ರಿಂದ 10 ತಿಂಗಳ ಕಾಲ ನಡೆಯಬಹುದು ಎಂದು ಭಾವಿಸಿದ್ದ ಈ ಕಾರ್ಯಾಚರಣೆ 8 ವರ್ಷಗಳ ಕಾಲ ನಡೆಯಿತು. ಬಾಹ್ಯಾಕಾಶದಲ್ಲಿ ಹಾರಾಡಲು ದೇಶದ ಮೊದಲ ಮಾನವ ನಿಯಂತ್ರಿತ ಬಾಹ್ಯಾಕಾಶ ನೌಕೆಗೆ ಈಗ ನಾಲ್ವರನ್ನು ಆಯ್ಕೆ ಮಾಡಲಾಗಿದೆ. ಸ್ಮಾರ್ಟ್ ಫೋನುಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ದೇಶ ಇದೀಗ, ವಿಶ್ವದಲ್ಲಿಯೇ ಸ್ಮಾರ್ಟ್ ಫೋನುಗಳನ್ನು ರಫ್ತು ಮಾಡುವ ದೇಶಗಳ ಪೈಕಿ ಎರಡನೇ ಸ್ಥಾನಕ್ಕೆ ತಲುಪಿದೆ, ಇಡೀ ವಿಶ್ವವೇ ಆಶ್ಚರ್ಯದಿಂದ ದೇಶದ ಕಡೆಗೆ ನೋಡುತ್ತಿದೆ ಎಂದು ಪ್ರಧಾನಿ ಉದ್ಘರಿಸಿದ್ದಾರೆ. MIRV ತಂತ್ರಜ್ಞಾನ ಹೊಂದಿರುವ, ಭಾರತದಲ್ಲಿಯೇ ತಯಾರಾದ ಕ್ಷಿಪಣಿಯ ಹಾರಾಟದ ಪ್ರಯೋಗ ಸಹ ಯಶಸ್ವಿಯಾಗಿದೆ ಎಂದು ಕಳೆದ ಮಾರ್ಚ್ ತಿಂಗಳಿನಲ್ಲಿ ಅವರು ಹೇಳಿದ್ದರು. 1983 ರಲ್ಲಿ ಪ್ರಾಂಭವಾದ ಅಣು ಬಾಂಬು ಹೊತ್ತು ಸಾಗಬಲ್ಲ ಕ್ಷಿಪಣಿ (ಅಗ್ನಿ) ಕಾರ್ಯವ್ಯಾಪ್ತಿಯಲ್ಲಿ ಇದು ಮಹತ್ವದ ಬೆಳವಣಿಗೆ. ಭಾರತ ಸ್ವಂತವಾಗಿ ತಯಾರಿಸಿದ MIRV ತಂತ್ರಜ್ಞಾದಿಂದ ಕೂಡಿದ, ಅಗ್ನಿ–5 ಕ್ಷಿಪಣಿಯ ಯಶಸ್ವಿ ಉಡಾವಣೆಯನ್ನು ತಮ್ಮ ಎಕ್ಸ್(X) ಖಾತೆಯಲ್ಲಿ ‘ಹೆಮ್ಮೆಯಿಂದ’ ಪ್ರಧಾನಿ ಹಂಚಿಕೊಂಡರು. ರಕ್ಷಣಾ ಸಚಿವ ರಾಜನಾಥ್‌ಸಿಂಗ್, ಕ್ಷಿಪಣಿ ತಂತ್ರಜ್ಞಾನ ಹೊಂದಿರುವ ಕೆಲವೇ ದೇಶಗಳ ಸಾಲಿಗೆ ಭಾರತ ಸೇರಿದೆ ಎಂದು ತಮ್ಮ ಎಕ್ಸ್(X) ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಆದರೆ, ಈ ಎಲ್ಲ ಸಾಧನೆಗಳ ನಡುವೆಯೂ, ಕೊಂಚ ಪ್ರವಾಹದ ಹರಿವು ಹೆಚ್ಚಾದಂತೆಲ್ಲ ನದಿ ಮತ್ತು ಕಡಲ ತೀರಗಳು ಕೊಚ್ಚಿ ಹೋಗುವುದು ಮಾತ್ರ ಅಚ್ಚರಿಯ ವಿಷಯವಾಗಿದೆ! ಅದರಲ್ಲೂ ಈ ತೀರದಲ್ಲಿ ವಾಸಿಸುವ ಬಡಜನರ ಮನೆಗಳು ಒಂದು ಜೋರು ಮಳೆ, ಬಿರುಗಾಳಿಗೆ ಕುಸಿಯುತ್ತವೆ. ಜೊತೆಗೆ, ಆಗಾಗ ಘಟಿಸುತ್ತಿರುವ ಭೀಕರ ರೈಲು ಅಪಘಾತಗಳು ನೂರಾರು ಜನರನ್ನು ಬಲಿ ತೆಗೆದುಕೊಳ್ಳುವುದರೊಂದಿಗೆ ಸಹಸ್ರಾರು ಜನರನ್ನು ಅಂಗವೈಕಲ್ಯತೆಗೆ ಗುರಿ ಮಾಡುತ್ತವೆ. ಇಲ್ಲಿ ಮೂಡುವ ಪ್ರಶ್ನೆಯೆಂದರೆ, ಈ ವಿನಾಶವನ್ನು ತಡೆಯಲು, ಬಾಹ್ಯಾಕಾಶ ಕ್ಷೇತ್ರದಲ್ಲಿ, ಮಿಲಿಟರಿ ತಂತ್ರಜ್ಞಾನದ ವಿಷಯದಲ್ಲಿ ಅಭೂತಪೂರ್ವ ಸಾಧನೆಗೈದಿರುವ ತಂತ್ರಜ್ಞರಿಗೆ, ವಿಜ್ಞಾನಿಗಳಿಗೆ ಸಾಧ್ಯವಾಗುತ್ತಿಲ್ಲವೇ? ಅಥವಾ ನದಿಗಳ ಹಾಗೂ ಕಡಲ ತೀರದಲ್ಲಿ ವಾಸಿಸುವ ಬಡಜನರ ಜೀವ ಉಳಿಸುವುದಕ್ಕಿಂತ, ರೈಲು ಸುರಕ್ಷತೆಗಿಂತ ಆ ಎರಡು ಕ್ಷೇತ್ರಗಳಲ್ಲಿ ಸಾಧನೆ ಮಾಡುವುದೊಂದೇ ವೈಜ್ಞಾನಿಕ ಬೆಳವಣಿಗೆ ಎಂದು ಸರ್ಕಾರ ನಂಬಿದೆಯೇ? ಅಣೆಕಟ್ಟುಗಳಲ್ಲಿ, ನದಿಗಳಲ್ಲಿ ಕಾಲಕಾಲಕ್ಕೆ ಹೂಳೆತ್ತುವ ಮೂಲಕ ಈ ಪ್ರವಾಹಗಳನ್ನು ತಡೆಯಬಹುದು. ಹೂಳೆತ್ತುವ ಪ್ರಕ್ರಿಯೆಯನ್ನು 20ನೇ ಶತಮಾನದ ಆರಂಭದಲ್ಲಿಯೇ ಕಂಡು ಹಿಡಿಯಲಾಗಿತ್ತು. ಆದರೆ ನಮ್ಮ ಸರ್ಕಾರಗಳು ಈ ‘ಪ್ರಾಚೀನ’ ವೈಜ್ಞಾನಿಕ ಆವಿಷ್ಕಾರಗಳಿಗಿಂತ ಬಹಳ ಮುಂದುವರೆದಿವೆ. ಇಂದಿನ ವೈಜ್ಞಾನಿಕ ಬೆಳವಣಿಗೆಯ ಮೂಲಕ ಇಂತಹ ಕೌಶಲ್ಯಗಳನ್ನು ಬಳಸಿ ಅವನ್ನು ಮತ್ತಷ್ಟು ಜನರ ಏಳಿಗೆಗೆ ಬಳಸಬಹುದು ಎಂಬುದನ್ನು ಸರ್ಕಾರಗಳು ಮರೆತಿವೆ. ಅಷ್ಟಲ್ಲದೆ, ಆಧುನಿಕ ತಂತ್ರಜ್ಞಾನ ಬಳಸಿ ರೈಲು ಅಪಘಾತಗಳನ್ನು ಖಂಡಿತವಾಗಿಯೇ ತಪ್ಪಿಸಬಹುದು. ಆದರೆ, ಈ ಬಗ್ಗೆ ಸರ್ಕಾರದ ದಿವ್ಯ ನಿರ್ಲಕ್ಷ್ಯ ಕಣ್ಣು ಕುಕ್ಕುವಂತಿದೆ. ಆದ್ದರಿಂದಲೇ ನಮ್ಮ ದೇಶದಲ್ಲಿ ಕಾಲಕಾಲಕ್ಕೆ ಬಂದೆರಗುವ ಪ್ರವಾಹಗಳು, ರೈಲು ಅವಘಡಗಳು ಬಹುತೇಕ ಮಾನವ ನಿರ್ಮಿತ ಎಂದರೆ ತಪ್ಪಾದೀತೇ? ಲಕ್ಷಾಂತರ ದೇಶವಾಸಿಗಳ, ಅದರಲ್ಲೂ ಬಡವರ ಬದುಕನ್ನು ಕಾಪಾಡಲು ಸಹಾಯಕ್ಕೆ ಬಾರದೆ ಕೇವಲ ಕ್ಷಿಪಣಿಗಳನ್ನು, ರಾಕೆಟ್‌ಗಳನ್ನು ಉಡಾವಣೆ ಗೊಳಿಸುವುದಕ್ಕಷ್ಟೇ ಸೀಮಿತವಾಗಿರುವ ವೈಜ್ಞಾನಿಕ ತಂತ್ರಜ್ಞಾನವನ್ನು ನಾವು ಬೆಳವಣಿಗೆ ಎಂದು ಕರೆಯಬೇಕೇ ಅಥವಾ ಇದನ್ನು ಜನರಿಗಾಗಿ ಬಳಸದ ಸರ್ಕಾರದ ತೀವ್ರ ವೈಫಲ್ಯ ಎಂದು ಪರಿಗಣಿಸಬೇಕೇ ಎಂಬುದೇ ಈಗ ನಮ್ಮ ಮುಂದಿರುವ ಮೂಲಭೂತ ಪ್ರಶ್ನೆ!

## ವಯನಾಡ್ ಭೂಕುಸಿತ ದುರಂತಕ್ಕೆ ಎಸ್‌ಯುಸಿಐ(ಸಿ) ಸಂತಾಪ

**[ಜುಲೈ 29ರ ಮಧ್ಯರಾತ್ರಿ ವಯನಾಡಿನಲ್ಲಿ ಘಟಿಸಿದ ವಿನಾಶಕಾರಿ ದುರಂತದ ಬಗ್ಗೆ ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ.ಉಮಾ ಈ ಕೆಳಗಿನ ಹೇಳಿಕೆಯನ್ನು ನೀಡಿದರು.]**

“ಕೇರಳ ರಾಜ್ಯದ ವಯನಾಡ್ ಜಿಲ್ಲೆಯಲ್ಲಿ ಜುಲೈ 29ರ ಮಧ್ಯರಾತ್ರಿ ಸಂಭವಿಸಿದ ದುರಂತ ಘಟನೆಯಲ್ಲಿ ನೂರಾರು ಜನರ ಪ್ರಾಣಹಾನಿ ಮತ್ತು ಅಪಾರ ಆಸ್ತಿಪಾಸ್ತಿ ನಷ್ಟವಾಗಿದ್ದು, ಈ ಬಗ್ಗೆ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಕರ್ನಾಟಕ ರಾಜ್ಯ ಸಮಿತಿಯು ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಈ ಪ್ರಕೃತಿ ವಿಕೋಪದಲ್ಲಿ ಸಿಲುಕಿರುವ ಜನರನ್ನು ರಕ್ಷಿಸಲು, ಎಲ್ಲಾ ರೀತಿಯ ನೆರವು ಮತ್ತು ಪುನರ್ವಸತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಕ್ಷಣ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಪಕ್ಷವು ಒತ್ತಾಯಿಸುತ್ತದೆ. ಅಲ್ಲದೆ ಈ ವಿಪತ್ತಿಗೆ ಪಶ್ಚಿಮ ಘಟ್ಟಗಳ ಅನಿಬರ್ಂಧಿತ ಅರಣ್ಯ ನಾಶವೇ ಕಾರಣ ಎಂದು ಪರಿಸರ ತಜ್ಞರು ಹೇಳಿರುವುದನ್ನು ಗಂಭೀರವಾಗಿ ಪರಿಗಣಿಸಿ ಭವಿಷ್ಯದಲ್ಲಿ ಅರಣ್ಯ ನಾಶದ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಹಾಗೂ ಇಂತಹ ಘಟನೆಗಳು ನಡೆಯದಂತೆ ವೈಜ್ಞಾನಿಕ ವಿಧಾನಗಳನ್ನು ಬಳಸಿ ವಿಪತ್ತು ಪೀಡಿತ ಪ್ರದೇಶಗಳನ್ನು ಗುರುತಿಸಲು ಸರ್ಕಾರ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಪಕ್ಷವು ಒತ್ತಾಯಿಸುತ್ತದೆ.”

### ನಿರಂಕುಶ ಬಾಂಗ್ಲಾ ಸರ್ಕಾರದಿಂದ ವಿದ್ಯಾರ್ಥಿಗಳ ಮೇಲಿನ ಕ್ರೂರ ದಾಳಿ

## ಎಐಡಿಎಸ್‌ಓ – ಎಐಡಿವೈಓ ಖಂಡನೆ

ಸರ್ಕಾರಿ ಉದ್ಯೋಗಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಸ್ಥರಿಗೆ ಮೀಸಲಾತಿ ಹೆಚ್ಚಿಸುವ ಹಳೆಯ, ಅಪ್ರಸ್ತುತ ಕೋಟಾ ವ್ಯವಸ್ಥೆಯ ವಿರುದ್ಧ “ಮೆರಿಟ್ ಇರಲಿ–ಕೋಟಾ ತೊಲಗಲಿ” ಎಂಬ ನೈಜವಾದ ಹಾಗೂ ಅನೇಕ ಬುದ್ಧಿಜೀವಿಗಳು, ಶಿಕ್ಷಣ ತಜ್ಞರು ಮತ್ತು ಪ್ರಮುಖ ವ್ಯಕ್ತಿಗಳು ಬೆಂಬಲಿಸಿರುವ ಚಳುವಳಿಯು ಬಾಂಗ್ಲಾದೇಶದಾದ್ಯಂತ ಹರಡಿತ್ತು. ಸರ್ಕಾರವು ಈ ಆಂದೋಲನವನ್ನು ರಾಷ್ಟ್ರವಿರೋಧಿ ಎಂದು ಹೇಳಿ ಚಳುವಳಿಗಾರರನ್ನು ಯಾವುದೇ ಮಾತುಕತೆಗೆ ಕರೆಯದೆ, ಬದಲಾಗಿ ಅವರ ಮೇಲೆ ಛಾತ್ರ ಲೀಗ್ ಗೂಂಡಾಗಳನ್ನು ಬಿಟ್ಟು ನಡೆಸಿದ ದಾಳಿಯಲ್ಲಿ ನೂರಾರು ಮಂದಿ ಸಾವನ್ನಪ್ಪಿದ್ದಾರೆ ಮತ್ತು 1000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದು ಅತ್ಯಂತ ಖಂಡನೀಯವಾಗಿದ್ದು, ಇಡೀ ವಿಶ್ವದ ವಿದ್ಯಾರ್ಥಿಗಳು ಮತ್ತು ಯುವಜನರನ್ನು ಆಘಾತಕ್ಕೀಡುಮಾಡಿದೆ. ಜೊತೆಗೆ, ಸರ್ಕಾರವು ಪ್ರತಿಭಟನಾಕಾರರ ಬಗ್ಗೆ ಸಾರ್ವಜನಿಕರಲ್ಲಿ ದ್ವೇಷ ಮತ್ತು ಹಗೆತನವನ್ನು ಸೃಷ್ಟಿಸಲು ಪ್ರಯತ್ನಿಸಿದೆ. ಇದು ಫ್ಯಾಸಿಸ್ಟ್ ಆಕ್ರಮಣವಲ್ಲದೇ ಮತ್ತೇನೂ ಅಲ್ಲ.

ಬಾಂಗ್ಲಾದೇಶದ ಧೈರ್ಯಶಾಲಿ ವಿದ್ಯಾರ್ಥಿಗಳ ಹೋರಾಟದೊಂದಿಗೆ ನಮ್ಮ ಪಕ್ಷದ ಮುಂದಳಗಳಾದ ಎಐಡಿಎಸ್‌ಓ ಮತ್ತು ಎಐಡಿವೈಓ ಐಕ್ಯತೆಯನ್ನು ವ್ಯಕ್ತಪಡಿಸುತ್ತಾ ಅವರನ್ನು ಅಭಿನಂದಿಸುತ್ತವೆ. ಹಾಗೂ ಬಾಂಗ್ಲಾದೇಶದ ಸರ್ಕಾರದ ಫ್ಯಾಸಿಸ್ಟ್ ದಾಳಿಯನ್ನು ಬಲವಾಗಿ ಖಂಡಿಸುತ್ತವೆ.

ಈಗಂತೂ ಶೇಖ್ ಹಸೀನಾ ಮತ್ತವರ ಸರ್ಕಾರವು ದೇಶದಿಂದ ಕಾಲ್ತೆಗೆದ ನಂತರ, ಹೊಸ ಮಧ್ಯಂತರ ಸರ್ಕಾರವು ಅಸ್ತಿತ್ವಕ್ಕೆ ಬಂದಿರುವ ಈ ಸಂದರ್ಭದಲ್ಲಿ, ಪೂರ್ಣವಾಗಿ ಜನತಾಂತ್ರಿಕ ವ್ಯವಸ್ಥೆಯು ರೂಪುಗೊಳ್ಳುವವರೆಗೂ, ಆ ದೇಶದ ಜನತೆ ನಡೆಸುತ್ತಿರುವ ಜನತಂತ್ರಕ್ಕಾಗಿಯ ನ್ಯಾಯಯುತ ಬೇಡಿಕೆಗಳು ಈಡೇರುವವರೆಗೂ ಅಲ್ಲಿ ವಿದ್ಯಾರ್ಥಿ–ಯುವಜನರು ಎಚ್ಚರಿಕೆಯಿಂದ ಇರಬೇಕು ಎಂದು ಕರೆ ನೀಡುತ್ತವೆ. ■

# ಎಐಯುಟಿಯುಸಿ ನೇತೃತ್ವದಲ್ಲಿ ಹರಗಿನಡೋಣಿಯ ಟಿಬಿಎ ಗಣಿ ಕಾರ್ಮಿಕರ ಪ್ರತಿಭಟನೆ




ಜುಲೈ 12ರಂದು ಹರಗಿನಡೋಣಿಯ ಟಿಬಿಎ (ಟಿಫಿನ್ಸ್ ಬ್ಯಾರೆಟಿಸ್ ಅಸಬೆಸ್ಟಾಸ್) ಗಣಿ ಕಾರ್ಮಿಕರಿಗಾಗಿರುವ ಸಂಕಷ್ಟವನ್ನು ವಿರೋಧಿಸಿ ಹಾಗೂ ಅವರಿಗೆ ದೊರೆಯಬೇಕಾದ ಕಾನೂನಾತ್ಮಕ ಸೌಲಭ್ಯಗಳಿಗಾಗಿ ಆಗ್ರಹಿಸಿ ಎಐಯುಟಿಯುಸಿಗೆ ಸಂಯೋಜನೆಗೊಂಡಿರುವ ಸಂಯುಕ್ತ ಗಣಿ ಕಾರ್ಮಿಕರ ಸಂಘದಿಂದ ಜಿಲ್ಲಾಧಿಕಾರಿಗಳ ಕಛೇರಿಯ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಐಯುಟಿಯುಸಿ ರಾಜ್ಯ ಅಧ್ಯಕ್ಷರು ಹಾಗೂ ಸಂಯುಕ್ತ ಗಣಿ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್ ಮಾತನಾಡಿದರು. ಗಣಿ ಕಾರ್ಮಿಕರ ಸಂಘವು, ನಿವೃತ್ತಿ ಹೊಂದಿರುವ ಗಣಿ ಕಾರ್ಮಿಕರಿಗೆ ಗ್ರಾಚ್ಯುಟಿ ಪಾವತಿಸಬೇಕು. ಬಾಕಿಯಿರುವ ವೇತನ, ಬೋನಸ್ ಪಾವತಿಸಬೇಕು, ಸದ್ಯ ಇರುವ ಕಾರ್ಮಿಕರಿಗೆ, ಹೊಸದಾಗಿ ಗುತ್ತಿಗೆ ನವೀಕರಣಗೊಂಡ ಗಣಿಯಲ್ಲಿ ಕೆಲಸ ನೀಡಬೇಕು, ಟಿ.ಬಿ.ಎ ಪ್ರೈ ಲಿ ಹಳೆಯ ಗಣಿಯು ನೀಡಬೇಕಾದ ಗ್ರಾಚ್ಯುಟಿ, ಬಾಕಿ ವೇತನ ಹಾಗೂ ಬೋನಸ್ ನೀಡಬೇಕು ಮತ್ತು 2014ರಿಂದ ಬಾಕಿಯಿರುವ ಪಿಎಫ್ (ಭವಿಷ್ಯ ನಿಧಿ) ಹಣವನ್ನು ಪಾವತಿಸಬೇಕು ಎಂದು ಹೋರಾಟವನ್ನು ನಡೆಸುತ್ತಿದೆ. ■

# ಕ್ಷಯರೋಗದ ಔಷಧಿಗಳ ತೀವ್ರ ಕೊರತೆ: ಆತಂಕಕಾರಿ ಬೆಳವಣಿಗೆ

ಒಂದೂವರೆ ತಿಂಗಳುಗಳ ಕಾಲ ನಡೆದು ಇತ್ತೀಚೆಗೆ ಮುಗಿದ 7 ಹಂತಗಳ ಲೋಕಸಭಾ ಚುನಾವಣೆಯು, ಟಿಬಿ(ಕ್ಷಯರೋಗ) ಔಷಧಿಗಳ ಅಸಮರ್ಪಕ ಪೂರೈಕೆಯಿಂದ ಲಕ್ಷಾಂತರ ಟಿಬಿ ಕಾಯಿಲೆ ರೋಗಿಗಳ, ಮತ್ತವರ ಮನೆಯವರ ಸಂಕಟವನ್ನೇ ಮುಚ್ಚಿ ಹಾಕಿಬಿಟ್ಟಿತ್ತು. ಈ ಸಮಸ್ಯೆಯು ಈಗ ಅದೆಂತಹ ವಿಕೋಪಕ್ಕೆ ತಲುಪಿದೆಯೆಂದರೆ, ದೇಶದಲ್ಲಿ ಟಿಬಿ ಮಾತ್ರೆಗಳು ಸೀಮಿತ ಪ್ರಮಾಣದಲ್ಲಿ ಮಾತ್ರ ದೊರಕುತ್ತಿವೆ. ಎಲ್ಲರಿಗೂ ತಿಳಿದಿರುವಂತೆ, ತಪ್ಪದೆ ಮತ್ತು ನಿಯಮಿತವಾಗಿ ಟಿಬಿ ಔಷಧಿಗಳನ್ನು ತೆಗೆದುಕೊಳ್ಳುವುದು ಬಹುಮುಖ್ಯವಾದ ಪದ್ಧತಿ. ಅನಿಯಮಿತ ಸೇವನೆಯು, ಔಷಧ–ನಿರೋಧಕ ಕ್ರಿಮಿಗಳ ಬೆಳವಣಿಗೆಗೆ ಸಹಕಾರಿಯಾಗಿ, ಔಷಧಗಳು ನಿಷ್ಪ್ರಯೋಜಕವಾಗುತ್ತವೆ, ರೋಗಿಯೂ ಸಹ, ಭೀಕರ ಪರಿಸ್ಥಿತಿಗೆ ತಳ್ಳಲ್ಪಡುತ್ತಾನೆ.

ಇದರ ಜೊತೆಗೆ ಮತ್ತೊಂದು ಆತಂಕಕಾರಿ ಬೆಳವಣಿಗೆಯೆಂದರೆ, ಬಹು ಔಷಧಿ ನಿರೋಧಕ (ಮಲ್ಟಿ ಡ್ರಗ್ ರೆಸಿಸ್ಟಂಟ್) ಟಿಬಿಗೂ ಸಹ ಮಾತ್ರೆಗಳ ಕೊರತೆಯುಂಟಾಗಿದೆ. ಈ ಔಷಧಿಗಳೂ ಈಗ ಸ್ಟಾಕಿನಲ್ಲಿ ಇಲ್ಲವೆಂಬುದು ತಿಳಿದುಬಂದಿದೆ. ನೈಸರ್ಗಿಕ ವಿಕೋಪಗಳಲ್ಲಿ ವೈದ್ಯಕೀಯ ಸೇವೆ ಒದಗಿಸುವ, ಜನಸಾಮಾನ್ಯರ ಆರೋಗ್ಯ ರಕ್ಷಣೆಗೆ ಕಂಕಣಬದ್ಧವಾದ, ಒಂದು ರಾಷ್ಟ್ರಮಟ್ಟದ ಸ್ವಯಂಸೇವಕ ಸಂಘಟನೆಯಾದ ಮೆಡಿಕಲ್ ಸರ್ವಿಸ್ ಸೆಂಟರ್ ಒಳಗೊಂಡಂತೆ ಇತರೆ ಸಂಘ ಸಂಸ್ಥೆಗಳ, ನಾಗರಿಕರ ದೀರ್ಘಕಾಲದ ಪ್ರತಿಭಟನೆಯ ನಂತರವೂ, ಸರ್ಕಾರ ಇಂತಹ ಅಪಾಯಕಾರಿ ಸನ್ನಿವೇಶವನ್ನೆದುರಿಸಲು, ಸರಿಯಾದ ಕ್ರಮಗಳನ್ನು ಈವರೆಗೂ ತೆಗೆದುಕೊಂಡಿಲ್ಲವೆಂಬುದು ಬಹಳ ಕಳವಳಕಾರಿಯಾಗಿದೆ.

ವಿಶ್ವ ಟಿಬಿ ದಿನ(24 ಮಾರ್ಚ್ 2024)ದ ಅಂಗವಾಗಿ "ಹೌದು! ನಾವು ಟಿಬಿಯನ್ನು ಮುಕ್ತಗೊಳಿಸಬಹುದು" ಎನ್ನುವ ಘೋಷವಾಕ್ಯವನ್ನು ಬಳಸಿ ಸರ್ಕಾರ ಸಂಭ್ರಮಾಚರಣೆಯಲ್ಲಿ ತೊಡಗಿದ್ದು ದೊಡ್ಡ ವಿಪರ್ಯಾಸದಂತೆ ಕಾಣಿಸುತ್ತಿದೆ. ಟಿಬಿ ರೋಗಿಗಳು, ಮತ್ತವರ ಕುಟುಂಬದವರ ಜೊತೆಯಲ್ಲಿ ಅದೊಂದು ಕ್ರೂರ ವಿಡಂಬನೆಯಾಗಿ ಕಾಣಿಸುತ್ತಿದೆ! ಗುಣಪಡಿಸಬಹುದಾದ ರೋಗವನ್ನು ಒಂದು ಸಾರ್ವಜನಿಕ ಆರೋಗ್ಯ ಸಮಸ್ಯೆಯನ್ನಾಗಿ ಮಾಡಿದ್ದು ಸರ್ಕಾರ ಮತ್ತು ಅಧಿಕಾರಶಾಹಿಗಳ ಪಾತಕಿ ಅಪರಾಧವೆಂದರೆ ತಪ್ಪಲ್ಲ. ರಾಜ್ಯ ಮತ್ತು ಜಿಲ್ಲಾ ಟಿಬಿ ಅಧಿಕಾರಿಗಳಿಗೆ, ಸರ್ಕಾರ, ಅದು ಹೇಗೊ ಒಂದಿಷ್ಟು ಟಿಬಿ ಔಷಧಿಗಳನ್ನು ತರಿಸಿಕೊಳ್ಳಿ ಎಂದು ಅತ್ಯಲ್ಪ ಹಣವನ್ನು ಬಿಡುಗಡೆ ಮಾಡುವುದು, ಸಮಸ್ಯೆಯ ಗಂಭೀರತೆಯ ಬಗ್ಗೆ ಅದರ ನಿಷ್ಕಾಳಜಿಯ ಮನೋಭಾವವನ್ನು ಎತ್ತಿ ತೋರಿಸುತ್ತದೆ. ಪ್ರಪಂಚದಲ್ಲೇ ಅತಿ ಹೆಚ್ಚು ಟಿಬಿ ರೋಗಿಗಳು ಇರುವ ದೇಶದಲ್ಲಿ, ಈ ಬಗೆಯ ಸರ್ಕಾರದ ಇಂತಹ ಪಾತಕಿ ನಿರ್ಲಕ್ಷ್ಯ ಧೋರಣೆಯನ್ನು ಕಟುವಾಗಿ ಪ್ರತಿಭಟಿಸಬೇಕಾಗಿದೆ. ಎಲ್ಲ ವರ್ಗದ ಆರೋಗ್ಯ ಸಿಬ್ಬಂದಿಗಳು, ಬದುಕಿನ ಎಲ್ಲ ರಂಗಗಳ ಪ್ರಜ್ಞಾವಂತ ನಾಗರಿಕರು, ಸಮರ್ಪಕವಾದ ಔಷಧಿಗಳು ದೊರಕದೆ, ಟಿಬಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಪರವಾಗಿ ದೇಶದಾದ್ಯಂತ ಆರೋಗ್ಯ ಚಳುವಳಿಯನ್ನು ಕಟ್ಟಿ, ಸರಿಯಾದ ಪ್ರಮಾಣದಲ್ಲಿ ಟಿಬಿ ಮಾತ್ರೆಗಳು ದೊರಕುವಂತೆ ಸರ್ಕಾರವನ್ನು ಒತ್ತಾಯಿಸಬೇಕಿದೆ. ■

# ಕೀನ್ಯಾ ಜನತೆಯ ಧೀರೋದಾತ್ತ ಹೋರಾಟಕ್ಕೊಂದು ಸಲಾಂ!

ಆಫ್ರಿಕಾ ಖಂಡದ ದೇಶ ಕೆನ್ಯಾದಲ್ಲಿ ಜನ ಹೋರಾಟಗಳು ಭುಗಿಲೇಳುತ್ತಿವೆ. 2024ರ ಜೂನ್ ಕೊನೆಯ ವಾರದಿಂದ ದೇಶದ ರಾಜಧಾನಿ ನೈರೋಬಿಯನ್ನೂ ಒಳಗೊಂಡಂತೆ ಎಲ್ಲೆಡೆಗಳಲ್ಲೂ, ಸರ್ಕಾರ ತಮ್ಮ ಮೇಲೆ ಹೇರಿರುವ ಹೊಸ ತೆರಿಗೆಗಳ ಪ್ರಸ್ತಾಪದ ಮಸೂದೆಯ ವಿರುದ್ಧ ಜನ ಬೀದಿಗಿಳಿದಿದ್ದಾರೆ. ದೇಶದ ಮೇಲೆ 8000 ಕೋಟಿ ಡಾಲರ್‌ಗಳಷ್ಟು ಸಾಲವಿದ್ದು, ಅದು ಒಂದು ವರ್ಷದಲ್ಲಿ ತೆರಿಗೆಗಳಿಂದ ಪಡೆಯುವ ಆದಾಯದ ಅರ್ಧಕ್ಕಿಂತ ಹೆಚ್ಚು! ಹಾಗಾಗಿ, ತೆರಿಗೆ ಹೆಚ್ಚಳ ಅವಶ್ಯಕವೆಂದ ಸರ್ಕಾರ 270 ಕೋಟಿ ಡಾಲರ್‌ಗಳಷ್ಟು ಹೆಚ್ಚಿನ ತೆರಿಗೆ ವಿಧಿಸಿದೆ. 2022ರಲ್ಲಿ ಅಧ್ಯಕ್ಷ ವಿಲಿಯಂ ರುಟೊ ಅಧಿಕಾರಕ್ಕೆ ಬಂದಾಗಲಿನಿಂದ, ವೇತನ ಮತ್ತು ಇಂಧನಗಳೂ ಸೇರಿದಂತೆ ಎಲ್ಲಾ ವಸ್ತುಗಳ ಮೇಲಿನ ತೆರಿಗೆಯ ಭಾರ ಹೆಚ್ಚುತ್ತಲೇ ಸಾಗಿದೆ. ಜೊತೆಗೆ, ಈ ಸರ್ಕಾರ, ಬಡವರಿಗೆ ಮನೆ ಕಟ್ಟಿಸಿಕೊಡುವ ಹೆಸರಿನಲ್ಲಿ ಜನರ ತಿಂಗಳ ವೇತನದ ಮೇಲೆ ಶೇ.1.5 ತೆರಿಗೆ ವಿಧಿಸಿರುವ ಜೊತೆಗೆ ಆರೋಗ್ಯ ವಿಮೆ ತೆರಿಗೆಯನ್ನೂ ಅವರ ಮೇಲೆ ಹೊರೆಸಿದೆ.

### ಹೆಚ್ಚುತ್ತಿರುವ ಅಸಮಾನತೆ!

ಜನರು ಭ್ರಷ್ಟಾಚಾರದಿಂದ ರೋಸಿ ಹೋಗಿದ್ದು, ಹಣ ಪೋಲು ಆಗುತ್ತಿರುವುದ್ದರ ವಿರುದ್ಧ ಧ್ವನಿ ಎತ್ತಿದ್ದಾರೆ. ತಾನು ಬಡವರ ಬಂಧು ಎಂದು ಘೋಷಿಸಿ ಆಧಿಕಾರಕ್ಕೆ ಬಂದ ರುಟೊ, ಅದಾಗಲೇ ಹಣದುಬ್ಬರದಿಂದ ತತ್ತರಿಸುತ್ತಿರುವ ಜನರ ಜೀವನವನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಿದ್ದಾರೆ. ಈಗ ನಡೆಯುತ್ತಿರುವ ಪ್ರತಿಭಟನೆಗಳು, ಈ ಹಿಂದೆ, ರಾಜಕಾರಣಿಗಳು ಸಂಘಟಿಸಿದ್ದಂತಹ ಜನಾಂಗೀಯ ಪ್ರತಿಭಟನೆಗಳಿಂದ ಸಂಪೂರ್ಣವಾಗಿ ಭಿನ್ನವಾಗಿದ್ದು, ಇಲ್ಲಿ ಎಲ್ಲಾ ಸಮುದಾಯಗಳ ಜನರು ಆರ್ಥಿಕ ಬೇಡಿಕೆಗಳಿಗಾಗಿ ಒಂದಾಗಿದ್ದಾರೆ. ಮೊದಲಿಗೆ, ಪ್ರತಿಭಟನೆಗಳು ಬಹುತೇಕವಾಗಿ ಶಾಂತಿಯುತವಾಗಿಯೇ ಇದ್ದವು; ಆದರೆ, ಕೆಲವು ಪ್ರತಿಭಟನಕಾರರು ಸಂಸತ್ತಿಗೆ ನುಗ್ಗಲು ಪ್ರಯತ್ನಿಸಿದಾಗ, ಪೊಲೀಸರು ಅವರ ಮೇಲೆ ಗುಂಡಿನ ಸುರಿಮಳೆಗೈದಾಗ 22 ಜನರು ಗುಂಡೇಟಿನಿಂದ ಸತ್ತು, ನೂರಾರು ಜನರು ಗಾಯಗೊಂಡಿದ್ದಾರೆ; 'ನ್ಯಾಯಯುತ' ಪ್ರತಿಭಟನೆಗಳಲ್ಲಿ ಸಂಘಟಿತ ಪಾತಕಿಗಳು ಸೇರಿಕೊಂಡದ್ದೇ ಈ ರಕ್ತಪಾತಕ್ಕೆ ಕಾರಣ ಎಂದು ಅಧ್ಯಕ್ಷ ರುಟೊ ಹೇಳಿ, ದಿನೇದಿನೇ ಹೆಚ್ಚುತ್ತಿರುವ ಜನಾಂದೋಲನವನ್ನು ಹತ್ತಿಕ್ಕಲು ಪ್ರಯತ್ನಿಸಿದ್ದಾರೆ. ಆದರೆ, ಪ್ರತಿಭಟನೆಯ ನೇತೃತ್ವದಲ್ಲಿರುವ ನಾಯಕರು,

**ಪ್ರತಿಭಟನೆಯ ಒತ್ತಡಕ್ಕೆ ಮಣಿದು ಸಂಸತ್ತಿನಲ್ಲಿ ಮಂಡಿಸಿದ ಮಸೂದೆಯನ್ನು ಅಧ್ಯಕ್ಷ ರುಟೊ ಜೂನ್ 26 ರಂದು ಹಿಂಪಡೆದರೂ, ಜನರ ಆಕ್ರೋಶ ತಣಿದಿಲ್ಲ. ಜೂನ್ 28ರಂದು ಹೋರಾಟದ ನಾಯಕರು ರುಟೊ ರಾಜಿನಾಮೆಗೆ ಒತ್ತಾಯಿಸಿ ಪ್ರತಿಭಟನೆಗಳಿಗೆ, ಮುಷ್ಕರಗಳಿಗೆ, ಧರಣಿಗಳಿಗೆ ಕರೆ ನೀಡಿದರು.**

ಜನರ ಆಸ್ತಿಯನ್ನು ನಾಶ ಮಾಡಲು, ಲೂಟಿ ಹೊಡೆಯಲು, ನ್ಯಾಯಯುತ ಪ್ರತಿಭಟನೆಗೆ ಮಸಿ ಬಳೆಯಲು, ಸರ್ಕಾರವೇ ಗೂಂಡಾಗಳನ್ನು ಬಳಸಿದೆ ಎಂದು ಆರೋಪಿಸಿದ್ದಾರೆ. "ನೀವು ನಮ್ಮೆಲ್ಲರನ್ನೂ ಕೊಲ್ಲಲಾರಿರಿ" ಎಂದು ಪ್ರತಿಭಟನಕಾರರು ಹೇಳಿದರು; "ನಿಮ್ಮೊಂದಿಗೆ ನಾವು ಯಾವುದೇ ರಾಜಿಯನ್ನೂ ಮಾಡಿಕೊಳ್ಳುವುದಿಲ್ಲ. ನಮಗೆ ಒಳ್ಳೆಯ ಜೀವನ ಬೇಕು. ನಮ್ಮ ಸಂಪನ್ಮೂಲಗಳನ್ನು ಬಳಸಿಕೊಂಡ ರಾಜಕೀಯ ನಾಯಕರು ಐಷಾರಾಮದ ಬದುಕನ್ನು ನಡೆಸುತ್ತಿರುವುದು ನಿಲ್ಲಬೇಕು.... ಈಗ ನಮ್ಮ ಮುಂದಿರುವುದು ರಾಜಕಾರಣಿಗಳು ಮತ್ತು ಜನ ಸಾಮಾನ್ಯರ ನಡುವೆ ಇರುವ ವರ್ಗ ಮತ್ತು ಸಂಪತ್ತಿನ ಅಸಮಾನತೆ." ಎಂದು ಇನ್ನೋರ್ವ ಪ್ರತಿಭಟನಕಾರರು ಉದ್ಘರಿಸಿದರು. ಕೆನ್ಯಾದಲ್ಲಿ ನಡೆದ ಹತ್ಯೆಗಳ ಉತ್ತರದಾಯಿತ್ವ ಅಧ್ಯಕ್ಷ ರುಟೊರವರದ್ದೇ ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಹೇಳಿದೆ!

ಕೊನೆಗೆ, ಪ್ರತಿಭಟನೆಯ ಒತ್ತಡಕ್ಕೆ ಮಣಿದು ಸಂಸತ್ತಿನಲ್ಲಿ ಮಂಡಿಸಿದ ಮಸೂದೆಯನ್ನು ಅಧ್ಯಕ್ಷ ರುಟೊ ಜೂನ್ 26 ರಂದು ಹಿಂಪಡೆದರೂ, ಜನರ ಆಕ್ರೋಶ ತಣಿದಿಲ್ಲ. ಜೂನ್ 28ರಂದು ಹೋರಾಟದ ನಾಯಕರು ರುಟೊ ರಾಜಿನಾಮೆಗೆ ಒತ್ತಾಯಿಸಿ ಪ್ರತಿಭಟನೆಗಳಿಗೆ, ಮುಷ್ಕರಗಳಿಗೆ, ಧರಣಿಗಳಿಗೆ ಕರೆ ನೀಡಿದರು. ಇಲ್ಲಿ ಗಮನಿಸಬೇಕಾಗಿರುವ ಅಂಶವೆಂದರೆ, ಕಳೆದ ಮೇ ತಿಂಗಳಲ್ಲಿ ರುಟೊ, ಅಮೇರಿಕ ಭೇಟಿಗೆ ಧಾವಿಸಿದ್ದು; ಇದು ಕಳೆದ 16 ವರ್ಷಗಳಲ್ಲಿ ಆಫ್ರಿಕಾದ ನಾಯಕರೊಬ್ಬರು ಅಮೇರಿಕಾಗೆ ನೀಡಿದ ಮೊದಲ ಭೇಟಿ. ಸಾಮ್ರಾಜ್ಯಶಾಹಿಗಳಾದ ಅಮೇರಿಕ ಹಾಗೂ ರಷ್ಯಾ ದೇಶಗಳ ನಡುವಿನ ಧ್ರುವೀಕರಣದಲ್ಲಿ, ಆಫ್ರಿಕಾ ಮತ್ತು ವಿಶ್ವದ ಇತರ ದೇಶಗಳು ಇಬ್ಬರಲ್ಲಿ ಒಬ್ಬರ ಪರ ವಹಿಸುತ್ತಿರುವಾಗ, ಕೆನ್ಯಾ ಅಮೇರಿಕದ ಪರ ಸಾಗುತ್ತಿರುವುದು ಮಹತ್ವದ ವಿಷಯ. ಇನ್ನಿತರ ದೇಶಗಳು ರಷ್ಯಾ ಮತ್ತು ಚೀನಾ ಕಡೆ ವಾಲುತ್ತಿರುವ ಪರಿಸ್ಥಿತಿಯಲ್ಲಿ ಕೆನ್ಯಾದ ನಂಟು ಅಮೇರಿಕಾಗೆ ಅಪ್ಯಾಯಮಾನದ್ದಾಗಿದೆ. ಈ ಭೇಟಿಯ ಬಳಿಕ, ಅಮೇರಿಕದ ಅಧ್ಯಕ್ಷ ಬಿಡೆನ್, ಸಬ್ ಸಹಾರಾ ಆಫ್ರಿಕಾದಲ್ಲಿನ ಕೆನ್ಯಾ ಮಾತ್ರವೇ ಒಂದು ಪ್ರಮುಖ ನ್ಯಾಟೋಯೇತರ ಮಿತ್ರನಾಗಿದೆ ಎಂದು ಘೋಷಿಸುತ್ತಾ, ಅದಕ್ಕೆ ಮಿಲಿಟರಿ ತರಬೇತಿ, ಹೆಚ್ಚಿನ ಯುದ್ಧೋಪಕರಣಗಳ ಲಭ್ಯತೆ ಮತ್ತು ಜಂಟಿ ಸಂಶೋಧನೆ, ಮುಂತಾದವುಗಳಲ್ಲಿ ಆದ್ಯತೆ ಇರುತ್ತದೆ ಎಂದಿದ್ದಾರೆ. ಹೀಗೆ ಕೆನ್ಯಾ, ಅಮೇರಿಕದ ಮಿಲಿಟರಿ ಕಾರ್ಯತಂತ್ರದ ಪ್ರಮುಖ ಪಾಲುಗಾರನಾಗಿ ಹೊರಹೊಮ್ಮಿದೆ. ಅಲ್ಲದೆ, ತನ್ನ ಸಾಲದ ಹೊರೆ ತಗ್ಗಿಸಲು ರುಟೊಗೆ ಅಮೇರಿಕದ ನೆರವಿನ ಅವಶ್ಯಕತೆ ಇದೆ.

ರೊಟೊ ಅಮೆರಿಕಾ ಭೇಟಿ ಮತ್ತು ಅಮೇರಿಕ ಪರ ನಿಲುವನ್ನು ದೇಶದ ಬಹುತೇಕ ಜನತೆ ಸ್ವಾಗತಿಸಿಲ್ಲ. ರುಟೊ ಬೆಂಬಲಿಗರು, ಅವರ ಅಮೆರಿಕಾ ಜೊತೆಗಿನ ಸಂಬಂಧದಿಂದ ಬರುವ ಹೆಚ್ಚಿನ ಹೂಡಿಕೆ ಮತ್ತು ಸಾಲ ಪರಿಹಾರ, ಇವುಗಳಿಂದ ಖುಷಿ ಪಟ್ಟರೂ, ಅವರ ಟೀಕಕಾರರು, ಅವರು ಆರ್ಥಿಕತೆಗೆ ಸಂಬಂಧಿಸಿದಂತೆ, ಒಂದೆಡೆ, ಜನರು ಅಗ್ಗದ ಜೀವನ ನಡೆಸಬೇಕೆಂದು ಬೋಧಿಸುತ್ತಾ, ತಾನು ಮಾತ್ರ ದುಬೈಯಿಂದ ಒಂದು ಐಷಾರಾಮಿ ಖಾಸಗಿ ವಿಮಾನದಲ್ಲಿ ಅಮೇರಿಕಾಗೆ ಹೋಗಿರುವ ಬಗ್ಗೆ ಖಂಡಿಸಿದ್ದಾರೆ. ಕೆನ್ಯಾದ ಕಮ್ಯುನಿಸ್ಟ್ ಪಕ್ಷ(ಸಿಪಿಕೆ)ದ ಕೇಂದ್ರ ಸಮಿತಿಯು, "ಅಮಾಯಕರ ರಕ್ತವನ್ನು ಹರಿಸಿದ ತನ್ನ ಕ್ರಮದ ಜವಾಬ್ದಾರಿಯಿಂದ ರುಟೊ ನುಣಿಚಿಕೊಳ್ಳಲು ನಾವು ಬಿಡಬಾರದು. ಪ್ರತಿಭಟನಕಾರರು ಎತ್ತಿರುವ ಸರಳ ಮತ್ತು ಸ್ಪಷ್ಟವಾದ ಬೇಡಿಕೆಗಳನ್ನು ಅಧ್ಯಕ್ಷರು ನೆರವೇರಿಸಲೇಬೇಕೆಂದು ನಾವು ಒತ್ತಾಯಿಸುತ್ತೇವೆ. ಚುನಾವಣೋತ್ತರ ಪ್ರತಿಭಟನೆಗಳಲ್ಲಿ ನಡೆದ ಅಮಾಯಕರ ಹತ್ಯೆಗಳಿಗೆ ರುಟೊ ಜವಾಬ್ದಾರ. ಭ್ರಷ್ಟ ರುಟೊ ಸರ್ಕಾರ ಸಂಘಟಿಸಿದ್ದ, ಈ ತಪ್ಪಿಸಬಹುದಾಗಿದ್ದ ಹತ್ಯೆಗಳ ಸಂತ್ರಸ್ತರಿಗೆ ನಾವು ನ್ಯಾಯವನ್ನು ಆಗ್ರಹಿಸುತ್ತೇವೆ" ಎಂದು ಹೇಳಿದೆ. ಕಮ್ಯುನಿಸ್ಟ್ ಪಕ್ಷವು, ಜೀವನಾವಶ್ಯಕತೆಗಳಾದ ಆಹಾರ, ಆರೋಗ್ಯ ಸೇವೆ, ಶಿಕ್ಷಣ ಮುಂತಾದವುಗಳ ಮೇಲಿನ ತೆರಿಗೆಯನ್ನು ಹಿಂಪಡೆಯಬೇಕು. ಜೊತೆಗೆ, ದೇಶದ ಸಾರ್ವಭೌಮತ್ವದಲ್ಲಿ ವಿಶ್ವ ಬ್ಯಾಂಕ್, ಐಎಂಎಫ್, ನ್ಯಾಟೊ ಮತ್ತವುಗಳ ಹಣಕಾಸು ಸಂಸ್ಥೆಗಳು ತಲೆ ಹಾಕಬಾರದು ಎಂದೂ ಒತ್ತಾಯಿಸಿದೆ.

ನಾವು ಕೆನ್ಯಾ ಜನರ ಈ ಧೀರೋದಾತ್ತ ಹೋರಾಟಕ್ಕೆ ಅಭಿನಂದನೆ ಸಲ್ಲಿಸುತ್ತಾ, ಅವರೊಂದಿಗೆ ಐಕಮತ್ಯವನ್ನು ವ್ಯಕ್ತಪಡಿಸುತ್ತೇವೆ; ಹಾಗೂ, ವಿಶ್ವ ಸಾಮ್ರಾಜ್ಯಶಾಹಿ ವಿರೋಧಿ, ಬಂಡವಾಳಶಾಹಿ ವಿರೋಧಿ ಆಂದೋಲನಕ್ಕೆ ಪೂರಕವಾಗುವಂತೆ ತಮ್ಮ ಹೋರಾಟವನ್ನು ಸರಿಯಾದ ಕ್ರಾಂತಿಕಾರಿ ನೇತೃತ್ವದಡಿಯಲ್ಲಿ, ಸರಿಯಾದ ದಾರಿಯಲ್ಲಿ ಮುನ್ನಡೆಸುವಂತೆ ಅವರಿಗೆ ಕರೆ ನೀಡುತ್ತೇವೆ. ■

# ಅದಾನಿ ಕಲ್ಲಿದ್ದಲು ಹಗರಣದ ಅನಾವರಣ

## ಅಖಿಲ ಭಾರತ ವಿದ್ಯುಚ್ಛಕ್ತಿ ಗ್ರಾಹಕರ ಸಂಘ (ಎಐಇಸಿಎ) ಆಗ್ರಹಗಳು

ಇಂಗ್ಲೆಂಡಿನ ಖ್ಯಾತ ಫೈನಾನ್ಷಿಯಲ್ ಟೈಮ್ಸ್ ಪತ್ರಿಕಾ ಸಮೂಹವು ಭಾರತದ ಬಂಡವಾಳಶಾಹಿ ಕಂಪನಿ ಗೌತಮ್ ಅದಾನಿ ಗ್ರೂಪ್‌ಗೆ ಸಂಬಂಧಿಸಿದ ಮತ್ತೊಂದು ವಿವಾದವನ್ನು ಬೆಳಕಿಗೆ ತಂದಿದೆ. ಸಾಗರೋತ್ತರ ಮಧ್ಯವರ್ತಿಗಳ ಮೂಲಕ ಕಲ್ಲಿದ್ದಲನ್ನು ಅದಾನಿ ಕಂಪನಿಯು ಭಾರಿ ಬೆಲೆಗೆ ಆಮದು ಮಾಡಿಕೊಳ್ಳುವ ಕುತಂತ್ರವನ್ನು ಅದರ ತನಿಖಾ ವರದಿಯು ಬಹಿರಂಗಪಡಿಸುತ್ತದೆ. ಇದರಿಂದಾಗಿ ಭಾರತೀಯ ಗ್ರಾಹಕರು ವಿದ್ಯುತ್‌ಗೆ ದುಬಾರಿ ದರವನ್ನು ಪಾವತಿಸಬೇಕಾಗುತ್ತದೆ. ಇದು ಹಿಂಡೆನ್‌ಬರ್ಗ್ ಸಮೂಹವು ಅದಾನಿ ಕಂಪನಿಯ ವಿರುದ್ಧ, ಷೇರು ಮಾರುಕಟ್ಟೆಯನ್ನು ತಿರುಚುತ್ತಿದೆ ಎಂದು ಮಾಡಿದ್ದ ಆರೋಪಪಟ್ಟಿಗೆ ವಿಶೇಷವಾಗಿ ಹೊಸ ಸೇರ್ಪಡೆಯಾಗಿದೆ. ಈ ಆರೋಪವು ಅದಾನಿ ಕಂಪನಿಯು, ಹಣಕಾಸಿನ ವಿಚಾರವಾಗಿ ನಡೆಸುವ ಕುತಂತ್ರವನ್ನು ಸಾಬೀತು ಮಾಡುತ್ತದೆ. ಜೊತೆಗೆ ಇದು ಬಿಜೆಪಿ ಸರ್ಕಾರ ಮತ್ತು ಪ್ರಧಾನಿ ಮೋದಿಯವರ ಅನುಗ್ರಹವು ಆ ಕಂಪನಿಗಿರುವುದಕ್ಕೆ ಸಾಕ್ಷ್ಯವನ್ನೂ ಒದಗಿಸುತ್ತದೆ.

### ಆರೋಪದ ವಿವರಗಳು

ಕಳೆದ ಎರಡು ವರ್ಷಗಳಲ್ಲಿ, ಅದಾನಿ ಕಂಪನಿಯು 5 ಬಿಲಿಯನ್ ಡಾಲರ್ ಮೌಲ್ಯದ ಕಲ್ಲಿದ್ದಲನ್ನು ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಗೆ ಆಮದು ಮಾಡಿಕೊಂಡಿದೆ ಎಂಬುದನ್ನು ಪತ್ರಿಕೆಯು ಪರಿಶೀಲಿಸಿದ ಸುಂಕದ ದಾಖಲೆಗಳು ಬಹಿರಂಗ ಪಡಿಸಿವೆ. ತೈವಾನ್, ದುಬೈ ಮತ್ತು ಸಿಂಗಾಪುರ ಮೂಲದ ಕಡಲಾಚೆಯ ಮಧ್ಯವರ್ತಿಗಳ ಮೂಲಕ ಈ ವಹಿವಾಟುಗಳನ್ನು ಸುಗಮಗೊಳಿಸಿಕೊಳ್ಳಲಾಗಿದೆ. ತೈವಾನ್‌ನ ಉದ್ಯಮಿಯೊಬ್ಬ ಅಂತಹ ಮಧ್ಯವರ್ತಿಯೊಬ್ಬರನ್ನು ನಿಯಂತ್ರಿಸುತ್ತಾನೆ. ಈತ ಅದಾನಿ ಕಂಪನಿಗಳಲ್ಲಿ ಗುಪ್ತ ಶೇರುದಾರನಾಗಿದ್ದಾನೆ. ಭಾರತೀಯ ಕಸ್ಟಮ್ಸ್‌ಗೆ ಇವರು ಘೋಷಿಸಿರುವ ಬೆಲೆಗಳು ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಹೆಚ್ಚು ಎಂದು ದತ್ತಾಂಶಗಳು ಸೂಚಿಸುತ್ತವೆ. ಇದರ ಪರಿಣಾಮವಾಗಿ ಇಂಡೋನೇಷ್ಯಾದಿಂದ ಭಾರತಕ್ಕೆ ಕಲ್ಲಿದ್ದಲನ್ನು ಸಾಗಿಸುವ ವೆಚ್ಚ ಮೊದಲಿಗಿಂತ 70 ದಶಲಕ್ಷ ಡಾಲರ್ ಹೆಚ್ಚಾಗಿದೆ.

### ಭಾರತದ ಕಲ್ಲಿದ್ದಲು ಅವಲಂಬನೆ

ಭಾರತದಲ್ಲಿ ವಿದ್ಯುತ್ ಉತ್ಪಾದನೆಯು ಪ್ರಧಾನವಾಗಿ ಕಲ್ಲಿದ್ದಲನ್ನು ಆಧರಿಸಿದ್ದು, ಅದಕ್ಕಾಗಿ ದೇಶೀಯ ಕಲ್ಲಿದ್ದಲು ನಿಕ್ಷೇಪಗಳ ಮೇಲೆ ಅದು ಹೆಚ್ಚಾಗಿ ಅವಲಂಬಿತವಾಗಿದೆ. 2013–14 ರಲ್ಲಿ 565 ದಶಲಕ್ಷ ಮೆಟ್ರಿಕ್ ಟನ್‌ಗಳಷ್ಟು ಇದ್ದ ಕಲ್ಲಿದ್ದಲು ಉತ್ಪಾದನೆಯು 2022–23ರ ಆರ್ಥಿಕ ವರ್ಷದಲ್ಲಿ, ಗಮನಾರ್ಹವಾಗಿ ಏರಿಕೆಯಾಗಿ 893 ಮಿಲಿಯನ್ ಮೆಟ್ರಿಕ್ ಟನ್‌ಗಳನ್ನು ತಲುಪಿತು. ಒಂದು ಯೋಜನೆಯು 2023–24ರ ವೇಳೆಗೆ ಉತ್ಪಾದನೆಯನ್ನು 1 ಬಿಲಿಯನ್ ಟನ್‌ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಕಂಪನಿ ಒಂದೇ 2024–25ರ ವೇಳೆಗೆ 1 ಶತಕೋಟಿ ಟನ್ ಕಲ್ಲಿದ್ದಲು ಉತ್ಪಾದನೆ ಮಾಡುವ ನಿರೀಕ್ಷೆ ಹೊಂದಿದೆ.

### ದುಬಾರಿ ಬೆಲೆಗೆ ಆಮದು

ಗಣನೀಯ ಪ್ರಮಾಣದ ಸ್ಥಳೀಯ ಕಲ್ಲಿದ್ದಲಿನ ಉತ್ಪಾದನೆಯ ಹೊರತಾಗಿಯೂ, ಭಾರತ ಸರ್ಕಾರವು ವಿದೇಶದಲ್ಲಿ ಅದಾನಿ ಕಂಪನಿಯಿಂದ ಗಣಿಗಾರಿಕೆ ಮಾಡಿದ ಕಲ್ಲಿದ್ದಲನ್ನು ಅತಿ ದುಬಾರಿ ಬೆಲೆಗೆ ಖರೀದಿಸುತ್ತಿದೆ. ಈ ಕಲ್ಲಿದ್ದಲನ್ನು ನಂತರ ವಿದ್ಯುತ್ ಉತ್ಪಾದಿಸುವ ಕಂಪನಿಗಳಿಗೆ ಹೆಚ್ಚಿನ ಬೆಲೆಗೆ ಸರಬರಾಜು ಮಾಡಿ ಆರ್ಥಿಕ ಹೊರೆಯನ್ನು ಭಾರತೀಯ ಗ್ರಾಹಕರಿಗೆ ವರ್ಗಾಯಿಸುತ್ತಿದೆ. ಈ ನೀತಿಯು ದೇಶೀಯ ಕಲ್ಲಿದ್ದಲು ಉತ್ಪಾದನೆಯನ್ನು ದುರ್ಬಲಗೊಳಿಸುವುದು ಮಾತ್ರವಲ್ಲದೆ, ಅಂತಹ ನಿರ್ಧಾರ ತೆಗೆದುಕೊಳ್ಳಲು ನಡೆದಿರುವ ಸರ್ಕಾರದ ಪ್ರಕ್ರಿಯೆ ಮತ್ತು ಅದಾನಿಯ ಕಡೆಗೆ ಸರ್ಕಾರವು ಸ್ಪಷ್ಟವಾಗಿ ವಾಲಿರುವ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

### ಎಗ್ಗುಸಿಗ್ಗಿಲ್ಲದ ಅನುಕೂಲಗಳು ಮತ್ತು ಮಾಯವಾದ ನಿಯಂತ್ರಣಗಳು

ದೈತ್ಯ ಏಕಸ್ವಾಮ್ಯ ಸ್ಥಾನವನ್ನು ಹೊಂದಿರುವ ಗೌತಮ್ ಅದಾನಿಗೆ ತನ್ನ ಕಲ್ಲಿದ್ದಲು ಉದ್ದಿಮೆಯನ್ನು ಬೆಳೆಸಿಕೊಳ್ಳಲು ವಿಪರೀತ ಅನುಕೂಲಗಳನ್ನು ಭಾರತ ಸರ್ಕಾರವು ಮಾಡಿಕೊಟ್ಟಿದೆ ಎಂದು ದಾಖಲೆಗಳು ಬಹಿರಂಗಪಡಿಸುತ್ತವೆ. ಕಲ್ಲಿದ್ದಲು ಬ್ಲಾಕ್‌ಗಳನ್ನು ಖಾಸಗಿ ವಲಯಕ್ಕೆ ಹಸ್ತಾಂತರಿಸುವ ಸಮರ್ಪಕತೆ ಮತ್ತು ಪಾರದರ್ಶಕತೆಯ ಬಗ್ಗೆ ಪ್ರಧಾನ ಮಂತ್ರಿ ಕಛೇರಿಯ ಅಬ್ಬರದ ಮಾತುಗಳ ಹೊರತಾಗಿಯೂ, ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ಗೆ ವಿನಾಯಿತಿ ನೀಡಲಾಗಿದೆ. ಇದರಿಂದ ಭಾರತದ ಅತ್ಯಂತ ದಟ್ಟವಾದ ಅರಣ್ಯ ಪ್ರದೇಶದಲ್ಲಿ 450 ದಶಲಕ್ಷಟನ್ ಕಲ್ಲಿದ್ದಲನ್ನು ಗಣಿಗಾರಿಕೆ ಮಾಡಲು ಕಂಪನಿಗೆ ಅವಕಾಶ ಮಾಡಿಕೊಡಲಾಗಿದೆ. ಅದಾನಿಗೆ ಲಾಭವನ್ನುಂಟು ಮಾಡುವುದೇ ಇದರ ಉದ್ದೇಶ ಎಂಬುದು ನಿಚ್ಚಳವಾಗಿ ಕಾಣಿಸುತ್ತದೆ. ಪ್ರಧಾನಮಂತ್ರಿ ಕಛೇರಿಯ ಆರಂಭಶೂರತ್ವದ 'ಕಾಳಜಿಯು' ಕೇವಲ ಒಂದು ತಂತ್ರ ಅಥವಾ ಅದರ ನಟನೆಯೆಂದು ಯಾರಿಗಾದರೂ ಅರ್ಥವಾಗುವಂತಿದೆ.

'ದಿ ರಿಪೋರ್ಟರ್ಸ್ ಕಲೆಕ್ಟಿವ್' ಮತ್ತು 'ಅಲ್ ಜಜೀರಾ' ಮಾಧ್ಯಮ ಸಂಸ್ಥೆಗಳು ಹೊರಗಿಟ್ಟ ಆ ದಾಖಲೆಗಳ ಪ್ರಕಾರ, ಅದಾನಿ ಕಂಪನಿಗೆ ಒದಗಿಸಿದ ಈ ಸೌಕರ್ಯದ ಹಿಂದಿನ ತರ್ಕವನ್ನು ಸರ್ಕಾರ ಬಾಯಿಬಿಟ್ಟಿಲ್ಲ. 2014 ರಲ್ಲಿ ಸುಪ್ರೀಂಕೋರ್ಟ್, ಅಕ್ರಮ ಮತ್ತು ಅಪಾರದರ್ಶಕತೆಯ ಕಾರಣಕ್ಕಾಗಿ 204 ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಯನ್ನು ರದ್ದುಗೊಳಿಸಿದ ನಂತರ ಮೋದಿ ಸರ್ಕಾರವು ಜಾರಿಗೊಳಿಸಿದ ನಿಯಮದ ಅಡಿಯಲ್ಲಿ ಈ ಅನುಕೂಲವನ್ನು ಅದಾನಿಗೆ ನೀಡಲಾಗಿದೆ.

### ವಿದ್ಯುತ್ ದರ ಏರಿಕೆ

ವಿದ್ಯುತ್ ಕಂಪನಿಗಳು ಉತ್ಪಾದನಾ ವೆಚ್ಚ ಹೆಚ್ಚಳದ ನೆಪ ಮಾಡಿಕೊಂಡು ವಿದ್ಯುತ್ ದರವನ್ನು ಹೆಚ್ಚಿಸಿ ಅದರ ಹೊರೆಯನ್ನು ಸಾಮಾನ್ಯ ಗ್ರಾಹಕರ ಮೇಲೆ ವರ್ಗಾಯಿಸಿವೆ. ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ವಿದ್ಯುತ್ ಉತ್ಪಾದಕರಿಗೆ ದುಬಾರಿ ಬೆಲೆಯಲ್ಲಿ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಸರ್ಕಾರ ನೀಡಿದ ನಿರ್ದೇಶನದಿಂದ ಈ ಕೃತಕ ಹಣದುಬ್ಬರವು ಮತ್ತಷ್ಟು ಉಲ್ಬಣಗೊಂಡಿದೆ. ಈ ಕ್ರಮದಿಂದ ವಿದ್ಯುತ್ ಬಿಲ್ ಹೆಚ್ಚಳವಾಗಿದೆ.

### ಸರ್ಕಾರದ ಪ್ರಶ್ನಾರ್ಹ ನಡೆ

ಹೆಚ್ಚಿನ ಬೆಲೆಗೆ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಅದಾನಿಯಂತಹ ಖಾಸಗಿ ಕಂಪನಿಗಳಿಗೆ ಅನುಮತಿ ನೀಡುವ ಸರ್ಕಾರದ ನಿರ್ಧಾರವು, ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಭಾರತವು ಸಾಕಷ್ಟು ದೇಶೀಯ ಕಲ್ಲಿದ್ದಲು ನಿಕ್ಷೇಪಗಳನ್ನು ಹೊಂದಿದ್ದು ಅವು ದೇಶದ ಅಗತ್ಯಗಳನ್ನು ಕಡಿಮೆ ವೆಚ್ಚದಲ್ಲಿ ಪೂರೈಸುತ್ತವೆ. ಆದರೂ, ಸರ್ಕಾರವು ಏಕಸ್ವಾಮ್ಯಾಧಿಪತಿ ಉದ್ಯಮಿಗಳಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಸಾಮಾನ್ಯ ಗ್ರಾಹಕರಿಗೆ ಬರೆ ಹಾಕಿ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವುದನ್ನು ಮುಂದುವರೆಸಿದೆ. ದೇಶೀಯ ಕಲ್ಲಿದ್ದಲನ್ನು ಸಾಗಿಸಲು ರೈಲ್ವೇ ವ್ಯಾಗನ್‌ಗಳು ಹಾಕುವ ಅಸಮರ್ಪಕ ನಿಬಂಧನೆಗಳೂ ಈ ನೀತಿಗೆ ಇಂಬು ನೀಡಿವೆ. ಇದು ಕಲ್ಲಿದ್ದಿಲಿನ ಅಪರಿಮಿತ ಕೊರತೆಯನ್ನು ಸೃಷ್ಟಿಸುತ್ತದೆ.

### ಕೃತಕ ಕಲ್ಲಿದ್ದಲು ಬಿಕ್ಕಟ್ಟಿನ ಸೃಷ್ಟಿ

2021ರ ಅಕ್ಟೋಬರ್‌ನಲ್ಲಿ, ಕಲ್ಲಿದ್ದಲು ಕೊರತೆಯಿಂದಾಗಿ ದೇಶದಲ್ಲಿ ವಿದ್ಯುತ್ ಬಿಕ್ಕಟ್ಟು ಉಂಟಾಗಿ ಹಲವಾರು ರಾಜ್ಯಗಳು ಕತ್ತಲೆಯ ಅಂಚಿಗೆ ದೂಡಲ್ಪಟ್ಟವು. ಹೆಚ್ಚಿನ ಬೆಲೆಯ ಕಲ್ಲಿದ್ದಲಿನ ಆಮದನ್ನು ಸಮರ್ಥಿಸುವ ಸಲುವಾಗಿ ಈ ಪರಿಸ್ಥಿತಿಯನ್ನು ಕೃತಕವಾಗಿ ಸೃಷ್ಟಿಸಲಾಗಿತ್ತು. ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಕಂಪನಿಯು ದಾಖಲೆಯ ಮಟ್ಟದಲ್ಲಿ ದೇಶೀಯ ಕಲ್ಲಿದ್ದಲು ಉತ್ಪಾದನೆ ಮಾಡಿದಾಗಲೂ, ಆ ಕಲ್ಲಿದ್ದಲು ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ತಲುಪದಿರಲು ರೈಲ್ವೆ ವ್ಯಾಗನ್‌ಗಳ ಕೊರತೆಯೇ ಕಾರಣ ಎಂದು ಹೇಳಲಾಯಿತು. ಈ ಉದ್ದೇಶಪೂರ್ವಕ ವ್ಯವಸ್ಥಿತ ಕೊರತೆಯು ಲೋಡ್ ಶೆಡ್ಡಿಂಗ್ ಮತ್ತು ಸುಂಕ ಹೆಚ್ಚಲು ಕಾರಣವಾಗಿ ಗ್ರಾಹಕರಿಗೆ ಮತ್ತಷ್ಟು ಹೊರೆ ಬೀಳುತ್ತಿದೆ.

> **ಆಗಸ್ಟ್ 10ರಂದು ಹೊರಬಂದ ಹಿಂಡೆನ್‌ಬರ್ಗ್ ವರದಿಯು 2023ರಲ್ಲಿ ಬಹಿರಂಗಗೊಂಡ ಅದಾನಿ ಸಮೂಹದ ಅಕ್ರಮಗಳನ್ನು ತನಿಖೆಗೆ ಒಳಪಡಿಸಬೇಕಿದ್ದ ಸೆಬಿಯ ಪ್ರಸಕ್ತ ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಾಲ್ ಬುಚ್, ಅದಾನಿ ಕಂಪನಿಗೆ ನಿಕಟವಾಗಿರುವ ಶೆಲ್ ಕಂಪನಿಗಳಲ್ಲಿ ಮತ್ತು ಇತರ ಅದಾನಿ ಕಂಪನಿಗಳಲ್ಲಿ ಶೇರುದಾರರರಾಗಿದ್ದು, ಲಾಭಗಳಿಕೆ ಮಾಡಿಕೊಂಡಿದ್ದಾರೆ ಎಂದು ತೋರಿಸಿದೆ.**

### ಆಮದು ಮಾಡಿಕೊಂಡ ಕಲ್ಲಿದ್ದಲಿನ ಪಾತ್ರ

ದುಬಾರಿ ಬೆಲೆ ನೀಡಿ ಆಮದು ಮಾಡಿಕೊಂಡ ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸುವ ವೆಚ್ಚವನ್ನು ಕೇಂದ್ರ ವಿದ್ಯುತ್ ಸಚಿವಾಲಯವು ಗ್ರಾಹಕರಿಗೆ ವರ್ಗಾಯಿಸುತ್ತದೆ. ನಿರಂತರ ವಿದ್ಯುತ್ ಪೂರೈಕೆಯನ್ನು ಖಾತ್ರಿಪಡಿಸುವುದಕ್ಕಾಗಿ ಎಂದು ಈ ನಿರ್ಧಾರವನ್ನು ಸಮರ್ಥಿಸಿಕೊಳ್ಳಲಾಗಿದೆ. ಆದರೆ ಇದರಿಂದ ವಿದ್ಯುತ್ ಶುಲ್ಕದಲ್ಲಿ ಗಣನೀಯ ಹೆಚ್ಚಳವಾಗಲಿದೆ. ಈಗಂತೂ, ಅದಾನಿಯಂತಹ ಖಾಸಗಿ ಉತ್ಪಾದಕರು ಆಮದು ಮಾಡಿಕೊಂಡ ಕಲ್ಲಿದ್ದಲಿನ ಹೆಚ್ಚಾದ ವೆಚ್ಚವನ್ನು ಹೊಂದಿಸಿಕೊಂಡು ಲಾಭ ಮಾಡಿಕೊಳ್ಳಲು ಉತ್ಪಾದನೆಯನ್ನು ಮೊಟಕುಗೊಳಿಸಿದ್ದಾರೆ ಮತ್ತು ವಿದ್ಯುತ್ ದರಗಳನ್ನು ಮತ್ತಷ್ಟು ಹೆಚ್ಚಿಸಿದ್ದಾರೆ.

### ನೈತಿಕ ಪ್ರಶ್ನೆಗಳು

ಅದಾನಿ ಗ್ರೂಪ್‌ನ ಕ್ರಮಗಳು ಮತ್ತು ಸರ್ಕಾರದ ನಿರ್ಧಾರಗಳು ಗಂಭೀರ ನೈತಿಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಕಂದಾಯ ಗುಪ್ತಚರ ನಿರ್ದೇಶನಾಲಯವು ಆಮದು ಮಾಡಿಕೊಂಡ ಕಲ್ಲಿದ್ದಲಿನ ಮಿತಿಮೀರಿದ ವೆಚ್ಚದ ಜೊತೆಗೆ ಹಣಕಾಸಿನ ದುರ್ವಿನಿಯೋಗದ ಪುರಾವೆಗಳತ್ತ ಬೊಟ್ಟು ಮಾಡಿದೆ. ಹೆಚ್ಚುವರಿಯಾಗಿ, ಕಲ್ಲಿದ್ದಲು ಉತ್ಪಾದನೆ ಮತ್ತು ಸಾಗಣೆಯನ್ನು ಸುಧಾರಿಸುವ ಬದಲು ಹಣಕಾಸಿನ ಕೊರತೆಯನ್ನು ಪೂರೈಸಲು ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್)ನ ಮೀಸಲು ಧನವನ್ನು ಬಳಸಲು ಸರ್ಕಾರವು ಯೋಜಿಸಿದೆ

### ಸಾರ್ವಜನಿಕ ಪ್ರತಿಭಟನೆ ಮತ್ತು ಬೇಡಿಕೆಗಳು:

ವಿದ್ಯುತ್ ಗ್ರಾಹಕರ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಕಾಯಲು ಮೀಸಲಾದ ಸಾರ್ವಜನಿಕ ಸಮಿತಿಯಾದ ಅಖಿಲ ಭಾರತ ವಿದ್ಯುಚ್ಛಕ್ತಿ ಗ್ರಾಹಕರ ಸಂಘ(AIECA)ವು, ಈ ಕ್ರಮಗಳಿಗೆ ಪ್ರತಿಕ್ರಿಯೆಯಾಗಿ ಹಲವಾರು ಬೇಡಿಕೆಗಳನ್ನು ಎತ್ತಿದೆ: 1. ವಿದ್ಯುತ್ ಅನ್ನು ಒಂದು ಲಾಭದಾಯಕ ಸರಕು ಎಂದು ಪರಿಗಣಿಸಬಾರದು. 2. ಕಲ್ಲಿದ್ದಲು ಬಿಕ್ಕಟ್ಟಿನ ಸುಳ್ಳು ನೆಪ ಹೂಡಿ ವಿದ್ಯುತ್ ದರಗಳನ್ನು ಹೆಚ್ಚಿಸುವುದನ್ನು ನಿಲ್ಲಿಸಬೇಕು. 3. ದೇಶೀಯ ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸಿ ಮತ್ತು ಆಮದುಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕು. 4. ಉಷ್ಣ ವಿದ್ಯುತ್ ಕೇಂದ್ರಗಳಿಗೆ ಕಲ್ಲಿದ್ದಲು ಸಾಗಿಸಲು ಸಾಕಷ್ಟು ವ್ಯಾಗನ್‌ಗಳನ್ನು ಒದಗಿಸಬೇಕು. 5. ಕಲ್ಲಿದ್ದಲು ಹೊಂಡಗಳ ಬಳಿ ಥರ್ಮಲ್ ಪವರ್ ಸ್ಟೇಷನ್‌ಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. 6. ಕಲ್ಲಿದ್ದಲು ಆಮದು ಮಾಡಿಕೊಳ್ಳಲು ರಾಜ್ಯ ಮತ್ತು ಖಾಸಗಿ ವಿದ್ಯುತ್ ಉತ್ಪಾದಕರಿಗೆ ನೀಡಿರುವ ನಿರ್ದೇಶನವನ್ನು ಹಿಂಪಡೆಯಬೇಕು.

### ಕೊನೆಯಲ್ಲಿ. . . . .

ಅದಾನಿ ಕಲ್ಲಿದ್ದಲು ಆಮದು ಹಗರಣವು ಭಾರತದ ಇಂಧನ ಕ್ಷೇತ್ರದಲ್ಲಿ ಕಠಿಣ ಮೇಲ್ವಿಚಾರಣೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಅಗತ್ಯವನ್ನು ಒತ್ತಿಹೇಳುತ್ತದೆ ಮತ್ತು ಅದಕ್ಕಾಗಿ ದೊಡ್ಡ ಪ್ರಮಾಣದ ಭ್ರಷ್ಟಾಚಾರವನ್ನು ಕುತಂತ್ರದಿಂದ ಮರೆಮಾಚುವ ಬಿಜೆಪಿ ಸರ್ಕಾರದ ಮುಖವಾಡವನ್ನೂ ಕಳಚಿ ಹಾಕಿದೆ.

ಅಷ್ಟೇ ಏಕೆ, ಕಳೆದ ಶನಿವಾರ(10 ಆಗಸ್ಟ್) ಹೊರಬಂದ ಹಿಂಡೆನ್‌ಬರ್ಗ್ ವರದಿಯು ಹೇಗೆ ಮೋದಿ ಸರ್ಕಾರವು ಅದಾನಿಯನ್ನು ಕಾಪಾಡಲು ಸ್ಟಾಕ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ(ಸೆಬಿ)ದ ಅಧ್ಯಕ್ಷರ ನೇಮಕವನ್ನೇ ಕಲುಷಿತಗೊಳಿಸಿತು, 2023ರಲ್ಲಿ ಬಹಿರಂಗಗೊಂಡ ಅದಾನಿ ಸಮೂಹದ ಅಕ್ರಮಗಳನ್ನು ತನಿಖೆಗೆ ಒಳಪಡಿಸಬೇಕಿದ್ದ ಸೆಬಿಯ ಪ್ರಸಕ್ತ ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಾಲ್ ಬುಚ್, ಅದಾನಿ ಕಂಪನಿಗೆ ನಿಕಟವಾಗಿರುವ ಶೆಲ್ ಕಂಪನಿಯಿಂದ ಮತ್ತು ಇತರ ಅದಾನಿ ಕಂಪನಿಗಳಲ್ಲಿ ಶೇರುದಾರರರಾಗಿದ್ದು, ಲಾಭಗಳಿಕೆ ಮಾಡಿಕೊಂಡಿದ್ದಾರೆ ಎಂದು ತೋರಿಸಿದೆ. ಆ ಮೂಲಕ ಇಡೀ ಅದಾನಿ ಪ್ರಕರಣವು ಶೈತ್ಯಾಗಾರವನ್ನು ಸೇರಿದೆ ಎಂದೂ ಹೇಳಿದೆ. ಹೀಗೆ ಮೋದಿ ಸರ್ಕಾರ ಮತ್ತು ಅದಾನಿ ಅಕ್ರಮಗಳ ನಡುವಿನ ಕೊಂಡಿನ್ನು ಎತ್ತಿತೋರಿದೆ.

ಅದಾನಿಯ ಹಿತಾಸಕ್ತಿಗಾಗಿ ಬಿಜೆಪಿ ಸರ್ಕಾರ ಸೃಷ್ಟಿಸಿದ ಕೃತಕ ಬಿಕ್ಕಟ್ಟು ಮತ್ತು ಹೆಚ್ಚಿದ ಸುಂಕಗಳು ಅದರ ಆದ್ಯತೆಯನ್ನು ಸೂಚಿಸುತ್ತವೆ. ಗ್ರಾಹಕರಿಗಿಂತ ಏಕಸ್ವಾಮ್ಯದ ಉದ್ಯಮಿಗಳ ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ಮೂಲಕ, ಪ್ರಸಕ್ತ ಪರಿಪಾಠಗಳು ಆರ್ಥಿಕ ಸಮತೋಲನ ಮತ್ತು ಸಾರ್ವಜನಿಕ ನಂಬಿಕೆ ಎರಡನ್ನೂ ದುರ್ಬಲಗೊಳಿಸುತ್ತವೆ. ಭಾರತದಲ್ಲಿ ನ್ಯಾಯಯುತವಾದ ಇಂಧನ ಮಾರುಕಟ್ಟೆಯನ್ನು ಖಚಿತಪಡಿಸಿಕೊಳ್ಳಲು ನಿಯಂತ್ರಕ ಸಂಸ್ಥೆಗಳು ಮತ್ತು ಮಾಧ್ಯಮಗಳು ಇಂತಹ ನೀತಿಗಳನ್ನು ಪರಾಮರ್ಶಿಸುವುದನ್ನು ಮುಂದುವರೆಸುವುದು ಅತ್ಯಗತ್ಯ. ಆದ್ದರಿಂದ, ಅಖಿಲ ಭಾರತ ವಿದ್ಯುಚ್ಛಕ್ತಿ ಗ್ರಾಹಕರ ಸಂಘ (ಎಐಇಸಿಎ) ಸಂಘಟಿಸಿದ ಪ್ರಬಲ ಚಳುವಳಿಯನ್ನು ಮಾತ್ರ ತೀವ್ರ ಬದ್ಧತೆಯಿಂದ ಮುನ್ನಡೆಸಬೇಕಾಗಿದೆ.

# ಬಿಜೆಪಿಯ ಅವಕಾಶವಾದ

ಅಂತೂ, ಜನತೆಯ ಅಸಮಾಧಾನಕ್ಕೆ ತುತ್ತಾಗಿ ಪೂರ್ಣ ಬಹುಮತ ಗಳಿಸದೆ ಮೋದಿ ನೇತೃತ್ವದ ಬಿಜೆಪಿಯು ಕೊನೆಗೆ, ಇಬ್ಬರು ಕಡುಅವಕಾಶವಾದಿಗಳೊಂದಿಗೆ ಕೈ ಜೋಡಿಸಬೇಕಾಯಿತು. ಬಿಜೆಪಿಗೆ ಬೇರೆ ಆಯ್ಕೆಯೇ ಇರಲಿಲ್ಲ. ಚಂದ್ರಬಾಬು ನಾಯ್ಡು ಹಾಗೂ ನಿತೀಶ್ ಕುಮಾರ್, ಈ ಇಬ್ಬರೂ ತಮ್ಮ ಅಧಿಕಾರ ದಾಹಕ್ಕಾಗಿ ಕೂಟಗಳನ್ನು ಬದಲಿಸುವುದರಲ್ಲಿ ಕುಖ್ಯಾತರು. ಅವಕಾಶವಾದವೇ ಮೂಲಾಧಾರವಾಗಿರುವ ಬಂಡವಾಳಶಾಹಿ ರಾಜಕಾರಣವೂ ಸಹ ಅಸಹ್ಯಿಸಿಕೊಳ್ಳುವಂತಹ ಯಾವುದೇ ಕನಿಷ್ಠ ತತ್ವವಿಲ್ಲದ, ನೀತಿ–ನೈತಿಕತೆಯಿಲ್ಲದ, ಕಿಂಚಿತ್ತೂ ಪ್ರಾಮಾಣಿಕತೆ ಇಲ್ಲದ ಕೀಳುಮಟ್ಟದ ಹೀನ ಅವಕಾಶವಾದದ ಮೂರ್ತಸ್ವರೂಪರೇ ಈ ದ್ವಯರು. ತಾವೇ ಹೇಳಿದ ಮಾತುಗಳಿಂದ ಯೂಟರ್ನ್ ಹೊಡೆಯುವುದು ಇವೆ ಅಧಿಕಾರದಾಹದ ಹೆಗ್ಗುರುತು. ಕೇವಲ ಟಿಡಿಪಿ ಪಕ್ಷದ ನಾಯ್ಡು ಅಥವಾ ಜೆಡಿಯುನ ನಿತೀಶ್‌ಕುಮಾರ್ ಅಷ್ಟೇ ಅಲ್ಲ, ಬಿಜೆಪಿಯೂ ಸಹ ತನ್ನ ಕೊಳಕು ಅವಕಾಶವಾದವನ್ನು ಸದ್ಯದ ಅವಶ್ಯಕತೆಯೆಂದು ಬಿಂಬಿಸಿಕೊಳ್ಳುತ್ತಿದೆ. ಇಂದಿನ ಬಂಡವಾಳಶಾಹಿ ರಾಜಕಾರಣಿಗಳು ಬಹಳ ಆಪ್ತತೆಯಿಂದ ಹೇಳಿಕೊಳ್ಳುವ, 'ರಾಜಕಾರಣದಲ್ಲಿ ಶಾಶ್ವತ ಸ್ನೇಹಿತರೂ ಇಲ್ಲ, ಶಾಶ್ವತ ಶತ್ರುಗಳೂ ಇಲ್ಲ' ಎಂಬ ತತ್ವವನ್ನು ಅಳವಡಿಸಿಕೊಂಡು ಒಂದು ಕಾಲದ ಶತ್ರುಗಳನ್ನು ಸ್ನೇಹಿತರನ್ನಾಗಿಸಿಕೊಳ್ಳುವ ದೊಡ್ಡ ಪ್ರಹಸನ ನಡೆದಿದ್ದರಿಂದಲೇ ಮೋದಿ3.0 ಸರ್ಕಾರವು ಸ್ಥಾಪನೆಯಾಗಿದ್ದಲ್ಲವೇ!

### ಯೂಟರ್ನ್ ರಾಜಕಾರಣಿ ನಿತೀಶ್‌ಕುಮಾರ್

ಜನತಾದಳದಿಂದ ಹೊರಬಂದ ನಿತೀಶ್‌ಕುಮಾರ್ ಸಮತಾ ಪಕ್ಷವನ್ನು ಕಟ್ಟಿ, ಸಿಪಿಐ(ಎಂಎಲ್) ಜೊತೆ ಕೆಲಕಾಲ ಮೈತ್ರಿ ಮಾಡಿಕೊಂಡಿದ್ದರು. ತದನಂತರ 17ವರ್ಷಗಳ ಕಾಲ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು, 2013ರಲ್ಲಿ ಬಿಜೆಪಿಯೊಂದಿಗೆ ಮೈತ್ರಿಯನ್ನು ಅಂತ್ಯಗೊಳಿಸಿದರು. ನರೇಂದ್ರ ಮೋದಿಯವರನ್ನು ಪ್ರಧಾನಮಂತ್ರಿಯೆಂದು ಘೋಷಣೆ ಮಾಡಿದ್ದರ ಬಗ್ಗೆ ಮುನಿಸಿಕೊಂಡಿದ್ದವರು, 2014ರಲ್ಲಿ ದೊಡ್ಡ ಬಹುಮತದಿಂದ ಬಿಜೆಪಿ ಗೆದ್ದಾಗ, ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಟ್ಟರು. ಆದರೆ, ನಂತರ ಆರ್‌ಜೆಡಿ ಹಾಗೂ ಕಾಂಗ್ರೆಸ್ ಬೆಂಬಲದಿಂದ ತಮ್ಮ ಸರ್ಕಾರವನ್ನು ಉಳಿಸಿಕೊಂಡರು. ಈ ಮೂಲಕ ಜೆಡಿ(ಯು), ಆರ್‌ಜೆಡಿ ಹಾಗೂ ಕಾಂಗ್ರೆಸ್ ಪಕ್ಷಗಳು ಸೇರಿಕೊಂಡು ಮಹಾಘಟಬಂಧನದ ರಚನೆಯಾಯಿತು. ಆದರೆ 2016ರಲ್ಲಿ ಮಹಾಘಟಬಂಧನದಲ್ಲಿನ ಆರ್‌ಜೆಡಿ ಪಕ್ಷದ ಮೇಲುಗೈನಿಂದ ಅತೃಪ್ತರಾದ ನಿತೀಶ್‌ಕುಮಾರ್ ಬಿಜೆಪಿಯ ನೋಟು ಅಮಾನ್ಯೀಕರಣ ಹಾಗೂ ಜಿಎಸ್‌ಟಿಯನ್ನು ಬೆಂಬಲಿಸಿ, ಬಿಜೆಪಿಯೊಂದಿಗೆ ಮತ್ತೆ ಕೂಡಿಕೊಂಡರು. ಕೇವಲ ವರ್ಷದ ನಂತರ ನಿತೀಶ್‌ಕುಮಾರ್ ಬಿಜೆಪಿಯ ಪೌರತ್ವ ನೀತಿಯ ಬಗ್ಗೆ ಅಪಸ್ವರ ಎತ್ತಿ, ಬಿಹಾರದಲ್ಲಿ ಇಬ್ಬರು ಉಪಮುಖ್ಯಮಂತಿಗಳ ನೇಮಕಾತಿ ಒತ್ತಾಯಿಸಿದ್ದ ಬಿಜೆಪಿಯ ಒತ್ತಡಕ್ಕೆ ಕೂಡ ತಮ್ಮ ಅಸಮಾಧಾನವನ್ನು ಹೊರ ಹಾಕಿದರು. ಕೊನೆಗೆ, 2022ರಲ್ಲಿ ಬಿಜೆಪಿಯಿಂದ ಮತ್ತೆ ಬೇರ್ಪಡಿಸಿಕೊಂಡು, ಆರ್‌ಜೆಡಿ ಪಕ್ಷವನ್ನು ಮೈತ್ರಿಗಾಗಿ ಸ್ವಾಗತಿಸಿತು. ಆದರೆ ಜನವರಿ 2024ರಲ್ಲಿ ತಮ್ಮ ಅಂದಿನ ಮಿತ್ರರಿಗೆ ಕೈಕೊಟ್ಟು ಮತ್ತೆ ಬಿಜೆಪಿಯ ತೆಕ್ಕೆಗೆ ಮರಳಿದರು.

ನಿತೀಶ್‌ಕುಮಾರ್‌ಗೆ ಎನ್‌ಡಿಎ ಬಾಗಿಲು ಖಾಯಂ ಆಗಿ ಮುಚ್ಚಿದೆ ಎಂದು ಗೃಹಸಚಿವ ಅಮಿತ್ ಶಾ, 2014ರ ಫೆ.4ರಂದು ಹೇಳಿದ್ದು ಇನ್ನೂ ಅನುರಣಿಸುತ್ತಿದೆ. ಮತ್ತೆ 2023ರ ಫೆ.25ರಂದು ಅಮಿತ್ ಶಾ, ನಿತೀಶ್‌ಕುಮಾರ್ ಅವರನ್ನು 'ಬಂದ ಪುಟ್ಟ ಹೋದ ಪುಟ್ಟ' ಎಂದು ವ್ಯಂಗ್ಯ ಮಾಡಿದ್ದರು, ಪ್ರಧಾನಿಯಾಗಲು ಅವರು ಅವಕಾಶವಾದಿಯಾಗಿದ್ದಾರೆ ಎಂದು ಜರೆದದ್ದೂ ಆಗಿದೆ. ಅದೇ ವರ್ಷ ಜೂನ್ 30ರಂದು ಅಮಿತ್ ಶಾ, ಎಲ್ಲಾ ರಾಜಕೀಯ ತತ್ವಗಳನ್ನು ಗಾಳಿಗೆ ತೂರಿದ ವ್ಯಕ್ತಿ ನಿತೀಶ್‌ಕುಮಾರ್, ಅವರು 'ಪಲ್ಟು ಬಾಬು' (ಪಲ್ಟಿ ಹೊಡೆಯುವವ), 'ಬೆನ್ನಿಗೆ ಚೂರಿ ಹಾಕುವವರು, ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು 5 ಬಾರಿ ಬಣಗಳನ್ನು ಬದಲಾಯಿಸಿದ್ದಾರೆ' ಎಂದು ಕೂಡ ಹಂಗಿಸಿದ್ದರು. 2017ರಲ್ಲಿ ಎನ್‌ಡಿಎಗೆ ಮತ್ತೆ ಮರಳಿದ ನಿತೀಶ್, 5 ವರ್ಷದ ನಂತರ ಮತ್ತೆ

> **ಅವಕಾಶವಾದಗಳು ಒಟ್ಟಿಗೆ ಕೈ ಜೋಡಿಸಿದವು. ಒಂದೊಮ್ಮೆ ಕಟುವಾಗಿ ಟೀಕಿಸಿದ್ದ, ವ್ಯಂಗ್ಯ ಮಾಡಿದ್ದ ಪಕ್ಷಗಳನ್ನು ಹಾಗೂ ನಾಯಕರನ್ನು, ಬಿಜೆಪಿ ಇಂದು ಅಧಿಕಾರಕ್ಕಾಗಿ ಪುಸಲಾಯಿಸಿದೆ. ಈ ಮೂಲಕ ಹಿಂದಿನ ಎಲ್ಲಾ ದಾಖಲೆಗಳನ್ನು ಬಿಜೆಪಿ ಮುರಿದಿದೆ. ಪ್ರಧಾನಿ ಮೋದಿಯವರನ್ನೂ ಒಳಗೊಂಡು, ಅನೇಕ ನಾಯಕರು ರಾತ್ರಿಕಳೆದು ಬೆಳಗಾಗುವುದರೊಳಗೆ ಯಾವುದೇ ಹಿಂಜರಿಕೆಯಿಲ್ಲದೆ ತಮ್ಮ ಬಣ್ಣವನ್ನು ಬದಲಾಯಿಸಿಕೊಂಡಿದ್ದಾರೆ.**

ಅಲ್ಲಿಂದ ಹೊರಬಂದರು. 2022ರ ಆಗಸ್ಟ್ 9ರಂದು ನಿತೀಶ್‌ಕುಮಾರ್ ಮುಖ್ಯಮಂತ್ರಿ ಸ್ಥಾನ ತ್ಯಜಿಸಿ, ಬಿಜೆಪಿ ಜೊತೆಗಿನ ಮೈತ್ರಿಯನ್ನು ಮುರಿದು, ಆರ್‌ಜೆಡಿ ಜೊತೆಗೂಡಿ ಸರ್ಕಾರವನ್ನು ರಚಿಸಿದರು. ತಮ್ಮ ಈ ನಿರ್ಧಾರಕ್ಕೆ, ಬಿಜೆಪಿಯು, ಜೆಡಿ(ಯು) ನಾಯಕರನ್ನು ಅವಮಾನಿಸಿ, ಪಕ್ಷವನ್ನು ದುರ್ಬಲಗೊಳಿಸುತ್ತಿತ್ತು ಎಂಬ ಕಾರಣವನ್ನು ನೀಡಿದರು. ಕಳೆದ 24 ವರ್ಷಗಳಲ್ಲಿ ನಿತೀಶ್‌ಕುಮಾರ್ 9 ಬಾರಿ ಮುಖ್ಯಮಂತ್ರಿಯಾಗಿದ್ದಾರೆ.

### ನಾಯ್ಡುರ ರಾಜಕೀಯ ಮೇಲಾಟದ ಇತಿಹಾಸ

ಚಂದ್ರಬಾಬು ನಾಯ್ಡು ಅವಕಾಶವಾದ, ನಿತೀಶ್‌ಕುಮಾರ್‌ಗಿಂತ ಭಿನ್ನವಾಗಿ ಏನೂ ಇಲ್ಲ. ಭಾರತೀಯ ಯುವ ಕಾಂಗ್ರೆಸ್‌ನ್ನು ನಾಯ್ಡು 1974ರಲ್ಲಿ ಸೇರಿಕೊಂಡರು. ಇಂದಿರಾಗಾಂಧಿಯವರ ಪುತ್ರ ಸಂಜಯ್‌ಗಾಂಧಿಯವರ ಸೆಳತಕ್ಕೆ ಸಿಕ್ಕಿ ಕಾಂಗ್ರೆಸ್ ಪಕ್ಷಕ್ಕಾಗಿ ಪ್ರಚಾರ ನಡೆಸಿದರು. 1978ರಲ್ಲಿ ಚಂದ್ರಗಿರಿ ವಿಧಾನಸಭಾ ಕ್ಷೇತ್ರದ ಟಿಕೆಟ್ ಗಿಟ್ಟಿಸಿದ ನಾಯ್ಡು, ಅಲ್ಲಿ ಗೆದ್ದ ನಂತರ, ಕಾಂಗ್ರೆಸ್ ನಾಯಕರ 'ಯಂಗ್ ಟರ್ಕ್ಸ್' ಗುಂಪಿನ ಹಾಗೂ ಅಂಜಯ್ಯ ಸಚಿವ ಸಂಪುಟದ ಭಾಗವಾದರು. ಅವರ ರಾಜಕೀಯ ಅದೃಷ್ಟ, ಸೂಪರ್‌ಸ್ಟಾರ್ ಎನ್‌ಟಿಆರ್ ಅವರನ್ನು ಭೇಟಿಯಾದ ಮೇಲೆ ಅರಳಲು ಆರಂಭವಾಯಿತು. ಎನ್‌ಟಿಆರ್ ಅವರ ದ್ವಿತೀಯ ಪುತ್ರಿ ಭುವನೇಶ್ವರಿಯವರೊಂದಿಗೆ 1981ರಲ್ಲಿ ವಿವಾಹವಾದ ನಂತರ ನಾಯ್ಡು ಟಿಡಿಪಿ(ತೆಲಗುದೇಶಂ ಪಕ್ಷ)ಯ ಪ್ರಮುಖ ನಾಯಕರಾದರು. ಎನ್‌ಟಿಆರ್ ತಮ್ಮ ಎರಡನೇ ಪತ್ನಿಯನ್ನು ತಮ್ಮ ಉತ್ತರಾಧಿಕಾರಿ ಎಂದು ಬಿಂಬಿಸಲು ಹವಣಿಸಿದಾಗ, ಎನ್‌ಟಿಆರ್ ವಿರುದ್ಧ 1995ರಲ್ಲಿ ತಿರುಗಿ ಬಿದ್ದ ನಾಯ್ಡು, ಬಹುಸಂಖ್ಯಾತ ಶಾಸಕರ ಬೆಂಬಲದೊಂದಿಗೆ ಎನ್‌ಟಿಆರ್‌ರನ್ನೇ ಮುಖ್ಯಮಂತ್ರಿ ಸ್ಥಾನದಿಂದ ಒಂದೇ ವಾರದಲ್ಲಿ ಕೆಳಗಿಳಿಸಿದರು. ಈ ಮೂಲಕ ಎನ್‌ಟಿಆರ್ ಅವರ 13 ವರ್ಷಗಳ ರಾಜಕೀಯ ಜೀವನ ಕೊನೆಗೊಂಡಿತು. 1995ರಲ್ಲಿ ಎನ್‌ಟಿಆರ್ ನಿಧನದ ನಂತರ ನಾಯ್ಡು ಪಕ್ಷದ ಅಧ್ಯಕ್ಷರಾದರು. 1996ರ ಲೋಕಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ದೊರೆಯದೆ ಇದ್ದಾಗ, ನಾಯ್ಡು, ಅಸ್ಸಾಂ ಗಣ ಪರಿಷತ್(ಎಜಿಪಿ), ಡಿಎಂಕೆ ಹಾಗೂ ಅಕಾಲಿದಳ ಪಕ್ಷಗಳೊಂದಿಗೆ ಮಾತನಾಡಿ ಬಿಜೆಪಿಯೇತರ, ಕಾಂಗ್ರೆಸ್‌ಯೇತರ, ಸಂಯುಕ್ತ ರಂಗ ಸರ್ಕಾರವನ್ನು ರಚಿಸುವುದಕ್ಕೆ ಮುಂದಾದರು. 1998ರ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಅತಂತ್ರ ಪರಿಸ್ಥಿತಿ ಏರ್ಪಟ್ಟಾಗ ನಾಯ್ಡು, ಸಂಯುಕ್ತ ರಂಗವನ್ನು ತೊರೆದು ಎನ್‌ಡಿಎಗೆ ಬಾಹ್ಯ ಬೆಂಬಲ ನೀಡಿದರು. ಈ ಮೂಲಕ ವಾಜಪೇಯಿ ನೇತೃತ್ವದಲ್ಲಿ ಮೈತ್ರಿ ಸರ್ಕಾರವು ರಚನೆಯಾಯಿತು. 2004ರಲ್ಲಿ ಬಿಜೆಪಿ ಹಾಗೂ ಟಿಡಿಪಿ ಮೈತ್ರಿಯು ಅವಿಭಜಿತ ಆಂಧ್ರಪ್ರದೇಶದಲ್ಲಿ ಹೀನಾಯವಾದ ಸೋಲು ಕಂಡಿತು. ಕಾಂಗ್ರೆಸ್ ಹಾಗೂ ತೆಲಂಗಾಣ ರಾಷ್ಟ್ರ ಸಮಿತಿ ಮೈತ್ರಿಯು ಅಧಿಕಾರದ ಗದ್ದುಗೆಯನ್ನು ಹಿಡಿಯಿತು. ನಾಯ್ಡು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಬೇಕಾಯಿತು. 2013–14 ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಯ ಮುನ್ನ, ಪ್ರತ್ಯೇಕ ತೆಲಂಗಾಣ ರಾಜ್ಯದ ಬೇಡಿಕೆಗೆ ಮತ್ತಷ್ಟು ಪುಷ್ಟಿ ದೊರೆಯಿತು. ಆಂಧ್ರಪ್ರದೇಶ ಹಾಗೂ ತೆಲಂಗಾಣ – ಎರಡು ರಾಜ್ಯಗಳು ಹುಟ್ಟಿದ ನಂತರ, ಆಂಧ್ರಪ್ರದೇಶಕ್ಕೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡುವ ಭರವಸೆಯಿಂದ ಬಿಜೆಪಿ ಉಲ್ಟಾ ಹೊಡೆದಾಗ, ನಾಯ್ಡು ಅವರು ಎನ್‌ಡಿಎ ಜೊತೆಗಿನ ಸಂಬಂಧವನ್ನು 2018ರಲ್ಲಿ ಕಡಿದುಕೊಂಡರು. 2022ರಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್‌ಮೋಹನ್‌ರೆಡ್ಡಿ ಅವರ ಮೂರು ರಾಜಧಾನಿ ಯೋಜನೆಯನ್ನು ಉಚ್ಚ ನ್ಯಾಯಾಲಯವು ರದ್ದುಗೊಳಿಸಿದಾಗ, ನಾಯ್ಡು ಅವರ ಅದೃಷ್ಟ ಮತ್ತೆ ಬದಲಾಯಿತು. 2024ರಲ್ಲಿ ಟಿಡಿಪಿಯು ಮತ್ತೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿತು.

2018ರ ಮಾರ್ಚ್‌ವರೆಗೆ ಎನ್‌ಡಿಎದಿಂದ ಹೊರಬರುವವರೆಗೂ, ಟಿಡಿಪಿಯು ಎನ್‌ಡಿಎದ ಭಾಗವಾಗಿತ್ತು. ಅದಾದ ನಂತರ ಡಿಸೆಂಬರ್ 2018ರಲ್ಲಿ ಚಂದ್ರಬಾಬು ನಾಯ್ಡು ಅವರು ಪ್ರಧಾನಮಂತ್ರಿಯವರನ್ನು 'ಟೊಳ್ಳು ವ್ಯಕ್ತಿ', 'ಅವರು ದೇಶಕ್ಕಾಗಿ ಏನೂ ಮಾಡಿಲ್ಲ' ಹಾಗೂ 'ತಾವು ಹೇಳಿದ ಹಾಗೆಯೇ ಆಗಬೇಕು' ಎಂದು ಅವರು ಬೆದರಿಕೆ ಒಡ್ಡುತ್ತಾರೆ ಎಂದು ಟೀಕಿಸಿದರು. 2019ರಲ್ಲಿ ಮೋದಿ ಆಂಧ್ರ ಪ್ರದೇಶಕ್ಕೆ ಭೇಟಿ ಮಾಡಲು ಯೋಜಿಸಿದ್ದ ಫೆ.10ನ್ನು ನಾಯ್ಡು ಕರಾಳ ದಿನವೆಂದು ಘೋಷಣೆ ಮಾಡಿದರು. ಗುಂಟೂರು ಸಾರ್ವಜನಿಕ ಸಭೆಯ ಸಂದರ್ಭದಲ್ಲಿ, ಟಿಡಿಪಿ ಕಾರ್ಯಕರ್ತರು ಮೋದಿ ವಿರುದ್ಧ ಕಪ್ಪು ಬಲೂನುಗಳನ್ನು ಆಕಾಶದಲ್ಲಿ ಹಾರಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಗುಂಟೂರು ಸಾರ್ವಜನಿಕ ಸಭೆಯಲ್ಲಿ ಮೋದಿ, "ಚಂದ್ರಬಾಬು ನಾಯ್ಡು ಒಬ್ಬ ನಂಬಿಕೆದ್ರೋಹಿ, ತನ್ನ ಮಾವ ಎನ್‌ಟಿಆರ್ ಬೆನ್ನಿಗೆ ಚೂರಿ ಹಾಕಿದವರು, ಅವರಿಗೆ ತನ್ನ ಮಗನ ಭವಿಷ್ಯವನ್ನು ಭದ್ರಪಡಿಸುವುದರಲ್ಲಿ ಮಾತ್ರ ಆಸಕ್ತಿಯಿದೆ" ಎಂದು ದೂರಿದರು. ಜನವರಿ 2019ರಲ್ಲಿ, ನರೇಂದ್ರ ಮೋದಿ ಅವರು ಟಿಡಿಪಿ ರಾಜ್ಯ ನಾಯಕರ ಮೇಲೆ ರೂ.20,000 ಕೋಟಿ ಭ್ರಷ್ಟಾಚಾರದ ಆರೋಪವನ್ನು ಹೊರೆಸಿದರು. ಹಿಂದುಳಿದ ಜಿಲ್ಲೆಗಳಿಗೆ ಮಂಜೂರು ಮಾಡಲಾದ ರೂ.1000 ಕೋಟಿ ಹಣ ಕುರಿತಂತೆ ಮತ್ತು ಅದನ್ನು ಬಳಕೆ ಮಾಡಿರುವ ಪ್ರಮಾಣ ಪತ್ರ ನೀಡಿಲ್ಲ ಎಂದೂ ಸಹ ಮೋದಿ ಅವರು ಹೇಳಿದರು. ಹೀಗೆ ಒಬ್ಬರ ಮೇಲೊಬ್ಬರು ಆರೋಪ, ಪ್ರತ್ಯಾರೋಪ, ಕೆಸರೆರಚಾಟ ಮಾಡುವುದು ನಡೆದುಕೊಂಡು ಬಂದಿತು.

ಇಷ್ಟೆಲ್ಲಾ ಆದ ನಂತರ, ಲೋಕಸಭಾ ಚುನಾವಣೆಗೆ ಮುನ್ನ ಟಿಡಿಪಿಯನ್ನು ಎನ್‌ಡಿ. ಬಣಕ್ಕೆ ಸೇರಿಸಿಕೊಳ್ಳುವುದರಲ್ಲಿ ಪ್ರಧಾನಿ ಮೋದಿ ಯಶಸ್ವಿಯಾದರು ಹಾಗೂ ಈಗ ಚಂದ್ರಬಾಬು ನಾಯ್ಡು ಬೆಂಬಲದಿಂದ ಕೇಂದ್ರದಲ್ಲಿ ಸರ್ಕಾರ ಕೂಡ ರಚನೆಯಾಗಿದೆ. ಪ್ರಧಾನಮಂತ್ರಿ ಸ್ಥಾನಕ್ಕೆ ಮೋದಿ ಅವರ ಹೆಸರು ಸೂಚಿಸಿದ್ದೇ ನಾಯ್ಡು. ಮೋದಿ ಅವರನ್ನು 'ಸರಿಯಾದ ಸಮಯಕ್ಕೆ ಸೂಕ್ತ ನಾಯಕ' ಎಂದು ಬಣ್ಣಿದವರು ಈ ನಾಯ್ಡು. ಈಗ ಟಿಡಿಪಿ ಆಂಧ್ರದಲ್ಲಿ ಅಧಿಕಾರಕ್ಕೆ ಬಂದ ನಂತರ, ನಾಯ್ಡು ಮೇಲಿನ ಭ್ರಷ್ಟಾಚಾರ ಪ್ರಕರಣಗಳು ತಾನಾಗಿಯೇ ಮುಚ್ಚಿಹೋಗಲಿವೆ. ಮೋದಿ ಪಕ್ಕದಲ್ಲಿ ಕೂರಲು ಇಷ್ಟವಿಲ್ಲದ ನಾಯ್ಡುರನ್ನು, ಮೋದಿಯವರು, ಮುಜುಗರ ತರುವ ರೀತಿಯಲ್ಲಿ ಕೈಹಿಡಿದೆಳೆದು ತಮ್ಮ ಪಕ್ಕದಲ್ಲಿ ಕೂರಿಸಿಕೊಳ್ಳುತ್ತಿರುವ ದೃಶ್ಯ ಮಾಧ್ಯಮಗಳಲ್ಲಿ ವೈರಲ್ ಆದದ್ದನ್ನು ಜನರು ಗಮನಿಸಿದ್ದಾರೆ. ಅಧಿಕಾರದಾಹದ ಈ ಬಂಡವಾಳಶಾಹಿ ನಾಯಕರು ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ ಎಂಬುದಕ್ಕೆ ಇದು ಒಂದು ನಿದರ್ಶನ.

ಅವಕಾಶವಾದಗಳು ಹೀಗೆ ಒಟ್ಟಿಗೆ ಕೈ ಜೋಡಿಸಿದವು. ಒಂದೊಮ್ಮೆ ಕಟುವಾಗಿ ಟೀಕಿಸಿದ್ದ, ವ್ಯಂಗ್ಯ ಮಾಡಿದ್ದ ಪಕ್ಷಗಳನ್ನು ಹಾಗೂ ನಾಯಕರನ್ನು, ಬಿಜೆಪಿ ಇಂದು ಅಧಿಕಾರಕ್ಕಾಗಿ ಪುಸಲಾಯಿಸುತ್ತಿದೆ. ಈ ಮೂಲಕ ಹಿಂದಿನ ಎಲ್ಲಾ ದಾಖಲೆಗಳನ್ನು ಬಿಜೆಪಿ ಮುರಿದಿದೆ. ಪ್ರಧಾನ ಮಂತ್ರಿ ಮೋದಿ ಅವರನ್ನೂ ಒಳಗೊಂಡು, ಅನೇಕ ನಾಯಕರು ರಾತ್ರಿಕಳೆದು ಬೆಳಗಾಗುವುದರೊಳಗೆ ಯಾವುದೇ ಹಿಂಜರಿಕೆಯಿಲ್ಲದೆ ತಮ್ಮ ಬಣ್ಣವನ್ನು ಬದಲಾಯಿಸಿಕೊಂಡಿದ್ದಾರೆ, ತಾವೇ ಹೇಳಿದ್ದ ಮಾತುಗಳಿಂದ ಉಲ್ಟಾ ಹೊಡೆದಿದ್ದಾರೆ. ಈಗ ಯಾರು 'ಪಲ್ಟು ಬಾಬು'?

## ಹತ್ರಾಸ್: ಕಾಲ್ತುಳಿತ ಪ್ರಕರಣ: ಪರಿಹಾರಕ್ಕೆ ಎಸ್‌ಯುಸಿಐ(ಸಿ) ಆಗ್ರಹ!

**ಎಸ್‌ಯುಸಿಐ(ಸಿ) ಪಶ್ಚಿಮ ಉತ್ತರಪ್ರದೇಶ ರಾಜ್ಯದ ಸಂಘಟನಾ ಕಾರ್ಯದರ್ಶಿ ಕಾಮ್ರೇಡ್. ವಿಜಯ್‌ಪಾಲ್ ಸಿಂಗ್ ಜುಲೈ 7ರಂದು ಈ ಕೆಳಗಿನ ಹೇಳಿಕೆ ಯನ್ನು ನೀಡಿದ್ದಾರೆ:**

ಉತ್ತರಪ್ರದೇಶದ ಹತ್ರಾಸ್‌ನಲ್ಲಿ ಒಂದು ಧಾರ್ಮಿಕ ಕಾರ್ಯಕ್ರಮವಾದ ಸತ್ಸಂಗದಲ್ಲಿನ ಕೆಟ್ಟ ನಿರ್ವಹಣೆಯಿಂದಾಗಿ ಸಂಭವಿಸಿದ ಕಾಲ್ತುಳಿತದಲ್ಲಿ 130 ಜನರು ಪ್ರಾಣ ನೀಗಿದ್ದು, ಅದರಲ್ಲಿ ಬಹುತೇಕರು ಮಹಿಳೆಯರು ಮತ್ತು ಮಕ್ಕಳು. ಈ ಹೃದಯವಿದ್ರಾವಕ ಘಟನೆಗೆ ನಮ್ಮ ಪಕ್ಷ ಗಾಢ ಶೋಕವನ್ನೂ, ನೊಂದ ಕುಟುಂಬಗಳಿಗೆ ಅತೀವ ಸಂತಾಪವನ್ನೂ ವ್ಯಕ್ತಪಡಿಸುತ್ತದೆ. ಸಂಘಟನಾಕಾರರು ಮತ್ತು ಸರ್ಕಾರದ ದಿವ್ಯ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಸೂಕ್ತ ವ್ಯವಸ್ಥೆ ಮಾಡಿದ್ದಿದ್ದರೆ, ಈ ದುರಂತವನ್ನು ತಪ್ಪಿಸಬಹುದಾಗಿತ್ತು. ರಾಜ್ಯ ಸರ್ಕಾರ, ಮರಣಹೊಂದಿದವರ ಕುಟುಂಬದವರಿಗೆ ಈ ಕೂಡಲೇ 5 ಲಕ್ಷ ರೂ. ಪರಿಹಾರ ನೀಡಬೇಕೆಂದು, ಗಾಯಗೊಂಡವರಿಗೆ ಉಚಿತ ತುರ್ತು ಚಿಕಿತ್ಸೆ ಒದಗಿಸಬೇಕೆಂದು ನಾವು ಒತ್ತಾಯಿಸುತ್ತೇವೆ. ಜೊತೆಗೆ, ಈ ಪ್ರಕರಣದ ಕುರಿತು ಒಂದು ನಿಷ್ಪಕ್ಷಪಾತವಾದ ತನಿಖೆ ನಡೆಸಿ, ಇಷ್ಟೊಂದು ಅಮೂಲ್ಯ ಜೀವಗಳ ಸಾವಿಗೆ ಮತ್ತು ನೂರಾರು ಜನರ ಗಾಯಗೊಳ್ಳಲು ಕಾರಣರಾದವರಿಗೆ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸುತ್ತೇವೆ.

## ಹುಸಿ ಮತಗಟ್ಟೆ ಸಮೀಕ್ಷೆ:

# ಶೇರುಪೇಟೆಯ ಮೋಸ ಬಟಾಬಯಲು

ಬಿಜೆಪಿ ಭಾರಿ ಬಹುಮತವನ್ನು ಪಡೆದು ಅಧಿಕಾರಕ್ಕೆ ಬರಲಿದೆ. ಹೀಗಾಗಿ, ಶೇರುಗಳನ್ನು ಖರೀದಿ ಮಾಡಿದರೆ ಹೂಡಿಕೆದಾರರಿಗೆ ಭಾರಿ ಲಾಭ ಸಿಗಲಿದೆ ಎಂಬ ಸುದ್ದಿಯನ್ನು ಬಿಜೆಪಿ ಸರ್ಕಾರದಲ್ಲಿದ್ದವರು ವ್ಯವಸ್ಥಿತವಾಗಿ ಪ್ರಚಾರ ಮಾಡಿದರು. ಇದೊಂದು ಬಹುದೊಡ್ಡ ಹಗರಣ ಎಂದು ವಿರೋಧ ಪಕ್ಷಗಳು ಆರೋಪ ಮಾಡಿದ್ದವು.

ಹೆಚ್ಚು ಲಾಭ ಸಿಗಲಿದೆ ಎಂಬ ಆಸೆಯಿಂದ ಹಲವಾರು ಸಣ್ಣ ಪ್ರಮಾಣದ ಹೂಡಿಕೆದಾರರು ಸಹ ಚುನಾವಣಾ ಫಲಿತಾಂಶದ ನಿರೀಕ್ಷೆಯಲ್ಲಿ ಶೇರುಗಳನ್ನು ಖರೀದಿ ಮಾಡಿದ್ದರು. ಅದಲ್ಲದೇ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಸಹ ಭಾರತೀಯ ಶೇರು ಮಾರುಕಟ್ಟೆಗೆ ಭಾರಿ ಪ್ರಮಾಣದ ಹಣದ ಹೊಳೆಯನ್ನು ಹರಿಸಿದರು. ಇದೆಲ್ಲದರ ಪರಿಣಾಮವಾಗಿ ಶೇರು ಪೇಟೆ ಸೂಚ್ಯಂಕದಲ್ಲಿ ಕೃತಕ ಏರಿಕೆ ಕಂಡು ಬಂತು. ಜೂನ್ 3ರಂದು ಅದು ತನ್ನ ಸಾರ್ವಕಾಲಿಕ ದಾಖಲೆಯ ಮಟ್ಟವನ್ನು ತಲುಪಿತು. ಬಿಜೆಪಿ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದೇ ಬರುತ್ತದೆ ಎಂಬ ನಿರೀಕ್ಷೆಯಿಂದ ಸೂಚ್ಯಂಕ ಉತ್ತಮ ಏರಿಕೆ ಕಂಡಿತ್ತಾದರೂ ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ಭಾರಿ ಬಹುಮತ ಪಡೆಯುವುದಿರಲಿ ಸರ್ಕಾರ ರಚಿಸಲು ಬೇಕಾದ ಸರಳ ಬಹುಮತವನ್ನೂ ಪಡೆಯಲಿಲ್ಲ. ಈ ಸುದ್ದಿ ಬರುತ್ತಿದ್ದಂತೆಯೇ ದೊಡ್ಡ ಹೂಡಿಕೆದಾರರು ಲಾಭ ಗಳಿಸಲಾಗದು ಎಂದರಿತು ಶೇರುಗಳನ್ನು ವಾಪಸ್ ಪಡೆಯಲು ಶುರು ಮಾಡಿದ್ದರಿಂದ ಏಕಾಏಕಿ ಶೇರುಪೇಟೆಯು ಕುಸಿತ ಕಂಡಿತು.

**ಬಿಜೆಪಿಯು ತಾನು ಅಭೂತಪೂರ್ವ ಗೆಲುವು ಸಾಧಿಸುವುದಾಗಿ ಭರವಸೆ ನೀಡಿ ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವಂತೆ ಜನರನ್ನು ಆ ಪಕ್ಷದ ಮುಖಂಡರು ಪ್ರಚೋದಿಸಿದ್ದರು. ಇದನ್ನು ಆಧರಿಸಿ ಮಾರಿಷಸ್‌ನಲ್ಲಿ ಸಕ್ರಿಯವಾಗಿರುವ ವಿದೇಶಿ ಹೂಡಿಕೆದಾರರು ಮೇ 31ರಂದು ಹೆಚ್ಚಿನ ಪ್ರಮಾಣದ ಹೂಡಿಕೆಯನ್ನು ಮಾಡಿದರು. ಸಾಮಾನ್ಯ ಹೂಡಿಕೆದಾರರೂ ಸಹ ತಮ್ಮ ಶೇರುಗಳನ್ನು ತಕ್ಷಣ ಮಾರಾಟ ಮಾಡಿದರು. ಜೂನ್ 4ರ ಫಲಿತಾಂಶವು ಬಿಜೆಪಿಗೆ ನಿರೀಕ್ಷಿತ ಬಹುಮತವನ್ನು ತರದಿದ್ದರಿಂದ ಶೇರುಪೇಟೆ ಕುಸಿತಕಂಡಿತು. ಸಾಮಾನ್ಯ ಹೂಡಿಕೆದಾರರ ಸಂಪತ್ತು ₹ 31 ಲಕ್ಷ ಕೋಟಿಯಷ್ಟು ಕರಗಿತು.**

ಶೇರು ಮಾರುಕಟ್ಟೆ ವ್ಯವಹಾರವನ್ನು ಸರಳೀಕರಿಸಿ ಹೇಳುವುದಾದರೆ, ಇದರಲ್ಲಿ ಎರಡು ಬಗೆಯ ಶೇರು ಮಾರುಕಟ್ಟೆಗಳಿವೆ. ಒಂದು ಪ್ರಾಥಮಿಕ ಮಾರುಕಟ್ಟೆ (ಕಂಪನಿಯ ಮಾರುಕಟ್ಟೆ ಮೌಲ್ಯವನ್ನು ಹೆಚ್ಚಿಸಲು ಮತ್ತು ಬಂಡವಾಳವನ್ನು ಕ್ರೋಢೀಕರಿಸಲು ಕಂಪನಿಯು ಹೊಸ ಶೇರುಗಳನ್ನು ಬಿಡುಗಡೆ ಮಾಡುವುದು), ಮತ್ತೊಂದು ದ್ವಿತೀಯ ಮಾರುಕಟ್ಟೆ (ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪ್ರಾಥಮಿಕವಾಗಿ ಬಿಡುಗಡೆಯಾದ ಶೇರುಗಳು ಕೈ ಬದಲಾಯಿಸಿ ಒಬ್ಬರಿಂದ ಇನ್ನೊಬ್ಬರ ಕೈಸೇರಿ ಮಾರಾಟವಾಗುವುದು. ಆಗ ಶೇರುಗಳ ಮೌಲ್ಯ ಒಂದು ನಿರ್ದಿಷ್ಟ ದಿನದಲ್ಲಿ ಹಲವು ಪಟ್ಟು ಏರುಪೇರಾಗಬಹುದು). ಉದಾಹರಣೆಗೆ ಕಂಪನಿಯೊಂದು 1000 ಶೇರುಗಳನ್ನು ಬಿಡುಗಡೆ ಮಾಡಿದೆ ಎಂದಿಟ್ಟುಕೊಳ್ಳೋಣ. ಅದರಲ್ಲಿ ಪ್ರತಿ ಶೇರಿನ ಬೆಲೆ ₹10ರಂತೆ ಲೆಕ್ಕ ಹಾಕಿದರೆ ಆ ಶೇರುಗಳ ಮಾರುಕಟ್ಟೆ ಮೌಲ್ಯ ₹ 10,000ವಾಗುತ್ತದೆ. ಸ್ಟಾಕ್ ಮಾರ್ಕೆಟ್ ಸೂಚ್ಯಂಕವೆಂದರೆ ಅದು ಆಯ್ದ ಶೇರುಗಳ ಒಂದು ಗುಚ್ಛವಾಗಿರುತ್ತದೆ. ಆ ಶೇರುಗಳ ಬೆಲೆ ಏರಿಕೆ ಅಥವಾ ಇಳಿಕೆ ಸೂಚ್ಯಂಕದ ಏರಿಳಿತಗಳಿಗೆ ಆಧಾರ. ಉದಾಹರಣೆಗೆ ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ (ಬಿಎಸ್‌ಇ) ಸೂಚ್ಯಂಕವು (ಸೆನ್ಸೆಕ್ಸ್ ಎಂದೂ ಕರೆಯಲಾಗುತ್ತದೆ) 30 ಶೇರುಗಳ ಒಂದು ಗುಚ್ಛ. ಮಾರುಕಟ್ಟೆಯಲ್ಲಿ ಮೌಲ್ಯ ವೃದ್ಧಿಯಾಗುವುದು ಅಥವಾ ಪತನವಾಗುವುದು ಈ ಶೇರುಗಳನ್ನು ಅವಲಂಬಿಸಿರುತ್ತದೆ.

ಇನ್ನೊಂದು ಸರಳ ಸತ್ಯವನ್ನು ತಿಳಿದುಕೊಳ್ಳುವುದಾದರೆ ದ್ವಿತೀಯ ಶೇರು ಮಾರುಕಟ್ಟೆಯಲ್ಲಿ ಮೌಲ್ಯ ಹೆಚ್ಚಾಗುವುದು ಅಥವಾ ಕುಸಿತವಾಗುವುದರಿಂದ ದೇಶದ ಆರ್ಥಿಕತೆಯ ಮೇಲೆ ಯಾವುದೇ ಪರಿಣಾಮವಾಗಿರುವುದಿಲ್ಲ. ಇದು ಯಾವುದೇ ಉತ್ಪಾದಕತೆಯ ಮೇಲೆ ಹೂಡಿಕೆ, ಉದ್ಯೋಗಾಧಾರಿತ ಕೈಗಾರಿಕೆಗಳ ಸ್ಥಾಪನೆ ಅಥವಾ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಯಾವ ಕೊಡುಗೆಯನ್ನೂ ನೀಡುವುದಿಲ್ಲ. ಶೇರು ಮಾರುಕಟ್ಟೆಯಲ್ಲಿ ದಿಢೀರ್ ಮೌಲ್ಯ ಏರಿಕೆ ಅಥವಾ ಕುಸಿತದ ಮೂಲಕ ಭ್ರಮಾಲೋಕವನ್ನು ಸೃಷ್ಟಿಸಿ ಬಂಡವಾಳಶಾಹಿ ವ್ಯವಸ್ಥೆಯು ಜನರನ್ನು ಮರುಳು ಮಾಡುತ್ತದೆ.

ದ್ವಿತೀಯ ಶೇರು ಮಾರುಕಟ್ಟೆಯಲ್ಲಿನ ಮೌಲ್ಯ ಹೆಚ್ಚಾಗುವುದು ಅಥವಾ ಕಡಿಮೆಯಾಗುವುದು ಸಂಪೂರ್ಣವಾಗಿ ಒಂದು ಅಂದಾಜಿನ ಊಹಾಪೋಹದ ಲೆಕ್ಕಾಚಾರದ ಮೇಲೆ ನಡೆಯುತ್ತದೆ. ಭವಿಷ್ಯದಲ್ಲಿ ಯಾವ ಶೇರಿನ ಬೆಲೆ ಏರಲಿದೆ ಎಂಬ ನಿರೀಕ್ಷೆ ಇರುತ್ತದೆಯೋ ಅಂತಹ ಶೇರುಗಳ ಖರೀದಿ ಹೆಚ್ಚಾಗುತ್ತದೆ. ಮತ್ತೊಂದೆಡೆ, ಶೇರಿನ ಬೆಲೆ ಯಾವುದು ಇಳಿಕೆಯಾಗಬಹುದೊ ಆಗ ಅಂತಹ ಶೇರುಗಳನ್ನು ಮಾರಾಟ ಮಾಡುತ್ತಾರೆ.

ಮಾರುಕಟ್ಟೆಯ ಅಂದಾಜನ್ನು ಶೇರು ಮಾರುಕಟ್ಟೆಯ ಪಂಡಿತರು ಸಾಮಾನ್ಯವಾಗಿ ರಾಜಕೀಯ ಬೆಳವಣಿಗೆಗಳು, ಪ್ರಾಕೃತಿಕ ವಿಪತ್ತುಗಳು, ಯುದ್ಧಗಳು ಇತ್ಯಾದಿ ಬೆಳವಣಿಗೆಗಳೊಂದಿಗೆ ಬೆಸೆಯುತ್ತಾರೆ. ಸದ್ಯದ ಪ್ರಕರಣವನ್ನು ಗಮನಿಸುವುದಾದರೆ ಬಿಜೆಪಿ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದರೆ ಹೆಚ್ಚಿನ ಆರ್ಥಿಕ ಸುಧಾರಣಾ ಕ್ರಮಗಳು (ದೊಡ್ಡ ಮಟ್ಟದ ಖಾಸಗೀಕರಣ, ಉದ್ಯಮಪತಿಗಳಿಗೆ ಹೆಚ್ಚಿನ ಪ್ರಮಾಣದ ರಿಯಾಯಿತಿ ಇತ್ಯಾದಿ) ವೇಗ ಪಡೆಯುತ್ತವೆ. ಬ್ಯಾಂಕುಗಳು ಠೇವಣಿಗಳ ಮೇಲೆ ಕಡಿಮೆ ಬಡ್ಡಿಯನ್ನು ನೀಡಲಾರಂಭಿಸಿದರೆ ಗ್ರಾಹಕರು ತಮ್ಮ ಹಣವನ್ನು ಬ್ಯಾಂಕುಗಳಲ್ಲಿ ಕಡಿಮೆ ಬಡ್ಡಿಗೆ ಇರಿಸುವ ಬದಲು ಶೇರುಗಳನ್ನು ಖರೀದಿಸಲು ಬಯಸುತ್ತಾರೆ. ಇದರಿಂದ ಮಾರುಕಟ್ಟೆಯಲ್ಲಿ ಬಂಡವಾಳದ ಹರಿವು ಹೆಚ್ಚಲಿದೆ ಮತ್ತು ದ್ವಿತೀಯ ಮಾರುಕಟ್ಟೆಯು ಚೇತರಿಕೆ ಕಾಣಲಿದೆ ಎಂದು ಊಹಿಸಲಾಗಿತ್ತು.

ಯಾವುದೇ ಅಡೆತಡೆ ಇಲ್ಲದಂತೆ ತಕ್ಷಣದ ಲಾಭ ಮಾಡಿಕೊಳ್ಳಲು ಬಂಡವಾಳಶಾಹಿಗಳು ಇಂತಹ ಊಹಾಪೋಹದ ಮೇಲೆ ನಡೆಯುವ ಶೇರುಪೇಟೆಯ ಮೇಲೆ ಹೆಚ್ಚು ಹಣವನ್ನು ತೊಡಗಿಸುತ್ತಾರೆ. ವಿದೇಶಿ ಹೂಡಿಕೆ ಸಂಸ್ಥೆಗಳು ದೊಡ್ಡ ಏಕಸ್ವಾಮ್ಯಾಧಿಪತಿ ಮನೆತನ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅವುಗಳ ಶೆಲ್ ಕಂಪನಿಗಳ ಮೂಲಕ ವಿಶ್ವದೆಲ್ಲೆಡೆಯ ಶೇರು ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡುತ್ತಿರುತ್ತವೆ. ಭಾರತದ ಶೇರು ಮಾರುಕಟ್ಟೆಯಲ್ಲಿ ಅವರಿಗೆ ಹೆಚ್ಚಿನ ಲಾಭ ಸಿಗುವುದಾದರೆ ಅವರು ಇಲ್ಲಿಗೇ ಬಂದು ಹೂಡಿಕೆ ಮಾಡುತ್ತಾರೆ. ಇದಕ್ಕಿಂತ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಹೆಚ್ಚಿನ ಗಳಿಕೆ ಸಾಧ್ಯವಾಗುವುದಾದರೆ ಅವರು ಇಲ್ಲಿಂದ ಅಲ್ಲಿಗೆ ಸ್ಥಳಾಂತರಗೊಳ್ಳುತ್ತಾರೆ.

ಗಾಳಿಸುದ್ದಿಗಳನ್ನು ಹಬ್ಬಿಸುವವರು ವದಂತಿಗಳನ್ನು ಹರಡುವ ಮೂಲಕ ಮಾರುಕಟ್ಟೆಯಲ್ಲಿ ಕೃತಕವಾಗಿ ಬೇಡಿಕೆ ಹೆಚ್ಚಿಸುವ ಕೃತ್ಯದಲ್ಲಿ ತೊಡಗಿರುತ್ತಾರೆ. ಮಾರುಕಟ್ಟೆಯಲ್ಲಿ ಸಾಮಾನ್ಯ ಹೂಡಿಕೆದಾರರಿಂದ ಹಣ ತೊಡಗಿಸುವಂತೆ ಪ್ರಚೋದಿಸುತ್ತಾರೆ. ಸಾಮಾನ್ಯ ಹೂಡಿಕೆದಾರರು ಅವರಷ್ಟು ಪರಿಣಿತಿ ಹೊಂದಿರುವುದಿಲ್ಲ. ಮಾರುಕಟ್ಟೆ ಕುರಿತು ಗಾಳಿಸುದ್ದಿ ಹಬ್ಬಿಸುವವರು ಏಕಾಏಕಿ ಹೆಚ್ಚು ಹಣ ಹೂಡಿಕೆ ಮಾಡುವ ಮೂಲಕ ಮಾರುಕಟ್ಟೆ ಏರುಗತಿಯಲ್ಲಿದೆ ಎಂಬುದನ್ನು ಬಿಂಬಿಸುತ್ತಾರೆ. ಒಮ್ಮೆಲೆ ಶೇರುಗಳನ್ನು ಮಾರಾಟ ಮಾಡಲು ಶುರು ಮಾಡುತ್ತಾರೆ. ಇದರಿಂದ ಅಪಾರ ಲಾಭ ಮಾಡಿಕೊಳ್ಳುತ್ತಾರೆ. ಮಾರುಕಟ್ಟೆಯ ಆಳ ಅಗಲ ಗೊತ್ತಿರದ ಸಾಮಾನ್ಯ ಹೂಡಿಕೆದಾರರ ಶೇರು ಮೌಲ್ಯ ಗಣನೀಯವಾಗಿ ಕುಸಿತ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ, ಒಬ್ಬ ತನ್ನ ಶೇರಿನ ಮೌಲ್ಯ ಒಂದು ತಿಂಗಳಲ್ಲಿ ಹೆಚ್ಚಾಗಬಹುದು ಎಂಬ ನಿರೀಕ್ಷೆಯಿಂದ ₹ 50 ಹೂಡಿಕೆ ಮಾಡಿರುತ್ತಾನೆ. ಆದರೆ, ಆ ಶೇರಿನ ಮೌಲ್ಯ ₹ 15ಕ್ಕೆ ಕುಸಿದಿರುತ್ತದೆ. ಶೇರು ಮಾರುಕಟ್ಟೆಯ ಕುಟಿಲತೆಗಳನ್ನು ಗ್ರಹಿಸಲು ಆಗದ್ದಕ್ಕೆ ಆತ ತನ್ನದೇ ಹಣದಲ್ಲಿ ₹35 ಕಳೆದುಕೊಳ್ಳುತ್ತಾನೆ.

ಈ ಹಿನ್ನೆಲೆಯಲ್ಲಿ ಆಡಳಿತಾರೂಢ ಬಿಜೆಪಿಯು ತಾನು ಅಭೂತಪೂರ್ವ ಗೆಲುವು ಸಾಧಿಸುವುದಾಗಿ ಭರವಸೆ ನೀಡಿ ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವಂತೆ ಜನರಿಗೆ ಆ ಪಕ್ಷದ ಮುಖಂಡರು ಪ್ರಚೋದಿಸಿದ್ದರು ಎಂಬ ವಿರೋಧ ಪಕ್ಷಗಳ ಆರೋಪವನ್ನು ನೋಡಬೇಕಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜೂನ್ 4ರ ಒಳಗಾಗಿ ಶೇರುಗಳನ್ನು ಕೊಳ್ಳುವಂತೆ ಸಲಹೆ ನೀಡಿದ್ದರು. ಅಮಿತ್ ಶಾ ಅವರು ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ, ಶೇರು ಮಾರುಕಟ್ಟೆಯ ಪತನಕ್ಕೂ ಚುನಾವಣಾ ಫಲಿತಾಂಶಗಳಿಗೂ ಸಂಬಂಧವಿಲ್ಲ. ಆದರೂ, ಜೂನ್ 4ರ ಒಳಗಾಗಿ ಶೇರು ಖರೀದಿ ಮಾಡಿ, ಅದರ ಮೌಲ್ಯ ಹೆಚ್ಚಾಗುತ್ತದೆ ಎಂದಿದ್ದರು.

ಈ ಹೇಳಿಕೆಯನ್ನು ಆಧರಿಸಿ ಮಾರಿಷಸ್‌ನಲ್ಲಿ ಸಕ್ರಿಯವಾಗಿರುವ ವಿದೇಶಿ ಹೂಡಿಕೆದಾರರು ಮೇ 31ರಂದು ಹೆಚ್ಚಿನ ಪ್ರಮಾಣದ ಹೂಡಿಕೆಯನ್ನು ಮಾಡಿದರು. ಸಾಮಾನ್ಯ ಹೂಡಿಕೆದಾರರೂ ಸಹ ತಮ್ಮ ಶೇರುಗಳನ್ನು ತಕ್ಷಣ ಮಾರಾಟ ಮಾಡಿದರು. ಸಾಮಾನ್ಯ ಹೂಡಿಕೆದಾರರ ಸಂಪತ್ತು ₹ 31 ಲಕ್ಷ ಕೋಟಿಯಷ್ಟು ಕರಗಿತು. ನಕಲಿ ಮತಗಟ್ಟೆ ಸಮೀಕ್ಷೆಯಲ್ಲಿ ನಂಬಿಕೆ ಹುಟ್ಟಿಸಿ ಸಾಮಾನ್ಯರ ಹೂಡಿಕೆ ಹಣವನ್ನು ನಷ್ಟ ಮಾಡಿದ ಕುರಿತು ಸಮಗ್ರ ತನಿಖೆ ಅಗತ್ಯವಾಗಿ ಆಗಬೇಕಿದೆ. ■

## ತಾವು ದೈವಾಂಶ ಸಂಭೂತರು!

# ಎಲ್ಲಾ ಫ್ಯಾಸಿಸ್ಟ್ ನಿರಂಕುಶವಾದಿಗಳ ಜಪ!!

ಯಾವುದೇ ಎಗ್ಗುಸಿಗ್ಗಿಲ್ಲದೇ ಕೋಮುವಾದಿ ಹಿಂದುತ್ವ ಸಿದ್ಧಾಂತವನ್ನು ಸಾಧನವಾಗಿ ಬಳಸಿಕೊಂಡು ಬಿಜೆಪಿ, ಅಧಿಕಾರ ಪಡೆದು ಮತ್ತೊಮ್ಮೆ ಸರ್ಕಾರವನ್ನು ರಚಿಸಿದೆ. ಸಾರ್ವತ್ರಿಕ ಚುನಾವಣೆಯಲ್ಲಿ ಗೆಲ್ಲಲು ಸತತ ಮೂರನೇ ಅವಧಿಯಲ್ಲೂ ಅದೇ 'ಹಿಂದುತ್ವ'ದ ಹಾದಿ ಹಾಗೂ ಮುಸ್ಲಿಂ ವಿರೋಧಿ ದ್ವೇಷದ ವಿಷ ಕಾರುವ ತಂತ್ರವನ್ನು ಅದು ಅನುಸರಿಸಿದೆ. ಅತ್ಯಂತ ಆಡಂಬರದ 'ರಾಮಮಂದಿರದ ಉದ್ಘಾಟನೆ'ಯಿಂದ ಹಿಡಿದು ಕನ್ಯಾಕುಮಾರಿಯ ಬಂಡೆಯ ಮೇಲೆ 'ಧ್ಯಾನಾಸಕ್ತ ಮೋದಿ'ಯ ಇಮೇಜ್‌ವರೆಗೆ ಮಾಧ್ಯಮಗಳ ಕಣ್ಣು ಕೋರೈಸುವ ಪ್ರಚಾರದ ಮಧ್ಯೆ ಜನತೆಯೆದುರು ಮೋದಿಯನ್ನು ಬಿಂಬಿಸುವಲ್ಲಿ ಆರ್‌ಎಸ್‌ಎಸ್–ಬಿಜೆಪಿ ನಿರ್ದೇಶಿತ 'ಕೋಮು ದ್ವೇಷದ ಕಾರ್ಯಸೂಚಿ'ಯ ಛಾಪು ಎಲ್ಲೆಡೆ ಎದ್ದು ಕಾಣುತಿತ್ತು. ಚುನಾವಣಾ ಪ್ರಚಾರದ ಉದ್ದಕ್ಕೂ ಪ್ರಧಾನಿ ಮೋದಿಯವರನ್ನು 'ದೈವಾಂಶ ಸಂಭೂತರು' ಎಂದು ಬಿಂಬಿಸಲು ಸತತ ಪ್ರಯತ್ನ ಮಾಡಲಾಯಿತು. ಬಿಜೆಪಿಯ ವಕ್ತಾರ, ಮೋದಿ ಭಕ್ತ, ಪುರಿ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಸಂಭಿತ್ ಪಾತ್ರ ಒಡಿಶಾದ ಜಗನ್ನಾಥ ದೇವರು, ಮೋದಿಯವರ ಭಕ್ತ ಎಂದು ಘೋಷಿಸಿದ್ದೂ ಆಗಿಹೋಯಿತು! ಅಷ್ಟಲ್ಲದೆ, ಪತ್ರಿಕೆಗಳಲ್ಲಿ ವರದಿಯಾದಂತೆ, ಪ್ರಧಾನಿ ಮೋದಿಯವರು ಈ ವಿಷಯದಲ್ಲಿ ತನ್ನ ಎಲ್ಲಾ ಹೊಗಳುಭಟರನ್ನೂ ಹಿಂದಿಕ್ಕುವ ರೀತಿಯಲ್ಲಿ "ನನ್ನ ಜನ್ಮ ಜೈವಿಕ ಪ್ರಕ್ರಿಯೆಯಿಂದ ನಡೆದಿಲ್ಲ. ದೇವರು ಯಾವುದೋ ಉದ್ದೇಶ ಸಾಧನೆಗಾಗಿ ನನ್ನನ್ನು ಈ ಭೂಮಿಗೆ ಕಳಿಸಿದ್ದಾನೆ. ಒಮ್ಮೆ ಈ ಉದ್ದೇಶ ಈಡೇರಿದರೆ ನನ್ನ ಕೆಲಸ ಅಲ್ಲಿಗೆ ಮುಗಿಯುತ್ತದೆ. ಹಾಗಾಗಿಯೇ, ನಾನು ನನ್ನನ್ನು ಸಂಪೂರ್ಣವಾಗಿ ದೇವರಿಗೆ ಅರ್ಪಿಸಿಕೊಂಡಿದ್ದೇನೆ" ಎಂದು ಬಹಿರಂಗವಾಗಿ ಹೇಳಿದರು!

ಹಾಗಾದರೆ ಅವರೊಬ್ಬ ಪ್ರಧಾನಿಯಾಗಿ ಇಲ್ಲಿವರೆಗೂ ಕೆಲವೇ ಕೆಲವು ಉದ್ಯಮಪತಿಗಳಿಗೆ ಅನುಕೂಲ ಮಾಡಿ ಜನಸಾಮಾನ್ಯರನ್ನು ಬಡತನದ ದುಸ್ಥಿತಿಗೆ ತಳ್ಳಿರುವುದು ಕೂಡ ಭಗವಂತನ ಇಚ್ಛೆಯೇ! ಜೊತೆಗೆ, ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿ, ಚುನಾವಣಾ ಬಾಂಡುಗಳು, ಪಿಎಂ ಕೇರ್ ಫಂಡ್, ಕೆಲವೇ ಕೆಲವು ಏಕಸ್ವಾಮ್ಯಾಧಿಪತಿಗಳಿಗೆ ತೆರಿಗೆ ಮಾಫಿ, ಹೆಚ್ಚುತ್ತಿರುವ ನಿರುದ್ಯೋಗ, ಗಗನಕ್ಕೇರುತ್ತಿರುವ ಬೆಲೆಗಳು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಕೋಮುವಾದಿ–ಜಾತಿವಾದಿ ಒಡಕು, ಮೂರು ರೈತ ವಿರೋಧಿ ಮಸೂದೆಗಳು, ಕರಾಳ ಕಾನೂನುಗಳ ನೇಣುಬಿಗಿತ, ಎಲ್ಲವೂ ಸಮರ್ಥನೀಯ. ಏಕೆಂದರೆ ಮೋದಿಯವರು ಒಬ್ಬ ದೇವಮಾನವರಾಗಿ ಕೇವಲ ದೇವರ ಇಚ್ಛೆಯನ್ನು ಪೂರೈಸುತ್ತಿದ್ದಾರಷ್ಟೇ!! ಆದರೆ ತಾವು ದೇವಾಂಶ ಸಂಭೂತರೆಂದು, ದೇವರ ದೂತನೆಂದು ತಮ್ಮನ್ನು ತಾವು ಬಿಂಬಿಸಿಕೊಳ್ಳುವವರಲ್ಲಿ ಮೋದಿಯವರೇ ಮೊದಲಿಗರಲ್ಲ. ಹಿಂದೆ ಜರ್ಮನ್ನರು ಸರ್ವಶ್ರೇಷ್ಠರು ಎಂದು ಹೇಳುತ್ತ, ವಿಶ್ವದಲ್ಲಿ ಭಯ ಹುಟ್ಟಿಸಿ ಲಕ್ಷೋಪಲಕ್ಷ ಜನರನ್ನು ಬಲಿ ತೆಗೆದುಕೊಂಡ ವಿನಾಶಕಾರಿ ಎರಡನೇ ಮಹಾಯುದ್ಧಕ್ಕೆ ಕಾರಣನಾದ ಫ್ಯಾಸಿವಾದಿ, ನಿರಂಕುಶವಾದಿ ಹಿಟ್ಲರ್ ಕೂಡ ಇದೇ ರೀತಿ ತಾನು ದೇವರ ದೂತನೆಂದು ತನ್ನನ್ನು ತಾನೇ ಬಣ್ಣಿಸಿಕೊಂಡಿದ್ದ. ಅವನು, "ನಾನು ಯಹೂದಿಯ ವಿರುದ್ಧ ನನ್ನನ್ನು ರಕ್ಷಿಸಿಕೊಂಡರೆ, ನಾನು ಆ ದೇವರ ಕೆಲಸ ಮಾಡುತ್ತಿದ್ದೇನೆ ಎಂದರ್ಥ, ಆ ದೇವನ ಇಚ್ಛೆಯಂತೆ ನಡೆದುಕೊಳ್ಳುತ್ತಿದ್ದೇನೆಂದು ನಾನು ನಂಬಿದ್ದೇನೆ' ಎಂದು ಹೇಳಿದ್ದ. 'ಯಹೂದಿ ಘೆಟ್ಟೊ'ಗಳ ಮೇಲೆ ದಾಳಿ, ಆಶ್ವಿಜ್, ಸೊಬೊಬಿರ್, ತ್ರೆಬ್ಲಿಂಕಾದ ಯಾತನಾ ಶಿಬಿರಗಳಲ್ಲಿನ ಕ್ರೌರ್ಯ, ಒಂದಾದ ಮೇಲೆ ಒಂದು ದೇಶದ ಮೇಲೆ ಆಕ್ರಮಣ – ಈ ಎಲ್ಲವೂ ದೇವರ ಕಾರ್ಯಗಳೇ! ಈಗ ಶ್ರೀಮಾನ್ ಮೋದಿಯವರೂ ಕೂಡ ಹಿಟ್ಲರನ ಅದೇ ಜಾಡಿನಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ■

# ಎರಡು ಭಾರತಗಳಲ್ಲಿ ಕಾಣಿಸುತ್ತಿರುವ ದೃಶ್ಯಗಳು

## ದೃಶ್ಯಾವಳಿ 1

ತ್ರಿಪುರಾದ ಗಂಡಚೆರಾ ಉಪವಿಭಾಗದ ತರಬನ್ ಕಾಲೋನಿಯ ಬುಡಕಟ್ಟು ಮಹಿಳೆ ಮೊರ್ಮತಿ ತ್ರಿಪುರಾ (39) ಮನೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಐದು ತಿಂಗಳ ಹಿಂದೆ ಪತಿ ತೀರಿಕೊಂಡ ಬಳಿಕ, ಕಡುಬಡತನದ ಕಾರಣ, ಮಗು ಹುಟ್ಟಿದ ಮರುದಿನವೇ ಹೆಜಾಮರದ ದಂಪತಿಗೆ 5 ಸಾವಿರ ರೂ.ಗೆ ಮಗುವನ್ನು ಮಾರಾಟ ಮಾಡಿದಳು. 2) ದೇಶದ ವಿವಿಧ ಭಾಗಗಳಲ್ಲಿ ಪೋಷಕರಿಗೆ, ನಿಮ್ಮ ಮಕ್ಕಳು ಉನ್ನತ ವ್ಯಾಸಂಗ ಮಾಡಿ ಹಾಗೂ ಉತ್ತಮ ಸಂಪಾದನೆ ಮಾಡುತ್ತಾರೆ ಎಂಬ ಬಣ್ಣದ ಕನಸುಗಳನ್ನು ತೋರಿಸಿ ಮೋಸಗಾರರು ನೀಡುವ ಹುಸಿ ಭರವಸೆಗಳಿಗೆ ಮರುಳಾಗಿ ತಮ್ಮ ಮಕ್ಕಳನ್ನು 500 ರೂ.ಗಳಿಗೆ ಕಳ್ಳಸಾಗಾಣಿಕೆದಾರರಿಗೆ ಮಾರಾಟ ಮಾಡಲಾಗುತ್ತಿದೆ. 3) 16 ವರ್ಷದ ಮಗಳ ಚಿಕಿತ್ಸೆಗಾಗಿ ಹಣ ಸಂಗ್ರಹಿಸಲು ಹತಾಶರಾಗಿರುವ ಪೋಷಕರು ತಮ್ಮ 12 ವರ್ಷದ ಕಿರಿಯ ಮಗುವನ್ನು ನೆರೆಯವರಿಗೆ 10,000 ರೂ.ಗೆ ಮಾರಾಟ ಮಾಡಿದ ಘಟನೆ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯಲ್ಲಿ ನಡೆದಿದೆ. 4) ಇಡೀ ಕುಟುಂಬದ ಆತ್ಮಹತ್ಯೆಯ ಘಟನೆಗಳು ಹೆಚ್ಚುತ್ತಿವೆ. ನಿರುದ್ಯೋಗ ಮತ್ತು ಆರ್ಥಿಕ ಒತ್ತಡವು ಇದಕ್ಕೆ ಪ್ರಮುಖ ಕಾರಣವಾಗಿ ಕಂಡು ಬರುತ್ತಿದೆ. ಪುರುಷರು ತಾವು ಅನ್ನದಾತರೆಂದು ಭಾವಿಸಿದ್ದಾರೆ. ತಮ್ಮ ಮಕ್ಕಳು ಹಾಗೂ ಸಂಗಾತಿಗಳನ್ನು ಪೋಷಿಸಲು ಅವರು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಯತ್ನಿಸಿ ಸೋತಾಗ ದೀರ್ಘಕಾಲದ ಹಸಿವಿನಿಂದ ಪಾರಾಗಲು ಅವರಿಗೆ ಕಾಣುತ್ತಿರುವ ಸಲೀಸಾದ ಮಾರ್ಗವೆಂದರೆ ಇಡೀ ಕುಟುಂಬವನ್ನು ಅಂತ್ಯಗೊಳಿಸುವುದಾಗಿದೆ. 5) ನಮ್ಮ ದೇಶದಲ್ಲಿ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ (NCRB) ವರದಿಯ ಪ್ರಕಾರ, 2022ರಲ್ಲಿ ಒಟ್ಟು 1.7ಲಕ್ಷಕ್ಕೂ ಹೆಚ್ಚು ಆತ್ಮಹತ್ಯೆಗಳು ವರದಿಯಾಗಿವೆ. ಅದರಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಜನರು ದೈನಂದಿನ ಕೂಲಿಗಾರರು, ಕೃಷಿ ಕಾರ್ಮಿಕರು ಮತ್ತು ರೈತರು. 6) "ನಮ್ಮಲ್ಲಿ ಹಣವಿಲ್ಲ, ಲೇವಾದೇವಿಗಾರರು ಕಾಯಲು ಸಿದ್ಧರಿಲ್ಲ. ನಾವು ಏನು ಮಾಡಬೇಕು? ಮಾರುಕಟ್ಟೆಗೆ ಈರುಳ್ಳಿ ತೆಗೆದುಕೊಂಡು ಹೋಗಲು ನಮಗೆ ಸಾಧ್ಯವಾಗುತ್ತಿಲ್ಲ. ನೀವು ನಿಮ್ಮ ಬಗ್ಗೆ ಮಾತ್ರ ಯೋಚಿಸುತ್ತಿದ್ದೀರಿ, ಮೋದಿ ಸಾಹೇಬರೇ. ನೀವು ನಮ್ಮ ಉತ್ಪನ್ನಗಳಿಗೆ ಖಾತರಿ ಬೆಲೆ ನೀಡಬೇಕು. ಲೇವಾದೇವಿಗಾರರು ಬೆದರಿಕೆ ಹಾಕುತ್ತಾರೆ ಮತ್ತು ಸಹಕಾರಿ ಸಂಘದ ಅಧಿಕಾರಿಗಳು ನಿಂದಿಸುತ್ತಾರೆ, ನ್ಯಾಯಕ್ಕಾಗಿ ನಾವು ಯಾರ ಮೊರೆ ಹೋಗಬೇಕು? ಇಂದು ನಿಮ್ಮ ನಿಷ್ಕ್ರಿಯತೆಯಿಂದ ನಾನು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಾಗಿದೆ" ಎಂದು ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ಕಳೆದ ವರ್ಷ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ದಶರಥ ಲಕ್ಷ್ಮಣ್ ಕೇದಾರಿ ಹೇಳಿದ ಮಾತುಗಳಿವು. ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ವರದಿಯ ಪ್ರಕಾರ ಬಿಜೆಪಿ ಆಡಳಿತದಲ್ಲಿ (2014–2022) ಕೃಷಿ ವಲಯದಲ್ಲಿ ಘಟಿಸಿದ 1,00,474 ಆತ್ಮಹತ್ಯೆಗಳಲ್ಲಿ ಇವರದೂ ಒಂದು. ಪ್ರತಿದಿನವೂ ಸರಾಸರಿ 30 ಆತ್ಮಹತ್ಯೆಗಳು ಈ ಒಂಬತ್ತು ವರ್ಷಗಳಲ್ಲಿ ವರದಿಯಾಗಿವೆ. 7)ಭಾರತದ ಸುಮಾರು 130 ಕೋಟಿ ಜನರಲ್ಲಿ ಸುಮಾರು ಶೇ.60 ಜನರು ದಿನಕ್ಕೆ 250 ರೂ.ಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ, ಮತ್ತು ಶೇ. 21ರಷ್ಟು ಜನರು, ಅಂದರೆ 25 ಕೋಟಿಗೂ ಹೆಚ್ಚು ಜನರು ದಿನಕ್ಕೆ 166 ರೂ.ಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. 8) 20 ಕೋಟಿ ಭಾರತೀಯರು ಊಟವಿಲ್ಲದೇ ರಾತ್ರಿ ಖಾಲಿ ಹೊಟ್ಟೆಯಲ್ಲಿ ಮಲಗುತ್ತಾರೆ ಹಾಗೂ 25 ಲಕ್ಷ ಜನರು ಪ್ರತಿ ವರ್ಷ ಹಸಿವಿನಿಂದ ಸಾಯುತ್ತಿದ್ದಾರೆ. 9) UNO ಪ್ರಕಾರ, ಭಾರತದಲ್ಲಿ ಸುಮಾರು 100 ಕೋಟಿ ಬಡವರು, "ಬದುಕಲು ಬೇಕಾಗಿರುವ ಕನಿಷ್ಠ ಮೂಲಭೂತ ಅವಶ್ಯಕತೆಗಳನ್ನು ಸಹ ಪಡೆಯಲು ಸಾಧ್ಯವಾಗುತ್ತಿಲ್ಲ". 10) ಹಸಿವು ಮತ್ತು ಅಪೌಷ್ಟಿಕತೆಯಿಂದ ದೇಶದಲ್ಲಿ ಪ್ರತಿದಿನ ಐದು ವರ್ಷದೊಳಗಿನ ಸುಮಾರು 4,500 ಮಕ್ಕಳು ಅಸುನೀಗುತ್ತಿದ್ದಾರೆ.

## ದೃಶ್ಯಾವಳಿ 2

ನಿಶ್ಚಿತಾರ್ಥದ ಸುದ್ದಿಯನ್ನು ಸಾಮಾನ್ಯವಾಗಿ ಕೆಲವು ಸ್ನೇಹಿತರು ಮತ್ತು ಕುಟುಂಬದೊಂದಿಗೆ ಸಣ್ಣ ಕೂಟದೊಂದಿಗೆ ಆಚರಿಸಲಾಗುತ್ತದೆ. ಆದರೆ ಅಂಬಾನಿಗಳು ಸಾಮಾನ್ಯ ಕುಟುಂಬದವರಲ್ಲ ಮತ್ತು ಇದು ಸಾಮಾನ್ಯ ಮದುವೆಯ ಪೂರ್ವಭಾವಿ ಪಾರ್ಟಿಯಾಗಿರಲಿಲ್ಲ. ಈ ಆಚರಣೆಯು ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ ಮುಖೇಶ್ ಅಂಬಾನಿಯ ತಲೆಗಿರ್ರೆನ್ನಿಸುವ ಸಂಪತ್ತಿನ ಒಂದು ನೋಟವನ್ನು ನಮ್ಮ ಮುಂದಿಡುತ್ತದೆ. ಹಿರಿಯ ಅಂಬಾನಿ

> **ಒಂದೆಡೆ ಕೇವಲ ಐಷಾರಾಮಿ ಮದುವೆಗೆ ಕೋಟಿಕೋಟಿ ವ್ಯಯಿಸುವ ಭಾರತ, ಇನ್ನೊಂದೆಡೆ, ಹಸಿವೆಯಿಂದಲೇ ಮನುಷ್ಯ ಸಾಯುತ್ತಿರುವ ಭಾರತ. ಇದೆಂತಹ ವಿಪರ್ಯಾಸ.**

ತಮ್ಮ ಕಿರಿಯ ಮಗ ಅನಂತ್ ಅಂಬಾನಿಯ ನಿಶ್ಚಿತಾರ್ಥವನ್ನು ಘೋಷಿಸಲು ಕಾರ್ಯಕ್ರಮವನ್ನು ಆಯೋಜಿಸಿದ್ದರು. ಮೂರು ದಿನಗಳ ಕಾಲ ನಡೆದ ಈ ಕಾರ್ಯಕ್ರಮವು ಬೆರಗುಗೊಳಿಸುವ ಆಭರಣಗಳು, ಅಮೂಲ್ಯ ರತ್ನಗಳು, ವಜ್ರ ವೈಢೂರ್ಯಗಳು, ಒಡವೆ ವಸ್ತ್ರಗಳು, ರಂಗುರಂಗಿನ ಅಲಂಕಾರ,ದೃಶ್ಯ–ಶಬ್ದಗಳಾಡಂಬರಗಳಿಂದ ತುಂಬಿತ್ತು. ಅಂದಾಜಿನ ಪ್ರಕಾರ 1,200 ಅತಿಥಿಗಳನ್ನು ಐಷಾರಾಮಿ ಟೆಂಟ್ ವಸತಿಗಳಲ್ಲಿ ಹೇರ್ ಸ್ಟೈಲಿಸ್ಟ್‌ಗಳು, ಮೇಕಪ್ ಕಲಾವಿದರು ಮತ್ತು ಸಾಂಪ್ರದಾಯಿಕ ಭಾರತೀಯ ಸೀರೆ ಡ್ರೇಪರ್‌ಗಳ ಸೇವೆಯಲ್ಲಿ ಇರಿಸಲಾಗಿತ್ತು. ಕೇವಲ ಅಡುಗೆ ಗುತ್ತಿಗೆಯೇ ಸುಮಾರು ರೂ.11,41,96,22,468ಗೆ ನಡೆದಿದೆಯಂತೆ. ಕೆಲವು ವರದಿಗಳು ಈವೆಂಟ್‌ನ ಒಟ್ಟು ವೆಚ್ಚ ರೂ.12,82,23,44,124 ಎಂದು ಹೇಳುತ್ತವೆ. ಇದು ಅಂಬಾನಿಯ ಅಂದಾಜು ರೂ.10,07,350 ಕೋಟಿ ಸಂಪತ್ತಿನ ಶೇ.0.1ರಷ್ಟು. ಈ ಕಾರ್ಯಕ್ರಮವು ಎಷ್ಟು ಭಾರಿಯಾಗಿತ್ತೆಂದರೆ, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು, ಪ್ರಧಾನಿಯ ಅತ್ಯಂತ ನಿಕಟ ವ್ಯಕ್ತಿಯಾಗಿರುವ ಮುಖೇಶ್ ಅಂಬಾನಿಗೆ ವಿಧೇಯತೆಯಿಂದ ಸೇವೆ ಸಲ್ಲಿಸುವ ಸಲುವಾಗಿ, ಪಶ್ಚಿಮ ಗುಜರಾತ್‌ನ ಜಾಮ್‌ನಗರದಲ್ಲಿರುವ ಸ್ಥಳೀಯ ದೇಶೀಯ ವಿಮಾನ ನಿಲ್ದಾಣವನ್ನು ತಾತ್ಕಾಲಿಕವಾಗಿ ಮೇಲ್ದರ್ಜೆಗೇರಿಸಿತು. ನಿಶ್ಚಿತಾರ್ಥ ಸಮಾರಂಭವನ್ನು ನಡೆಸಿದ ತಿಂಗಳ ನಂತರ, ಅಂಬಾನಿ ಮತ್ತೊಂದು ವಿವಾಹಪೂರ್ವ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅದು ನಡೆದದ್ದು ಇಟಲಿಯಿಂದ ಫ್ರಾನ್ಸ್‌ಗೆ ಪ್ರಯಾಣಿಸುವ ಕ್ರೂಸ್ ಹಡಗಿನಲ್ಲಿ. 1,200 ಅತಿಥಿಗಳು ಪೋರ್ಟೋಫಿನೊದಲ್ಲಿ ನಡೆದ ಅಂತಿಮ ಲಾ ಡೋಲ್ಸ್ ವೀಟಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಮತ್ತು ಅಂಬಾನಿಯವರು ಎರಡನೇ ವಿವಾಹಪೂರ್ವದ ಆಚರಣೆಗಾಗಿ ಪೋರ್ಟೋಫಿನೊದ ಸಂಪೂರ್ಣ ಸಮುದ್ರ ತೀರವನ್ನು ಕಾಯ್ದಿರಿಸಿದ್ದರು. ಮೇ 29 ಮತ್ತು ಜೂನ್ 1ರ ನಡುವೆ ಅನಂತ್ ಮತ್ತು ರಾಧಿಕಾ ಅವರ ಎರಡನೇ ಪೂರ್ವ ವಿವಾಹದ ಆಚರಣೆಗಳು ನಡೆದವು ಮತ್ತು ಇದು ಜಗತ್ತಿನಾದ್ಯಂತದ ಉನ್ನತ ಉದ್ಯಮಿಗಳಿಂದ, ಹಾಲಿವುಡ್ ಮತ್ತು ಬಾಲಿವುಡ್ ತಾರೆಯರಿಂದ ಮತ್ತು ಸೆಲೆಬ್ರಿಟಿಗಳಿಂದ ತುಂಬಿ ತುಳುಕುತ್ತಿತ್ತು. ಸುಮಾರು 8 ತಿಂಗಳ ಕಾಲ ನಡೆದ ಮದುವೆ ಎಂಬ ಅಬ್ಬರದ ಈ ಅಸಹ್ಯಕರ ಶ್ರೀಮಂತಿಕೆಯ ಪ್ರದರ್ಶನಕ್ಕೆ ರೂ.5000 ಕೋಟಿ ಖರ್ಚಾಗಿದೆಯಂತೆ. ಐಷಾರಾಮಿ ವಿಹಾರಕ್ಕೆಂದೆ ಸುಮಾರು 75,09,39,75,000 ರೂ. ವೆಚ್ಚವಾಗಿದೆಯಂತೆ! ಹೀಗಿವೆ, ಎರಡು ವಿಭಿನ್ನ ಭಾರತಗಳ ದೃಶ್ಯಾವಳಿಗಳು. ■

# ಕೇರಳದ ಅನ್ನದಾತನ ಚಳುವಳಿ

ಕೇರಳ ರಾಜ್ಯದ ಪ್ರಧಾನ ಬೆಳೆ "ಭತ್ತ". ಅಲ್ಲಿ ಒಟ್ಟು 14 ಜಿಲ್ಲೆಗಳಲ್ಲಿ 13 ಜಿಲ್ಲೆಗಳು ಭತ್ತವನ್ನು ಬೆಳೆಯುತ್ತವೆ. ಆದಾಗ್ಯೂ, ಹಲವಾರು ಕಾರಣಗಳಿಂದ ಭತ್ತ ಬೆಳೆಯುವ ಒಟ್ಟಾರೆ ಪ್ರದೇಶವು ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಲೇ ಇದೆ. 1975–76ಕ್ಕೆ ಹೋಲಿಸಿದಲ್ಲಿ ಇಳಿಮುಖವು ತೀವ್ರವಾಗಿದೆ. ಪ್ರಸಕ್ತ ಭತ್ತ ಬೆಳೆಯುವ ಒಟ್ಟು ಪ್ರದೇಶ 1,95,734.15 ಹೆಕ್ಟೇರುಗಳು. ಕೇರಳದ ಭೂಸ್ವರೂಪದ ಕಾರಣದಿಂದ ಒಣಭೂಮಿ ಮತ್ತು ಹಸಿಭೂಮಿ ಕೃಷಿಗಳು ಅಸ್ತಿತ್ವದಲ್ಲಿದೆ. ಹಿಂದೊಮ್ಮೆ ಪಾಲಕ್ಕಾಡ್ ಜಿಲ್ಲೆ ಮತ್ತು ಅಲೆಪ್ಪಿ ಜಿಲ್ಲೆಯ ಕುಟ್ಟನಾಡ ಪ್ರದೇಶವು ಕೇರಳದ 'ಭತ್ತದ ಕಣಜ'ವೆಂದು ಖ್ಯಾತಿ ಪಡೆದಿತ್ತು. ಇಂದಿನ ಪರಿಸ್ಥಿತಿಯಲ್ಲೂ ಭತ್ತದ ಕೃಷಿಯಲ್ಲಿ ಈ ಎರಡು ಜಿಲ್ಲೆಗಳೇ ಮುಂದಿವೆ.

ಭಾರತದ ಬೇರೆಡೆಗಳಂತೆ ಮಳೆ ಆಧಾರಿತ ಬೇಸಾಯವನ್ನು ಪಾಲಕ್ಕಾಡ್ ಮತ್ತು ಬೇರೆ ಎತ್ತರದ ಭೂಮಿಯಲ್ಲಿ (ಹೈ ಲ್ಯಾಂಡ್) ಪಾಲಿಸಲಾಗುತ್ತಿದೆ. ಆದರೆ ಕುಟ್ಟನಾಡ್ ಹಾಗೂ ಅದರ ಅಕ್ಕಪಕ್ಕದ ಪ್ರದೇಶಗಳಲ್ಲಿ ಹಸಿಭೂಮಿ ಕೃಷಿ ವಾಡಿಕೆಯಲ್ಲಿದೆ. ಹಾಗಾಗಿ, ಪಾಲಕ್ಕಾಡ್ ಮತ್ತು ಬೇರೆ ಎತ್ತರದ ಭೂಮಿಗೆ ಭತ್ತದ ಬೆಳೆಯ ಯಶಸ್ಸಿಗೆ ಮಳೆ ನೀರಿನ ಜೊತೆಗೆ ನೀರಾವರಿಯು ಬೇಕೇಬೇಕಾಗಿದೆ. ವಿಶೇಷವಾಗಿ ರಬಿ(ಸೆಪ್ಟೆಂಬರ್‌ನಿಂದ ಏಪ್ರಿಲ್‌ವರೆಗೆ) ಕಾಲದಲ್ಲಿ ಪಾಲಕ್ಕಾಡ್‌ನ ರೈತರು ಅವಶ್ಯಕ ಹಾಗೂ ಸಮಯಕ್ಕೆ ಸರಿಯಾಗಿ ನೀರಾವರಿಯ ನೀರನ್ನು ವ್ಯವಸ್ಥೆ ಮಾಡಿಕೊಳ್ಳಲು ಸಾಕಷ್ಟು ಶ್ರಮ ಪಡಬೇಕಾಗುತ್ತದೆ.

ಕುಟ್ಟನಾಡಿನಂತೆ ತಗ್ಗು ಪ್ರದೇಶದಲ್ಲಿರುವ ಕೃಷಿ ಭೂಮಿ ಸಮುದ್ರ ಮಟ್ಟಕ್ಕಿಂತ ಕೆಳಗಿರುವುದರಿಂದ ಸಮುದ್ರದ ಉಪ್ಪಿನ ಹಿನ್ನೀರನ್ನು ಗದ್ದೆಯಿಂದ ಹೊರಗೆ ಹಾಕಿದರೆ ಮಾತ್ರ ಸಮರ್ಪಕವಾಗಿ ಭತ್ತ ಬೆಳೆಯಲು ಸಾಧ್ಯ. ಪ್ರತಿ ವರ್ಷ ಮುಂಗಾರು ಮಳೆಯ ಪ್ರವಾಹ ಇಳಿಮುಖವಾದ ಮೇಲೇ ಖಾರೀಫ್ ಕಾಲ(ಜೂನ್‌ನಿಂದ ಅಕ್ಟೋಬರ್‌ವರೆಗೆ)ದ ಕೃಷಿಯನ್ನು ರೈತರು ಪ್ರಾರಂಭಿಸಲು ಆಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಕೇರಳದ ರೈತರಿಗೆ ಕನಿಷ್ಠ ಬೆಂಬಲ ಬೆಲೆ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚಾಗಿರಬೇಕು, ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಧ್ಯಸ್ತಿಕೆ ವಹಿಸಿ ಸಂಭಾವನೆ ನೀಡಬೇಕು. ಆಹಾರ ಉತ್ಪಾದನೆಯಲ್ಲಿ ಕೇರಳಕ್ಕೆ ಕೊರತೆ ಇರುವುದರಿಂದ ರಾಜ್ಯ ಸರ್ಕಾರದ ಮಧ್ಯಸ್ತಿಕೆಯು ಅತಿ ಮುಖ್ಯವಾಗುತ್ತದೆ.

2022ರಿಂದ ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವು ಕೃಷಿ ಉತ್ಪನ್ನಗಳ ಸಂಗ್ರಹಣೆ ನೀತಿಗಳನ್ನು ರೂಪಿಸುವಲ್ಲಿ ಅತೀವ ನಿಧಾನವನ್ನು ತೋರಿತು. ಋತುಕಾಲಿಕ ಕೊಯ್ಲು ಸಂಪೂರ್ಣವಾಗಿ ಮುಗಿದ ಮೇಲೂ ಸಂಗ್ರಹಣೆ ಕಾರ್ಯಕ್ಕೆ ನೋಡಲ್ ಸಂಸ್ಥೆಯನ್ನು ಮತ್ತು ಹಣಕಾಸು ಪಾವತಿಸಲು ಸಂಸ್ಥೆಯನ್ನು ನೇಮಿಸುವಲ್ಲಿ ಸರ್ಕಾರದ ಅತೀವ ನಿಷ್ಕ್ರಿಯತೆ ಕಂಡು ಬಂದಿತು. ಅದರಿಂದ ಸರ್ಕಾರದ ವಿರುದ್ಧ ರೈತರ ಆಕ್ರೋಶ ಮತ್ತು ಅಸಮಾಧಾನ ಹೆಚ್ಚಿದವು.

ರೈತರ ಆಕ್ರೋಶಕ್ಕೆ ಧ್ವನಿಯಾಗಿ ಅಖಿಲ ಭಾರತ ಕೃಷಿ ಕೂಲಿಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ಪ್ರತಿಭಟನಾ ಧರಣಿಯನ್ನು ಅಲಪುರ ಜಿಲ್ಲೆಯ ಕುಟ್ಟನಾಡು ತಾಲೂಕು ಕಛೇರಿಯ ಮುಂಭಾಗದಲ್ಲಿ ಸಂಘಟಿಸಿತು. ಎಐಕೆಕೆಎಂಎಸ್‌ನ ರಾಜ್ಯ ಕಾರ್ಯದರ್ಶಿ ಕಾ:ಎನ್. ವಿನೋದ್ ಕುಮಾರ್ ಹಾಗೂ ವಿವಿಧ ರೈತ ಸಂಘಟನೆಗಳ ನಾಯಕರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ನಂತರ ಅವರು "ನೆಲ್ ಕರ್‌ಶಕ ಸಂರಕ್ಷಣಾ ಸಮಿತಿ" (ಎನ್‌ಕೆಎಸ್‌ಎಸ್) ಎಂಬ ರೈತರ ಸಮಿತಿಯನ್ನು ರಚಿಸಿಕೊಂಡು ಅದನ್ನು ನೋಂದಾಯಿಸಿಕೊಂಡರು.

ಕೇವಲ ಒಂದೂವರೆ ವರ್ಷಗಳಲ್ಲಿ ಎನ್‌ಕೆಎಸ್‌ಎಸ್‌ನಿಂದ ಅಲ್ಲಪುರ ಜಿಲ್ಲೆಯ ಕುಟ್ಟನಾಡು, ಕೊಟ್ಟಾಯಂ ಜಿಲ್ಲೆಯ ಚೆಂಗನಸೇರಿ, ಪಟ್ಟನಂತಿಟ್ಟ ಜಿಲ್ಲೆಯ ಮೇಲ್ದಂಡೆ ಕುಟ್ಟನಾಡು ಪ್ರದೇಶಗಳಲ್ಲಿ ಹಲವಾರು ಸ್ಥಳೀಯ ಘಟಕಗಳನ್ನು ರಚಿಸಿ ಹೋರಾಟಗಳನ್ನು ಕಟ್ಟಲಾಯಿತು. ಭತ್ತ ಬೆಳೆಗಾರರಿಗೆ ತಡವಾಗಿ ಸಂದಾಯವಾಗುತ್ತಿದ್ದ ಹಣ, ಮತ್ತಿತರ ಬೇಡಿಕೆಗಳ ಕುರಿತು ಹೋರಾಟಗಳು ನಡೆದವು. ಪಕ್ಷಾತೀತವಾಗಿ ರೈತರು ಒಂದಾಗಿ ಈ ಹೋರಾಟದಲ್ಲಿ ಭಾಗಿಯಾದರು. ಇವೇ ಬೇಡಿಕೆಗಳೊಂದಿಗೆ 'ರಾಜಭವನ್ ಚಲೋ' ಕೂಡ ಹಮ್ಮಿಕ್ಕೊಳ್ಳಲಾಯಿತು. ಪಾಲಕ್ಕಾಡ್ ಜಿಲ್ಲೆಯಲ್ಲಿ ಬೇರೆ ಸಂಘಟನೆಗಳ ಕಾರ್ಯಕ್ರಮಗಳಲ್ಲೂ ಎನ್‌ಕೆಎಸ್‌ಎಸ್ ಭಾಗವಹಿಸಿತು. ಹೀಗೆ ಎನ್‌ಕೆಎಸ್‌ಎಸ್ ಹಲವಾರು ಹೋರಾಟಗಳು ನಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಭತ್ತ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ರಾಜ್ಯ ಸರ್ಕಾರ ಏನೂ ಕ್ರಮ ಕೈಗೊಂಡಿಲ್ಲ. ಭತ್ತ ಸಂಗ್ರಹಣೆ, ಸರಿಯಾದ ಹಣ ಪಾವತಿ, ಸೂಕ್ತ ಅಯವ್ಯಯ ಹಂಚಿಕೆ ಹಾಗೂ ಸ್ಥಿರ ವ್ಯವಸ್ಥೆ ಕಡ್ಡಾಯವಾಗಬೇಕಿದೆ.

ಕಳೆದ ಎರಡು ವರ್ಷಗಳಲ್ಲಿ ಕೇರಳ ಸರ್ಕಾರ "ಸಪ್ಲೆಕೋ" ಎಂಬ ಸಂಸ್ಥೆಗೆ ನೋಡಲ್ ಏಜೆನ್ಸಿಯಾಗಿ ಸಂಗ್ರಹಣಾ ಕೆಲಸವನ್ನು ಒಪ್ಪಿಸಿತು. ಸಂಪೂರ್ಣ ಕಟಾವು ಕಾಲದ ಮುನ್ನವೇ ರೈತರು ಆನ್‌ಲೈನಲ್ಲಿ ನೋಂದಾಯಿಸಿಕೊಳ್ಳಬೇಕು ಎಂಬುದು ಮೊದಲ ಹಂತವಾಯಿತು. ನಂತರ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನೀಡಬೇಕಾದ ಅಕ್ಕಿಯ ಪ್ರಮಾಣವನ್ನು ನಿರ್ಧರಿಸಲು, ಅದಕ್ಕೆ ಅನುಗುಣವಾಗಿ ಭತ್ತವನ್ನು ಪಡೆದು ಅಕ್ಕಿ ಮಾಡಲು ಮಿಲ್ ಮಾಲೀಕರೊಂದಿಗೆ ಸರ್ಕಾರವು ಮಾತುಕತೆ ನಡೆಸುತ್ತದೆ. ಈ ಪ್ರಕ್ರಿಯೆಯ ನಂತರ ಸರ್ಕಾರವು ಉತ್ಪನ್ನ ಸಂಗ್ರಹಣೆಗಾಗಿ ನೋಡಲ್ ಏಜನ್ಸಿಯನ್ನು ನೇಮಿಸುತ್ತದೆ. ಆಮೇಲೆ ಕೃಷಿ ಇಲಾಖೆ ಸಂಗ್ರಹಣೆ ಮತ್ತು ಭತ್ತದ ರಸೀದಿಗಳನ್ನು ರೈತನಿಗೆ ಒದಗಿಸುತ್ತದೆ. ಇದೆಲ್ಲ ಮುಗಿದ ನಂತರ ರೈತರು ಸರ್ಕಾರ ನೀಡಿರುವ ರಸೀದಿಯನ್ನು ಸಪ್ಲೈಕೋಗೆ ಪರಿಷ್ಕರಣೆಗೆ ಕೊಡಬೇಕು. ನಂತರ 8 ನೇ ಪುಟಕ್ಕೆ

## ಫಲಿತಾಂಶಕ್ಕೂ ಮುನ್ನವೇ ಸ್ಕಾಲರ್‌ಶಿಪ್ ಪೋರ್ಟಲ್ ಸ್ಥಗಿತ– ಎಐಡಿಎಸ್‌ಓ ಪ್ರತಿಭಟನೆ!




ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಬಿಸಿಎಂ ವರ್ಗದ ಎರಡು ಮತ್ತು ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ತಕ್ಷಣವೇ ಎಸ್‌ಎಸ್‌ಪಿ ವಿದ್ಯಾರ್ಥಿ ವೇತನ ಬಿಡುಗಡೆ ಮಾಡುವಂತೆ ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗೈನೈಸೇಷನ್ (ಎಐಡಿಎಸ್‌ಓ) ನೇತೃತ್ವದಲ್ಲಿ ಯುವಿಸಿಇ ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದ ಸಮಿತಿಯ ಕಾರ್ಯಕರ್ತರು, 'ಎರಡು ಮತ್ತು ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಮುಗಿದು ಐದು ತಿಂಗಳಾದವು. ಇಲ್ಲಿಯವರೆಗೂ ವಿದ್ಯಾರ್ಥಿ ವೇತನ ನೀಡಿಲ್ಲ. ಇದರಿಂದ ನೂರಾರು ಸಂಖ್ಯೆಯಲ್ಲಿರುವ ಬಡ ವಿದ್ಯಾರ್ಥಿಗಳು ಪರದಾಡುವಂತಾಗಿದೆ' ಎಂದು ದೂರಿದರು.

'ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಇನ್ನೂ ವೆಬ್‌ಪೋರ್ಟಲ್‌ನಲ್ಲಿ ಪ್ರಕಟವಾಗಿಲ್ಲ. ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸುವ ಮುನ್ನವೇ ಪೋರ್ಟಲ್‌ನ್ನು ಸ್ಥಗಿತಗೊಳಿಸಲಾಗಿದೆ. ಈ ಸಮಸ್ಯೆಯನ್ನು ಸರಿಪಡಿಸಿ, ಕೂಡಲೇ ವಿದ್ಯಾರ್ಥಿ ವೇತನ ಬಿಡುಗಡೆಗೆ ಸರ್ಕಾರ ವ್ಯವಸ್ಥೆ ಮಾಡಬೇಕು' ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯ ನಂತರ ಸಂಘಟನೆ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ಬೆಂಗಳೂರು ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ■

## ಬಾಂಗ್ಲಾದೇಶದ ವಿದ್ಯಾರ್ಥಿ ಚಳುವಳಿಯನ್ನು ಬೆಂಬಲಿಸಿ ಎಐಡಿಎಸ್‌ಓ ಪ್ರತಿಭಟನೆ




ಅವೈಜ್ಞಾನಿಕ ಮೀಸಲಾತಿ ಕೋಟಾ ವಿರೋಧಿಸಿ ನಡೆಯುತ್ತಿರುವ ಬಾಂಗ್ಲಾದೇಶದ ವಿದ್ಯಾರ್ಥಿ ಚಳುವಳಿಯನ್ನು ಬೆಂಬಲಿಸಿ ಬಳ್ಳಾರಿಯಲ್ಲಿ ಎಐಡಿಎಸ್‌ಓ ಪ್ರತಿಭಟನೆ ನಡೆಸಿತು. ವಿದ್ಯಾರ್ಥಿಗಳ ಮೇಲೆ ಬಾಂಗ್ಲಾದೇಶದ ಸರ್ಕಾರವು ಪೈಶಾಚಿಕ ದಾಳಿಯನ್ನು ನಡೆಸಿದೆ. ಇದುವರೆಗಿನ ಹೋರಾಟದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹುತಾತ್ಮ ರಾಗಿದ್ದಾರೆ. ಆಡಳಿತ ಸರ್ಕಾರವು ಸಮಸ್ಯೆಯನ್ನು ಪ್ರಜಾತಾಂತ್ರಿಕವಾಗಿ ಬಗೆಹರಿಸುವುದರ ಬದಲಾಗಿ ವಿದ್ಯಾರ್ಥಿಗಳ ಹೋರಾಟವನ್ನು ಹತ್ತಿಕ್ಕುವ ಫ್ಯಾಸಿಸ್ಟ್ ಕ್ರಮಗಳನ್ನು ಕೈಗೊಂಡಿರುವುದು ಅತ್ಯಂತ ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ■

## ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಶುಲ್ಕ ಏರಿಕೆ – ಎಐಡಿಎಸ್‌ಓ ಖಂಡನೆ

"ಕರ್ನಾಟಕ ರಾಜ್ಯ ಸರ್ಕಾರವು ಈ ಬಾರಿ ಕೂಡ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಶುಲ್ಕವನ್ನು ಹೆಚ್ಚಿಸಿದೆ. 3 ವರ್ಷಗಳ ಕಾಲಾವಧಿಯಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಶುಲ್ಕವು ದ್ವಿಗುಣಗೊಂಡು ರೂ.42,000ಕ್ಕೆ ಏರಿದೆ.

ತನ್ನನ್ನು ಬಡಜನರ ಪರ, ದಮನಿತರ ಪರ ಎಂದು ಕರೆದುಕೊಳ್ಳುವ ಯಾವುದೇ ಸರ್ಕಾರ ಕೂಡ ಈ ರೀತಿ ಶುಲ್ಕ ಹೆಚ್ಚಿಸುವುದಿಲ್ಲ. ಯುವಿಸಿಇಯನ್ನು ಪ್ರತ್ಯೇಕವಾಗಿರಿಸಿ ಶುಲ್ಕವನ್ನು ಹೆಚ್ಚಿಸಿರುವುದು, ಆ ಮಹಾನ್ ಸಂಸ್ಥೆಯನ್ನು 'ಸೆಲ್ಫ್ ಫೈನಾನ್ಸಿಂಗ್' ಸಂಸ್ಥೆಯನ್ನಾಗಿಸುವುದರ ಉದ್ದೇಶದಿಂದ ಕೂಡಿರುವುದು ನಿಚ್ಚಳ. ಅದರ ವಿರುದ್ಧ ಧ್ವನಿಯೆತ್ತಿರುವ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಿಕ್ಷಣ ತಜ್ಞರ ಪ್ರತಿಭಟನೆಯ ಕೂಗಿಗೆ ಸರ್ಕಾರ ಕಿವುಡಾಗಿದೆ. ಈ ಶುಲ್ಕ ಹೆಚ್ಚಳವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಎಐಡಿಎಸ್‌ಓ ಆಗ್ರಹಿಸುತ್ತದೆ. ರಾಜ್ಯದ ಶಿಕ್ಷಣ ಪ್ರೇಮಿ ಜನತೆ ಸಂಘಟಿತರಾಗಿ ವೃತ್ತಿಪರ ಕೋರ್ಸ್‌ಗಳನ್ನು ಹಣಗಳಿಕೆಯ ಸಾಧನಗಳಾಗಿ ಬಳಸುವುದರ ವಿರುದ್ಧ ಧ್ವನಿ ಎತ್ತಬೇಕೆಂದು ಎಐಡಿಎಸ್‌ಓ ಕರೆ ನೀಡುತ್ತದೆ." ■

## ನೀಟ್ ಹಾಗೂ ನೆಟ್ ಪರೀಕ್ಷಾ ಹಗರಣವನ್ನು ಖಂಡಿಸಿ ವಿದ್ಯಾರ್ಥಿ ಸಮಾವೇಶ!




ಎಐಡಿಎಸ್‌ಓ ನೇತೃತ್ವದಲ್ಲಿ 15 ಜುಲೈ 2024 ರಂದು ಬೆಂಗಳೂರಿನ ಯುವಿಸಿಇ ಅಲ್ಯುಮ್ನಿ ಅಸೋಸಿಯೇಷನ್ ಹಾಲ್‌ನಲ್ಲಿ ನೀಟ್ ಹಾಗೂ ನೆಟ್ ಪರೀಕ್ಷೆಗಳಲ್ಲಿ ನಡೆದಿರುವ ಅವ್ಯಾಹತ ಹಗರಣದ ವಿರುದ್ಧ ವಿದ್ಯಾರ್ಥಿಗಳ ಸಮಾವೇಶವನ್ನು ಸಂಘಟಿಸಲಾಗಿತ್ತು.

ಸಮಾವೇಶವನ್ನುದ್ದೇಶಿಸಿ ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಮಾತನಾಡಿ, ನೀಟ್ ಯು.ಜಿ ಪರೀಕ್ಷೆಗೂ ಮುನ್ನವೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪವು ಕೇಳಿ ಬರುತ್ತಿದ್ದರೂ ಸಹ, ಆ ಬಗ್ಗೆ ಸೂಕ್ತ ತನಿಖೆ ನಡೆಸದಿದ್ದದ್ದು ಅತ್ಯಂತ ಖಂಡನೀಯ. ಈ ಮುಂಚೆ ರಾಜ್ಯಮಟ್ಟದಲ್ಲಿ ಜಂಟಿ ಪ್ರವೇಶ ಪರೀಕ್ಷೆಗಳು ಜಾರಿಯಲ್ಲಿದ್ದಾಗ, ಭ್ರಷ್ಟಾಚಾರದ ಕಾರಣವೊಡ್ಡಿಯೇ ಅಖಿಲ ಭಾರತ ಮಟ್ಟದ ನೀಟ್ ಪರೀಕ್ಷೆಯನ್ನು ಪ್ರಾರಂಭಿಸಲಾಗಿತ್ತು. ಭ್ರಷ್ಟಾಚಾರದ ಕುರಿತು ತನಿಖೆ ನಡೆಸಿ ಸಂಬಂಧಪಟ್ಟವರಿಗೆ ಸೂಕ್ತ ಶಿಕ್ಷೆ ವಿಧಿಸುವುದನ್ನು ಬಿಟ್ಟು ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವುದು ಪರಿಹಾರವಲ್ಲ ಎಂದು ನಾವು ಆ ಸಂದರ್ಭದಲ್ಲೇ ಎಚ್ಚರಿಕೆ ನೀಡಿದ್ದೆವು. ಅದು ಇಂದು ನಿಜವಾಗಿದೆ. ಸರ್ಕಾರದ ನಿಷ್ಕಾಳಜಿ ಮತ್ತು ಪರೀಕ್ಷಾ ವ್ಯವಸ್ಥೆಯ ಸಂಪೂರ್ಣ ವ್ಯಾಪಾರೀಕರಣದಿಂದಾಗಿ, ಇಡೀ ವೈದ್ಯಕೀಯ ಪ್ರವೇಶ ಪರೀಕ್ಷೆಯು ಗೊಂದಲದ ಗೂಡಾಗುತ್ತಿದೆ. ಮತ್ತು ಅಮಾಯಕ ವಿದ್ಯಾರ್ಥಿಗಳು ಇದರ ಬಲಿಪಶುಗಳಾಗಿದ್ದಾರೆ ಎಂದರು.

ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷೆ ಅಭಯಾ ದಿವಾಕರ್ ಮಾತನಾಡಿ, ನೀಟ್ ಹಾಗೂ ನೆಟ್ ಪರೀಕ್ಷೆಗಳಲ್ಲಿ ನಡೆದಿರುವ ಹಗರಣವು ಪ್ರಸ್ತುತ ಶೈಕ್ಷಣಿಕ ಕ್ಷೇತ್ರದಲ್ಲಿ ನಡೆದಿರುವ ಅತಿ ದೊಡ್ಡ ಹಗರಣವಾಗಿದೆ. ಆದರೂ, ದೇಶದವಿಡೀ ಆಡಳಿತ ವ್ಯವಸ್ಥೆಯು ಹೇಗೆ ವಿದ್ಯಾರ್ಥಿಗಳ ಭವಿಷ್ಯವನ್ನು ನಡುನೀರಿನಲ್ಲೇ ಕೈಬಿಟ್ಟಿದೆ ಎಂಬುದನ್ನು ನಾವು ಗ್ರಹಿಸಬೇಕು. ಯಾವ ಯಾವ ಹಂತದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದನ್ನು ತನಿಖೆಗೊಳಪಡಿಸಲು ಹಗರಣದಲ್ಲಿ ಭಾಗಿಯಾದ ಸಂಸ್ಥೆಯ ಮುಖ್ಯಸ್ಥರನ್ನೇ ನೇಮಿಸಿದರು. ಈ ಕ್ರಮವು 24 ಲಕ್ಷ ವಿದ್ಯಾರ್ಥಿಗಳ ಮೇಲಿನ ನಿಷ್ಕಾಳಜಿಯನ್ನು ಎತ್ತಿ ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾವೇಶದಲ್ಲಿ ಎಐಡಿಎಸ್‌ಓನ ರಾಜ್ಯ ನಾಯಕರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಸೇರಿದಂತೆ, ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ■

# ಕೇರಳದ ಅನ್ನದಾತನ ಚಳುವಳಿ

7 ನೇ ಪುಟದಿಂದ

ರೈತ ಇಚ್ಚಿಸಿದ ಬ್ಯಾಂಕ್ ಖಾತೆಗೆ ಸಪ್ಲೈಕೋ ಹಣ ಪಾವತಿ ಮಾಡಲು ಸಲಹೆ ನೀಡುತ್ತದೆ. ಇದನ್ನು ಅನುಸರಿಸಿ ಬ್ಯಾಂಕ್ ರೈತನ ಖಾತೆಗೆ ಹಣ ಜಮೆ ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಸಾಲದ ಎಲ್ಲಾ ಔಪಚಾರಿಕತೆಗಳನ್ನು ರೈತ ಅನುಸರಿಸಬೇಕಾಗುತ್ತದೆ. ಸರ್ಕಾರದ ಸಾಲ ಹಿಂದಿರುಗಿಸದೆ ಇರುವುದನ್ನು ಆಯಾ ರೈತನ ಕರ್ತವ್ಯಲೋಪವೆಂದೇ ಪರಿಗಣಿಸಲಾಗುವುದು. ಸಾಲವನ್ನು ವಾಪಸ್ಸು ಪಡೆಯುವ ಅಧಿಕಾರವನ್ನು ಮುಂದೆ ಬ್ಯಾಂಕ್‌ಗೆ ಒಪ್ಪಿಸಲಾಗುತ್ತದೆ. ಹೀಗೆ ನಡೆಯುತ್ತದೆ ಆ ಪ್ರಕ್ರಿಯೆ. ಆದರೆ, ಹಿಂದಿನ ವರ್ಷದ ರಾಬಿ ಬೆಳೆಯ ಕೊಯ್ಲಿನ ಹಣ ಪಾವತಿ ಪ್ರಕ್ರಿಯೆಯಲ್ಲಿ ಮೂರರಲ್ಲಿ ಒಂದು ಭಾಗದ ರೈತರು ಇನ್ನೂ ಸಿಗದೆ ಕಾಯುತ್ತಿದ್ದಾರೆ. ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ಆಡಳಿತದಲ್ಲಿ ರೈತರು ಎದುರಿಸುತ್ತಿರುವ ಪರಿಸ್ಥಿತಿ ಇದು.

ಸಂಗ್ರಹಣೆಗೆ ಅವಶ್ಯಕವಿರುವ ಹಣವನ್ನು ವ್ಯವಸ್ಥೆ ಮಾಡುವಲ್ಲಿ ತಡ ಮಾಡಿರುವ ಸರ್ಕಾರದ ಬೇಜವಾಬ್ದಾರಿತನ ಮತ್ತು ಅಸಮರ್ಥತೆಯೇ ರೈತರಿಗೆ ಹಣ ಪಾವತಿಸುವಲ್ಲಿಯೂ ತಡವಾಗುವುದಕ್ಕೆ ಕಾರಣವಾಗಿದೆ. ಹಾಗೆಯೇ, ಸಂಗ್ರಹಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಮೂರನೇ ಪಾರ್ಟಿ ಏಜೆನ್ಸಿಗಳು ರೈತರೊಡನೆ ಸ್ನೇಹದಿಂದ ಇಲ್ಲದಿರುವುದು. ಈ ಎಲ್ಲಾ ಅಂಶಗಳು ಕೇರಳದ ರೈತರಲ್ಲಿ ಹೋರಾಟದ ಕೆಚ್ಚನ್ನು ಸೃಷ್ಟಿಸಿವೆ.

**ಎನ್‌ಕೆಎಸ್‌ಎಸ್ ಹಕ್ಕೊತ್ತಾಯಗಳು:**

1. ಭತ್ತ ಸಂಗ್ರಹಣೆಗೆ ಪರಿಕ್ರಮಣ ನಿಧಿ (ರಿವಾಲ್‌ವಿಂಗ್ ಫಂಡ್) ಸ್ಥಾಪಿಸಬೇಕು

2. ಭತ್ತವನ್ನು ಕ್ವಿಂಟಾಲ್‌ಗೆ ರೂ.3264ನಂತೆ ಸಂಗ್ರಹಿಸಬೇಕು.

3. ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಭತ್ತದ ಬೆಲೆಯನ್ನು ಹೆಚ್ಚಿಸಬೇಕು.

4. ನಿರ್ವಹಣಾ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರವೇ ಭರಿಸಬೇಕು.

5. ಭತ್ತ ಸಂಗ್ರಹಣೆಯಲ್ಲಿ ತೂಕ ಹಾಕುವಾಗ ಆಗುವ ಮೋಸವನ್ನು ತಡೆಗಟ್ಟಬೇಕು

6. ಪಂಪಿಂಗ್ ಸಹಾಯಧನವನ್ನು ಪರಿಷ್ಕರಿಸಬೇಕು ಮತ್ತು ಉತ್ಪಾದನಾ ಲಾಭಾಂಶದ ಬಾಕಿಯನ್ನು ಪಾವತಿಸಬೇಕು.

7. ನಮ್ಮ ರಾಷ್ಟ್ರೀಯ ಸ್ವಾಯತ್ತತೆಯಲ್ಲಿ ವಿಶ್ವ ಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ನ್ಯಾಟೋ ತರಹದ ವಿದೇಶಿ ಸಂಸ್ಥೆಗಳ ಮತ್ತು ಅವುಗಳ ಹಣಕಾಸುದಾರರ ಹಸ್ತಕ್ಷೇಪವನ್ನು ತತ್ ಕ್ಷಣದಿಂದ ಕೊನೆಗೊಳಿಸಬೇಕು. ■

## ‘ಅಂತರರಾಷ್ಟ್ರೀಯ ನ್ಯಾಯಪೀಠ’ದ ತೀರ್ಪಿಗೆ ಕಿಲುಬು ಕಾಸಿನ ಬೆಲೆಯಿಲ್ಲ!

# ನರಮೇಧವನ್ನು ಮುಂದುವರೆಸಿರುವ ಇಸ್ರೇಲ್!!



ದೇಶದೇಶಗಳ ನಡುವಿನ ವಿವಾದಗಳನ್ನು ಬಗೆಹರಿಸಲು ಇರುವ ವಿಶ್ವ ಸಂಸ್ಥೆಯ ಅತ್ಯುನ್ನತ ನ್ಯಾಯಾಲಯವಾದ ‘ಅಂತರರಾಷ್ಟ್ರೀಯ ನ್ಯಾಯಾಲಯ(ICJ)’ದಲ್ಲಿ, ಗಾಜಾ ಪಟ್ಟಿಯಲ್ಲಿ ಹಮಾಸ್ ವಿರುದ್ಧದ ಯುದ್ಧದಲ್ಲಿ ಇಸ್ರೇಲ್ ನಡೆಸುತ್ತಿರುವ ಮಾರಣಹೋಮವನ್ನು ಸಾಬೀತುಪಡಿಸಲು ಕಳೆದ ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ಪ್ರಯತ್ನ ನಡೆಸಿತು. ಇಸ್ರೇಲ್ ಯುದ್ಧವನ್ನು ನಡೆಸಿದ ವಿಧಾನವು ‘ಮಾರಣ ಹೋಮದ ಸ್ವರೂಪ’ವನ್ನು ಹೊಂದಿದೆ, ಏಕೆಂದರೆ ಅದಕ್ಕೆ ‘ಗಾಜಾದಲ್ಲಿರುವ ಪ್ಯಾಲೇಸ್ತೀನಿಯರನ್ನು ನಾಶಮಾಡುವ ಉದ್ದೇಶವಿದೆ’ ಎಂದು ಅದು ಆರೋಪಿಸಿತು. ವಿವಿಧ ರಾಷ್ಟ್ರಗಳ ನಡುವೆ ಹುಟ್ಟುವ ವಿವಾದಗಳನ್ನು ಕುರಿತಂತೆ ಅಸ್ತಿತ್ವದಲ್ಲಿ ಇರುವ ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ಅಂದರೆ ರಾಷ್ಟ್ರಗಳ ನಡುವೆ ಸಹಮತವಿರುವಂತಹ ಕಾನೂನುಗಳಿಗೆ ಅನುಗುಣವಾಗಿ ವ್ಯಾಜ್ಯಗಳನ್ನು ನಿಷ್ಕರ್ಷೆ ಮಾಡಲು ಅಂತರರಾಷ್ಟ್ರೀಯ ನ್ಯಾಯಾಲಯವು ಸ್ಥಾಪನೆಯಯಾಗಿದ್ದು ಎಲ್ಲರಿಗೂ ತಿಳಿದಿರುವ ಸಂಗತಿ. ಉದಾಹರಣೆಗೆ , ‘ನರಮೇಧ ಗೊತ್ತುವಳಿ(Genocide Resolution)’ ಎನ್ನುವುದು ಅಂತಹ ಒಂದು ಪ್ರಮುಖ ಕ್ರಮ. ಎರಡನೇ ವಿಶ್ವಯುದ್ಧದ ನಂತರ ನಡೆದ ಸಾಮೂಹಿಕ ವಧೆಯನ್ನು ತಡೆಗಟ್ಟಲು ಒಪ್ಪಿಕೊಂಡ ಕ್ರಮವಾಗಿತ್ತು ಇದು. ದಕ್ಷಿಣ ಆಫ್ರಿಕಾ ಎತ್ತಿದ ಪ್ರಕರಣವನ್ನು ಜಿಯೋನಿಸ್ಟ್ ಇಸ್ರೇಲ್ ‘ಸಂಪೂರ್ಣ ಆಧಾರರಹಿತವಾದದ್ದು’ ಹಾಗೂ ‘ನೈತಿಕವಾಗಿ ಅಸಹ್ಯಕರವಾದದ್ದು’ ಹಾಗೂ ದಕ್ಷಿಣ ಆಫ್ರಿಕಾ ‘ಪೂರ್ವಗ್ರಹಪೀಡಿತ ವಾದಗಳನ್ನು ಹಾಗೂ ತಪ್ಪಾದ ಹೇಳಿಕೆಗಳನ್ನು’ ನೀಡುತ್ತಿದೆ ಎಂದು ದೂರಿತು. ಜನವರಿ ತಿಂಗಳಿನಲ್ಲಿ, ಅಂತರರಾಷ್ಟ್ರೀಯ ನ್ಯಾಯಾಲಯವು ಒಂದು ಮಧ್ಯಂತರ ತೀರ್ಪನ್ನು ನೀಡಿತು. ಅದರ ಒಂದು ಪ್ರಮುಖ ಪ್ಯಾರಾ ಹೀಗೆ ಹೇಳುತ್ತದೆ: “ನ್ಯಾಯಾಲಯದ ದೃಷ್ಟಿಯಲ್ಲಿ ದತ್ತಾಂಶಗಳು ಹಾಗೂ ಸನ್ನಿವೇಶಗಳು, ದಕ್ಷಿಣ ಆಫ್ರಿಕಾ ಕೇಳುತ್ತಿರುವ ಕೆಲವೊಂದು ಹಕ್ಕುಗಳು ಮತ್ತು ಆ ಹಕ್ಕುಗಳ ರಕ್ಷಣೆಗಾಗಿ ಆಗ್ರಹಿಸುತ್ತಿರುವುದು ಮೇಲ್ನೋಟಕ್ಕೆ ತರ್ಕಬದ್ಧವಾಗಿದೆ ಎಂಬ ತೀರ್ಮಾನವನ್ನು ಕೈಗೊಳ್ಳಲು ಸಾಕಾಗಿದೆ.” ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನ್ಯಾಯಾಲಯವು, ‘ಮೇಲ್ನೋಟಕ್ಕೆ ತರ್ಕಬದ್ಧವಾಗಿದೆ’ ಎಂಬ ಪದಪುಂಜವನ್ನು ಬಳಸಿ ಆ ಮೂಲಕ ತಾನು ಇಸ್ರೇಲನ್ನು ಯುದ್ಧ ಅಪರಾಧಕ್ಕೆ ಮತ್ತು ’ಮಾರಣಹೋಮ ಒಡಂಬಡಿಕೆ’(Genocide Convention)ಯ ಕಟ್ಟಳೆಗಳನ್ನು ಅದು ಉಲ್ಲಂಘಿಸಿರುವುದಕ್ಕೆ ಅದನ್ನು ಹೊಣೆಗಾರನನ್ನಾಗಿ ಮಾಡಿಲ್ಲ ಎಂದು ಹೇಳಿದೆ.

ಸ್ವಾಭಾವಿಕವಾಗಿಯೇ, ಇದು ವಿವಾದವನ್ನು ಎಬ್ಬಿಸಿತು. ಅಂತರರಾಷ್ಟ್ರೀಯ ನ್ಯಾಯಾಲಯವು ಮೇ ಕೊನೆ ಭಾಗದಲ್ಲಿ ಎರಡು ಮತಗಳ ವಿರುದ್ಧ 13 ಮತಗಳ ಮೂಲಕ ಬಹುಮತದ ಹೊಸ ತೀರ್ಪನ್ನು ನೀಡಿತು. ಅದು, “ಇಸ್ರೇಲ್ ಈ ಕೂಡಲೇ ರಾಫಾ ಗವರ್ನರ್‌ರೇಟ್ ಪ್ರಾಂತ್ಯದಲ್ಲಿ, ಗಾಜ಼ಾದಲ್ಲಿರುವ ಪ್ಯಾಲೆಸ್ಟೈನ್ ಜನರ ಸಂಪೂರ್ಣ ನಾಶಕ್ಕೆ ಎಡೆ ಮಾಡಿಕೊಡುವಂತಹ ಮಿಲಿಟರಿ ದಾಳಿ ಮತ್ತು ಎಲ್ಲ ರೀತಿಯ ಕಾರ್ಯಾಚರಣೆಯನ್ನು ನಿಲ್ಲಿಸಬೇಕು” ಎಂದು ಹೇಳಿತ್ತು. ಆ ಆದೇಶದ ತಲೆಬರಹವು, ರಾಫಾದಲ್ಲಿ ಎಲ್ಲಾ ಮಿಲಿಟರಿ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಎಂದು ಸೂಚಿಸಿತ್ತು. ಆದರೆ ಅದು ಸೂಚಿಸುವ ಅರ್ಥವೇ ಬೇರೆ ಎಂದು ಕೆಲವು ನ್ಯಾಯಾಧೀಶರು ಇದನ್ನು ಒಪ್ಪುವುದಿಲ್ಲ, ಇರಲಿ. ಆದೇಶದ ಮೇಲೆ ಆಮ್ನೆಸ್ಟಿ ಇಂಟರ್ನ್ಯಾಷನಲ್‌ನ ಹೇಬಾ ಮೋರಾಯೆಫ್, “ಕದನ ವಿರಾಮವು ನಾಗರಿಕರು ಅನುಭವಿಸುತ್ತಿರುವ ಸಾಮೂಹಿಕ ಸಂಕಷ್ಟಗಳಿಗೆ ಕೊನೆ ಹಾಕಲು ಇರುವ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಇದು ಅಂತರರಾಷ್ಟ್ರೀಯ ನ್ಯಾಯಾಲಯವು ಕರೆ ನೀಡಿರುವ ತಕ್ಷಣದ ಮತ್ತು ಷರತ್ತುರಹಿತವಾಗಿ ಹಮಾಸ್ ಹಾಗೂ ಇನ್ನಿತರ ಸಶಸ್ತ್ರ ಗುಂಪುಗಳು ಬಂಧನದಲ್ಲಿಟ್ಟುಕೊಂಡಿರುವವರನ್ನು ಬಿಡುಗಡೆ ಮಾಡುವುದನ್ನು ಖಚಿತಪಡಿಸುತ್ತದೆ. ಪಾಲೆಸ್ತೀನಿಯರ ಮಾರಣಹೋಮ ತಡೆಗಟ್ಟುವುದನ್ನು ಸಹ ನಿಜವಾಗಿಯೂ ಜಾರಿ ಮಾಡಬಹುದು” ಎಂದು ವ್ಯಾಖ್ಯಾನಿಸಿದರು.

ದಕ್ಷಿಣ ಆಫ್ರಿಕಾದ ಹೇಳಿಕೆಯನ್ನು ತಿರಸ್ಕರಿಸುತ್ತಾ, ಇಸ್ರೇಲ್‌ನ ಪ್ರಧಾನ ಮಂತ್ರಿ ನೆತಾನ್ಯಾಹೂ, “ಮಾರಣಹೋಮವನ್ನು ಮಾಡುವವರು ನಾವಲ್ಲ, ಅವರು ಹಮಾಸ್‌ಗಳು. ಅವರನ್ನು ಹಾಗೆಯೇ ಬಿಟ್ಟಿದ್ದಿದ್ದರೆ, ನಮ್ಮೆಲ್ಲರನ್ನೂ ಕೊಂದು ಬಿಡುತ್ತಿದ್ದರು. ಅದಕ್ಕೆ ಪ್ರತಿಯಾಗಿ, ಇಸ್ರೇಲ್ ಡಿಫೆನ್ಸ್ ಫೋರ್ಸ್ (ಐಡಿಎಫ್) ಎಷ್ಟು ಸಾಧ್ಯವೋ ಅಷ್ಟು ನೈತಿಕವಾಗಿ ನಡೆದುಕೊಳ್ಳುತ್ತಿದೆ” ಎಂದು ವಿತಂಡವಾದವನ್ನು ನೀಡಿದರು. ಅಂತರರಾಷ್ಟ್ರೀಯ ನ್ಯಾಯಾಲಯದ ತೀರ್ಪನ್ನು, ಜಾಗತಿಕ ಸಾರ್ವಜನಿಕ ಅಭಿಪ್ರಾಯವನ್ನು ತಳ್ಳಿ ಹಾಕುವಷ್ಟು ನಿರಂಕುಶವಾಗಿ ಇಸ್ರೇಲ್‌ಗೆ ಹೇಗೆ ಇರಲು ಸಾಧ್ಯವಾಯಿತು? ಒಳಗಿನ ಕಾರಣವನ್ನು ಹುಡುಕಿ ತೆಗೆಯುವುದು ಅಷ್ಟೇನೂ ಕಷ್ಟವಲ್ಲ. ಅಮೇರಿಕಾ ಹಾಗೂ ಮಧ್ಯಪ್ರಾಚ್ಯದಲ್ಲಿರುವ ಅವರ ಮಿತ್ರಕೂಟದ ಮುಂಭಾಗದ ಕಛೇರಿ ಆಗಿದೆ ಇಸ್ರೇಲ್. 1967 ರಿಂದ ಪ್ಯಾಲೆಸ್ಟೈನಿನ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತಿರುವ ಇಸ್ರೇಲ್‌ಗೆ ಅಮೇರಿಕಾ ವಾಸ್ತವದಲ್ಲಿ ಅನಿರ್ಬಂಧಿತವಾಗಿ ಆರ್ಥಿಕ, ಮಿಲಿಟರಿ ಮತ್ತು ರಾಜಕೀಯ ಬೆಂಬಲವನ್ನು ನೀಡುತ್ತದೆ. ಇಸ್ರೇಲ್ ಒಂದು ಘೋಷಿತ ಅಣ್ವಸ್ತ್ರ ಹೊಂದಿರುವ ದೈತ್ಯ ಶಕ್ತಿಯಾಗಿದೆ. ಆದರೂ ಸಹ ಅದು ಎಂದೂ ಯಾವ ಜಾಗತಿಕ ಪರಿಶೀಲನೆಗೆ ಒಳಪಟ್ಟಿಲ್ಲ ಅಥವಾ ವಿರೋಧವನ್ನು ಎದುರಿಸಿಲ್ಲ,. ಇದಕ್ಕೆ ಅಮೇರಿಕದ ಬೆಂಬಲವೇ ಕಾರಣ! ಇಸ್ರೇಲ್ ದೇಶವು ಎರಡನೇ ಮಹಾಯುದ್ಧದ ಅಂತ್ಯದ ಕಾಲದಿಂದ ಹಿಡಿದು ಅಮೇರಿಕಾದಿಂದ ಅತಿಹೆಚ್ಚು ನೆರವನ್ನು ಪಡೆದಿರುವ ದೇಶ ಕೂಡ. ಅಮೇರಿಕಾದಿಂದ 158 ಬಿಲಿಯನ್ ಡಾಲರ್ ನೆರವನ್ನು ಪಡೆದಿದೆ. ಪ್ರಸ್ತುತ ಇಸ್ರೇಲ್ ಪ್ರತಿ ವರ್ಷ ಅಮೇರಿಕಾದಿಂದ 3.8 ಬಿಲಿಯನ್ ಡಾಲರ್ ಅಷ್ಟು ಮಿಲಿಟರಿ ನೆರವು ಪಡೆಯುತ್ತಿದೆ. ಇದು ಇಸ್ರೇಲ್‌ನ ಒಟ್ಟು ಮಿಲಿಟರಿ ಬಜೆಟ್‌ನ ಶೇ.16ರಷ್ಟು ಆಗುತ್ತದೆ.

2023ರ ಅಕ್ಟೋಬರ್ 7ರಂದು ಪ್ಯಾಲೆಸ್ಟೈನಿನ ಸಶಸ್ತ್ರ ಘಟಕವಾದ ಹಮಾಸ್, ಆತ್ಮರಕ್ಷಣೆಗಾಗಿ ಅನಿವಾರ್ಯವಾಗಿ ಇಸ್ರೇಲ್ ಮೇಲೆ ಪ್ರತಿ ದಾಳಿ ಮಾಡಿದಾಗ, ಅಮೇರಿಕಾದ ಅಧ್ಯಕ್ಷ ಜೋ ಬೈಡನ್ ಜಿಯೋನಿಸ್ಟ್ ರಾಜ್ಯವಾದ ಇಸ್ರೇಲ್‌ನೊಡನೆ ಐಕಮತ್ಯ ವ್ಯಕ್ತಪಡಿಸಲು ಇಸ್ರೇಲ್‌ಗೆ ಶೀಘ್ರವಾಗಿ ತೆರಳಿದರು. ಬೈಡನ್ ಹಮಾಸ್‌ನ್ನು “ಬಹುದೊಡ್ಡ ದುಷ್ಟ ಶಕ್ತಿ” ಎಂದು ವರ್ಣಿಸಿ, ”ಅಮೇರಿಕಾ ಇಸ್ರೇಲ್ ಜೊತೆ ನಿಲ್ಲುತ್ತದೆ” ಎಂದು ಹೇಳಿದರು.

ಆಗಿನಿಂದ, ಇಸ್ರೇಲ್ ಗಾಜ಼ಾ ಮೇಲೆ ನಿರಂತರವಾಗಿ

> **ವಿಶ್ವದಾದ್ಯಂತ ಸಾಮ್ರಾಜ್ಯಶಾಹಿಗಳು ಅಮಾಯಕ ನಾಗರಿಕರ ಮೇಲೆ ಯುದ್ಧಗಳನ್ನು ಸಾರುತ್ತಿದ್ದಾರೆ. ಪ್ಯಾಲೆಸ್ಟೈನ್‌ನಂತಹ ರಾಷ್ಟ್ರಗಳು ಎತ್ತುತ್ತಿರುವ ಸ್ವಾತಂತ್ರ್ಯದ ನೈಜ ಬೇಡಿಕೆಯನ್ನು ಹತ್ತಿಕ್ಕುತ್ತಿದ್ದಾರೆ. ಬಂದೂಕಿನಡಿ ವಿದೇಶಿ ನೆಲವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಜನಾಂಗೀಯ ಯುದ್ಧಗಳನ್ನು ವಿವಿಧ ದೇಶಗಳಲ್ಲಿ ಪೋಷಿಸುತ್ತಿದ್ದಾರೆ ಮತ್ತು ಮಾನವ ಹಕ್ಕುಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಬುಡಮೇಲು ಮಾಡುತ್ತಿದ್ದಾರೆ.**

ಬಾಂಬ್ ದಾಳಿ ನಡೆಸುತ್ತಿದೆ. ಇದೀಗ ಅದು ಭೂದಾಳಿಯನ್ನೂ ನಡೆಸುತ್ತಿದೆ. ಈ ದಾಳಿಗಳಿಂದ 35ಲಕ್ಷಕ್ಕಿಂತ ಹೆಚ್ಚು ಅಮಾಯಕ ಪ್ಯಾಲಿಸ್ತೀನರನ್ನು ಈಗಾಗಲೇ ಕೊಲ್ಲಲಾಗಿದೆ. ಪ್ಯಾಲೆಸ್ಟೈನ್‌ನ ಚಿಕ್ಕ ಪ್ರದೇಶವಾದ ಗಾಜ಼ಾ ಹಾಗೂ ರಫಾಗಳಲ್ಲಿ 2.5 ಮಿಲಿಯನ್ ಜನರ ಮೇಲೆ ಭೀಕರ ದಾಳಿಯನ್ನು ಇಸ್ರೇಲ್ ನಡೆಸಿರುವುದನ್ನು ಅಮೇರಿಕ ಯಾವ ರೀತಿಯಲ್ಲೂ ಟೀಕಿಸಿಲ್ಲ. ಇಸ್ರೇಲ್ ನಡೆಸುತ್ತಿರುವ ದಾಳಿಗೆ ಮಾನವೀಯತೆಯ ದೃಷ್ಟಿಯಿಂದ ಒಂದು ತಡೆ ಒಡ್ಡಬೇಕೆಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಮಂಡಿಸಿದ ಗೊತ್ತುಗಳಿಗೆ ಅಮೇರಿಕ ‘ವಿಟೋ’ ಹಾಕಿದೆ ಮತ್ತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾನವೀಯತೆಗೆ ಪೂರಕವಾದ ಕದನ ವಿರಾಮವನ್ನು ಘೋಷಿಸುವ, ಬಹುಮತದೊಂದಿಗೆ ಅಂಗೀಕಾರಗೊಂಡ ಗೊತ್ತುವಳಿಯ ವಿರುದ್ಧವೂ ಮತ ಚಲಾಯಿಸಿದೆ. ಇತ್ತೀಚೆಗೆ ಇಸ್ರೇಲ್ ನಡೆಸಿರುವ ಬರ್ಬರ ಹತ್ಯೆಗಳು ಎಲ್ಲಾ ಎಲ್ಲೆಯನ್ನು ಮೀರಿದಾಗ ಕಳೆದ ಮೇ ತಿಂಗಳಿನಲ್ಲಿ ಇದಕ್ಕೆ ತನ್ನ ತೋರಿಕೆಯ ವಿರೋಧವನ್ನು ವ್ಯಕ್ತಪಡಿಸಲು ಅಮೇರಿಕ ಆಡಳಿತಾಂಗವು ಒಂದು ಹಡಗಿನ ತುಂಬಾ ಶಸ್ತ್ರಾಸ್ತ್ರಗಳ ಸರಬರಾಜನ್ನು ನಿಲ್ಲಿಸಿತು. ಅದು ಗಾಜಾ ಪಟ್ಟಿಯ ಇತರೆಡೆಗಳಲ್ಲಿ ಹೋರಾಡುತ್ತಾ ರಾಫಾದಲ್ಲಿ ನೆಲೆ ಕಂಡುಕೊಂಡಿದ್ದ ಲಕ್ಷಾಂತರ ಪ್ಯಾಲೆಸ್ತೀನಿಯರ ಮೇಲೆ ಇಸ್ರೇಲ್ ನಡೆಸಿದ ಪೂರ್ಣ ಪ್ರಮಾಣದ ದಾಳಿಯನ್ನು ಅಮೇರಿಕಾ ತಡೆಗಟ್ಟುತ್ತಿದೆ ಎಂಬಂತಹ ಭಾವನೆಯನ್ನು ಮೂಡಿಸುವ ಪ್ರಯತ್ನವಾಗಿತ್ತು.

ಇದು ಇಸ್ರೇಲ್‌ನ ಅಹಂಕಾರದ ಹಾಗೂ ಪ್ಯಾಲಿಸ್ಟೈನ್ ನೆಲದ ಮೇಲೆ ನಡೆಸುತ್ತಿರುವ ನಿರಂತರ ಹತ್ಯಾಕಾಂಡದ ಒಳ ಕಥೆ. ವ್ಯಕ್ತಿಗಳು ಅಪರಾಧಗಳನ್ನು ಮಾಡಿದಾಗ ವಿಚಾರಣೆಗೆ ಒಳಪಡಿಸುವ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನ್ಯಾಯಾಲಯ ಹಾಗೂ ಅಂತರರಾಷ್ಟ್ರೀಯ ಅಪರಾಧಿ ನ್ಯಾಯಾಲಯಗಳೂ ಸಹ ಅಮೇರಿಕಾದ ಆದೇಶಗಳಿಗೆ ತಲೆ ಬಾಗುತ್ತವೆ ಎಂಬುದನ್ನು ಸಹ ಹೇಳಬೇಕಾಗಿದೆ. ಸಂಯುಕ್ತ ಸುಡಾನ್‌ನ ಅಧ್ಯಕ್ಷರಾದ ಓಮರ್ ಬಶೀರ್ ಅಮೇರಿಕಾದ ಆಣತಿಗೆ ತಲೆಬಾಗಲು ನಿರಾಕರಿಸಿದ ಸಂದರ್ಭದಲ್ಲಿ ಇದನ್ನು ನಾವು ಕಾಣುತ್ತೇವೆ. ಸುಡಾನ್‌ನ ಪಶ್ಚಿಮ ಭಾಗವಾದ ಡಾರ್ಫಾರ್‌ನಲ್ಲಿ ಸೂಡಾನ್ ಸರ್ಕಾರವು ಅತಿರೇಕದ ಕ್ರಮಗಳನ್ನು ಕೈಗೊಂಡಿದೆ ಎಂದು ಅತಿ ಉತ್ಪ್ರೇಕ್ಷ ವರದಿಗಳನ್ನು ಮಾಡುತ್ತಾ ಅಮೇರಿಕಾ ಹಾಗೂ ಅದರ ಮಿತ್ರ ಶಕ್ತಿಗಳು ಅಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ವ್ಯಾಪಕ ಪ್ರಚಾರ ಮಾಡಿ, ಅಂತರರಾಷ್ಟ್ರೀಯ ನ್ಯಾಯಾಲಯವು ಆಲ್ ಬಶೀರ್ ಮೇಲೆ ಯುದ್ಧ ಅಪರಾಧಗಳನ್ನು ಎಸಗಿರುವವರು, ಮಾನವತೆಯ ಮೇಲೆ ಅಪರಾಧವೆಸಗಿರುವವರು ಎಂದು ದೂಷಿಸುವಂತೆ ಪರಿಸ್ಥಿತಿಯನ್ನು ನಿರ್ಮಾಣ ಮಾಡಿವೆ. ಅವರು ಹೀಗೆಯೇ ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನ್, ಸಮೂಹ ನಾಶದ ಅಸ್ತ್ರಗಳನ್ನು ಹೊಂದಿದ್ದರು ಎಂಬ ನೆಪವನ್ನು ಮುಂದಿಟ್ಟುಕೊಂಡು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿದ್ದ ಇರಾಕ್ ಮೇಲೆ ದಾಳಿ ಮಾಡಿ ಅದನ್ನು ಆಕ್ರಮಿಸಿಕೊಂಡಿದ್ದರು. ಅಂತರರಾಷ್ಟ್ರೀಯ ನ್ಯಾಯಾಲಯವು ತನ್ನ ವಿನಮ್ರತೆಯನ್ನು ಪ್ರದರ್ಶಿಸುತ್ತಾ ಓಮರ್ ಆಲಿ ಬಶೀರ್ ವಿರುದ್ಧ ಬಂಧನ ವಾರಂಟನ್ನು 2009ರ ಮಾರ್ಚ್ 4ರಂದು ಜಾರಿಗೊಳಿಸಿ ಎರಡನೇ ವಾರಂಟನ್ನು 2010ರ ಜುಲೈ 12ರಂದು ನೀಡಿತು. ಅಂತಿಮವಾಗಿ ಅವರನ್ನು ಪದಚ್ಯುತಗೊಳಿಸಿ ಸೂಡಾನ್‌ನನ್ನು ಎರಡು ಭಾಗಗಳಾಗಿ ವಿಭಜಿಸಲಾಯಿತು.

ಹೀಗೆಯೇ, ಇಡೀ ವಿಶ್ವದಾದ್ಯಂತ ಸಾಮ್ರಾಜ್ಯಶಾಹಿ ಕಾರ್ಯಾಚರಣೆ ಜರುಗುತ್ತಿರುವುದು. ಅಮಾಯಕ ನಾಗರಿಕರ ಮೇಲೆ ಯುದ್ಧಗಳನ್ನು ಸಾರಲಾಗುತ್ತಿದೆ, ಪ್ಯಾಲೆಸ್ಟೈನ್‌ನಂತಹ ರಾಷ್ಟ್ರಗಳು ಎತ್ತುತ್ತಿರುವ ಸ್ವಾತಂತ್ರ್ಯದ ನೈಜ ಬೇಡಿಕೆಯನ್ನು ಹತ್ತಿಕ್ಕಲಾಗುತ್ತಿದೆ, ಬಂದೂಕಿನಡಿ ವಿದೇಶಿ ನೆಲವನ್ನು ಆಕ್ರಮಿಸಿಕೊಳ್ಳಲಾಗುತ್ತಿದೆ. ಜನಾಂಗೀಯ ಯುದ್ಧಗಳನ್ನು ವಿವಿಧ ದೇಶಗಳಲ್ಲಿ ಪೋಷಿಸಲಾಗುತ್ತಿದೆ ಮತ್ತು ಮಾನವ ಹಕ್ಕುಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಬುಡಮೇಲು ಮಾಡಲಾಗುತ್ತಿದೆ.

ಎಲ್ಲಿಯವರೆಗೂ ಸಮಾಜವಾದಿ ಬಣ ಅಸ್ತಿತ್ವದಲ್ಲಿತ್ತೋ, ಅಲ್ಲಿಯವರೆಗೆ ಸಾಮ್ರಾಜ್ಯಶಾಹಿ ತಿಮಿಂಗಿಲಗಳಿಗೆ ಅಂತಹ ಜನ ವಿರೋಧಿ, ನಾಗರಿಕತೆ ವಿರೋಧಿ ಚಟುವಟಿಕೆಗಳನ್ನು ಮಾಡುವ ಧೈರ್ಯವಿರಲಿಲ್ಲ. ಈಗ ಸಮಾಜವಾದಿ ಬಣ ಅಸ್ತಿತ್ವದಲ್ಲಿರದೇ ಇರುವ ಹಿನ್ನೆಲೆಯಲ್ಲಿ ಇಂತಹ ಸಾಮ್ರಾಜ್ಯಶಾಹಿ ವಿನ್ಯಾಸವನ್ನು ಸೋಲಿಸಲು ಒಂದು ಸುಸಂಘಟಿತ ಸಾಮ್ರಾಜ್ಯಶಾಹಿ ವಿರೋಧಿ ಸಮರಶೀಲ ಶಾಂತಿ ಚಳುವಳಿಯಿಂದ ಮಾತ್ರವೇ ಸಾಧ್ಯ.

ಧಾರವಾಡ: ಕಟ್ಟಡ ಕಾರ್ಮಿಕರ ರಾಜ್ಯಮಟ್ಟದ ಸಮ್ಮೇಳನ

# ಪ್ರಬಲ ಕಾರ್ಮಿಕರ ಚಳುವಳಿಯನ್ನು ರೂಪಿಸುತ್ತಾ, ಕಾರ್ಮಿಕ ಕ್ರಾಂತಿಗೆ ಸಜ್ಜಾಗಿ!

**- ಕಾ. ಕೆ. ಸೋಮಶೇಖರ್**




ಧಾರವಾಡದಲ್ಲಿ ಆಯೋಜಿತವಾಗಿದ್ದ ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಎಐಯುಟಿಯುಸಿ ರಾಜ್ಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್ ಮಾತನಾಡಿದರು.




## ನೀಟ್ ವಿರುದ್ಧದ ನಿರ್ಣಯ ಅಂಗೀಕಾರ – ವಿದ್ಯಾರ್ಥಿ ಹೋರಾಟಕ್ಕೆ ಸ್ಪಂದಿಸಿದ ರಾಜ್ಯ ಸರ್ಕಾರ!

ರಾಜ್ಯದಲ್ಲಿ ನೀಟ್–ಯುಜಿ ಹಾಗೂ ಪಿಜಿ ಪರೀಕ್ಷೆಗಳಲ್ಲಿ ನಡೆದ ಅವ್ಯಾಹತ ಅಕ್ರಮಗಳ ವಿರುದ್ಧ ಭುಗಿಲೆದ್ದ ಬೃಹತ್ ವಿದ್ಯಾರ್ಥಿ ಚಳುವಳಿಯ ಒತ್ತಡಕ್ಕೆ ಸ್ಪಂದಿಸಿ ಕರ್ನಾಟಕ ರಾಜ್ಯ ಸರ್ಕಾರವು ಇತ್ತೀಚೆಗೆ ವಿಧಾನಸಭೆಯಲ್ಲಿ ನೀಟ್ ವಿರುದ್ಧದ ನಿರ್ಣಯವನ್ನು ಅಂಗೀಕರಿಸಿದೆ. ನೀಟ್ ಹಗರಣದ ವಿರುದ್ಧ ನಡೆದ ಚಳುವಳಿಯ ಬಹು ಮುಖ್ಯ ಬೇಡಿಕೆಯೆಂದರೆ, ಇನ್ನು ಮುಂದೆ, ರಾಜ್ಯ ಮಟ್ಟದಲ್ಲಿಯೇ ವೈದ್ಯಕೀಯ ಪ್ರವೇಶ ಪರೀಕ್ಷೆಯನ್ನು ನಡೆಸಬೇಕು ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ ಇಂತಹ ನಿರ್ಣಯವನ್ನು ಕೈಗೊಂಡಿರುವ ರಾಜ್ಯ ಸರ್ಕಾರದ ನಿಲುವು ಸ್ವಾಗತಾರ್ಹ.

ರಾಜ್ಯ ಮಟ್ಟದಲ್ಲಿ ಪ್ರವೇಶ ಪರೀಕ್ಷೆ ನಡೆಸುವ ಉದ್ದೇಶ ಸರಿ ಇದ್ದರೂ, ಪರೀಕ್ಷಾ ಪ್ರಕ್ರಿಯೆಯಲ್ಲಿ ಹಗರಣಗಳು ನಡೆಯದಂತೆ, ಪರೀಕ್ಷೆಯ ಪಾವಿತ್ರತೆಯನ್ನು ಕಾಪಾಡುವಂತೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು AIDSO ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತದೆ. ■




ಕರ್ನಾಟಕ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘದ ರಾಜ್ಯ ಸಮ್ಮೇಳನದ ಕರೆಯ ಅನ್ವಯ ಜುಲೈ 22ರಂದು ಮೈಸೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿಯ ಮುಂಭಾಗ (ಫೋಟೋ1) ಮತ್ತು ಹುಬ್ಬಳ್ಳಿಯ ಕಾರ್ಮಿಕ ಭವನದ ಮುಂಭಾಗದಲ್ಲಿ(ಫೋಟೋ2) ಕಟ್ಟಡ ಕಾರ್ಮಿಕರು ಹಲವು ಹಕ್ಕೊತ್ತಾಯಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸಿದರು.

# ಕಾರ್ಖಾನೆಯ ನಿರಂಕುಶ ಆಡಳಿತಕ್ಕೆ ರೈತ ಹೋರಾಟದ ಅಂಕುಶ – ಎಐಕೆಕೆಎಂಎಸ್

ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ಭೂಮಿ ನೀಡಿದ ರೈತರ ಹೋರಾಟ:

ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಎಐಕೆಕೆಎಂಎಸ್, ಜನಾಂದೋಲನಗಳ ಮಹಾ ಮೈತ್ರಿ, ಕರ್ನಾಟಕ ರಾಜ್ಯ ರೈತ ಸಂಘಟನೆಗಳ ನೇತೃತ್ವದಲ್ಲಿ ಕೆಐಎಡಿಬಿಗೆ ಭೂಮಿ ನೀಡಿದ ರೈತರ ಹಕ್ಕುಗಳ ಹೋರಾಟ ವೇದಿಕೆಯಡಿಯಲ್ಲಿ ಅನಿರ್ದಿಷ್ಟಾವಧಿ ಆಂದೋಳನ ನಡೆಯಿತು. ಹೋರಾಟವು 169 ದಿನಗಳ ಕಾಲ ನಡೆಯಿತು.

ಹೋರಾಟದ ಆರಂಭದಲ್ಲಿ ಪೊಲೀಸರು ಹೋರಾಟಕ್ಕೆ ಅನುಮತಿ ನೀಡದೆ ರೈತರ ಮೇಲೆ FIRಗಳನ್ನು ಹಾಕಿದರು. ತಾಲೂಕು ನ್ಯಾಯಾಲಯಕ್ಕೆ ಹೋಗಿ ಕೈಗಾರಿಕೆಯವರು ಇಂಜೆಂಕ್ಷನ್ ಆರ್ಡರ್‌ನ್ನು ತಂದರು. ಕೈಗಾರಿಕೆಯವರು ಹೈಕೋರ್ಟಿಗೂ ಪ್ರಕರಣವನ್ನು ದಾಖಲಿಸಿದರು. ಹೋರಾಟವನ್ನು ದಮನ ಮಾಡುವ ಕೈಗಾರಿಕೆಯವರ ಈ ಎಲ್ಲಾ ತಂತ್ರಗಳನ್ನು ಎದುರಿಸಿ ರೈತರು ಎಐಕೆಕೆಎಂಎಸ್‌ನ ನೇತೃತ್ವದಲ್ಲಿ ಒಗ್ಗಟ್ಟಿನಿಂದ ಹೋರಾಟ ಮುಂದುವರೆಸಿದರು. ಕೊನೆಗೂ, ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾರ್ಖಾನೆ ಮತ್ತು ರೈತ ಮುಖಂಡರ ನಡುವೆ ಹಲವಾರು ಸಭೆಗಳು ನಡೆದು ಒಂದು ಒಪ್ಪಂದಕ್ಕೆ ಬರಲಾಗಿದೆ.

ಅದರ ಅನುಸಾರ 42 ರೈತ ಮಕ್ಕಳನ್ನು, ಸದ್ಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಹಾಗೆಯೇ ಇವರೆಲ್ಲರಿಗೂ ಕಾನೂನಿನ ಪ್ರಕಾರ ನೀಡಬೇಕಿದ್ದ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತದೆ. ಹಾಗೂ ಪ್ರಸ್ತುತ ಕಾರ್ಖಾನೆಯಲ್ಲಿ ಖಾಯಂ ಉದ್ಯೋಗ ಮಾಡುತ್ತಿರುವ ಕಾರ್ಮಿಕರು ನಿವೃತ್ತಿ ಹೊಂದಿದ ನಂತರ, ಅವರ ಸ್ಥಾನಗಳಿಗೆ ಈ 42 ಮಂದಿಯನ್ನು ಕಾಯಂಗೊಳಿಸಲಾಗುತ್ತದೆ. ಅಥವಾ ಭವಿಷ್ಯದಲ್ಲಿ ಹೆಚ್ಚುವರಿ ಉದ್ಯೋಗಗಳು ಸೃಷ್ಟಿಯಾಗುವ ಸಂದರ್ಭದಲ್ಲಿ ಇವರನ್ನು ಆದ್ಯತೆಯ ಮೇರೆಗೆ ನೇಮಿಸಿಕೊಳ್ಳುವುದಾಗಿ ಕಾರ್ಖಾನೆಯವರು ತಿಳಿಸಿದ್ದಾರೆ. ಈ ಕುರಿತು ಒಮ್ಮತಕ್ಕೆ ಬರಲಾಗಿದೆ. ಈ ವಿಷಯವನ್ನು ಕೆಐಎಡಿಬಿಯ ಪರವಾಗಿ ಸ್ಥಳಕ್ಕೆ ಆಗಮಿಸಿದ KIADB ಯ AEEಗಳಾದ ಅರುಣ್ ಕುಮಾರ್ ಹಾಗೂ AEಆದ ಶಬರೀಶ್ ತಿಳಿಸಿ, ರೈತ ಮುಖಂಡರಿಗೆ ಪತ್ರವನ್ನು ಹಸ್ತಾಂತರಿಸಿದರು.

ಕಾರ್ಖಾನೆಯ ಈ ಲಿಖಿತ ಭರವಸೆಯ ಆಧಾರದ ಮೇಲೆ ರೈತರು 169 ದಿನದಿಂದ ಮಾಡುತ್ತಿದ್ದ ಅನಿರ್ದಿಷ್ಟಾವಧಿ ಹೋರಾಟವನ್ನು ಹಿಂಪಡೆಯಲಾಗಿದೆ. ಭೂಮಿ ಕಳೆದುಕೊಂಡ ರೈತರಿಗೆ ಉದ್ಯೋಗವನ್ನೇ ನೀಡುವುದಿಲ್ಲ ಎಂದು ಹೇಳುತ್ತಿದ್ದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಮಾಲೀಕನ ನಿರಂಕುಶ ಆಡಳಿತಕ್ಕೆ ರೈತರು ಅಂಕುಶವನ್ನು ಹಾಕಿದ್ದಾರೆ. ಇದು ರೈತರ ಒಗ್ಗಟ್ಟಿನ ರಾಜಿರಹಿತ ಹೋರಾಟಕ್ಕೆ ಸಂದ ಜಯ. ಆದರೆ ಅವರು ಕೊಟ್ಟ ಮಾತಿನಂತೆ ಕಾಯಂ ಉದ್ಯೋಗ ಕೊಡಲು ತಪ್ಪಿದರೆ ಮತ್ತೆ ತೀವ್ರವಾದ ಹೋರಾಟವನ್ನು ಮಾಡುವ ಎಚ್ಚರಿಕೆಯನ್ನು ಹೋರಾಟಗಾರರು ನೀಡಿದ್ದಾರೆ.

ಈ ಸಂದರ್ಭದಲ್ಲಿ ಜನಾಂದೋಲನಗಳ ಮಹಾಮೈತ್ರಿಯ ರಾಜ್ಯ ಸಂಚಾಲಕರಾದ ಉಗ್ರ ನರಸಿಂಹೇಗೌಡ, AIUTUC ಕಾರ್ಮಿಕ ಸಂಘಟನೆಯ ಜಿಲ್ಲಾ ಕಾರ್ಯದರ್ಶಿಗಳಾದ ಚಂದ್ರಶೇಖರ್ ಮೇಟಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಅಖಿಲ ಭಾರತ ರೈತ ಕೃಷಿ ಕಾರ್ಮಿಕ ಸಂಘಟನೆಯ (AIKKMS) ಜಿಲ್ಲಾ ಸಂಚಾಲಕರಾದ ಬಸವರಾಜು ಎಚ್.ಎಂ ಉಪಸ್ಥಿತರಿದ್ದರು. ■



# ಹವಾಮಾನ ವೈಪರೀತ್ಯದೊಂದಿಗೆ ಬಂಡವಾಳಶಾಹಿ ರಾಜಕಾರಣದ ಚೆಲ್ಲಾಟ

ಕಳೆದ ಕೆಲವು ವರ್ಷಗಳಿಂದ ಹವಾಮಾನ ಬದಲಾವಣೆಯು ವಿಶ್ವದಾದ್ಯಂತ ಅಪಾಯಕಾರಿ ಘಟ್ಟವನ್ನು ತಲುಪಿ ಅದರ ಪರಿಣಾಮವನ್ನು ನಾವು ಅನುಭವಿಸುತ್ತಿದ್ದೇವೆ. ಜನಸಾಮಾನ್ಯರು ಊಹಿಸಲು ಸಾಧ್ಯವಾಗದ ರೀತಿಯಲ್ಲಿ ವೈಪರೀತ್ಯಗಳು ಉಂಟಾಗುತ್ತಿವೆ. ಅನೂಹ್ಯ ವರ್ಷಧಾರೆ, ಬರ, ಉಷ್ಣ ಅಲೆ, ಭೂಕುಸಿತ, ಪ್ರವಾಹಗಳು ವಿಶ್ವದೆಲ್ಲೆಡೆಯೂ ಅಪಾರ ಜೀವಹಾನಿ ಮತ್ತು ಆಸ್ತಿಪಾಸ್ತಿ ಹಾನಿಗೆ ಕಾರಣವಾಗಿವೆ. ಅಮಾಯಕ ಜನರ ಬದುಕು ಅಯೋಮಯವಾಗುತ್ತಿದೆ. 2022ರ ಜುಲೈ 19ರಂದು ಇಂಗ್ಲೆಂಡ್‌ನ ಕೊನಿಂಗ್ಸ್‌ಬೈ ಮತ್ತು ಲಿಂಕನ್‌ಶೈರ್ ಎಂಬಲ್ಲಿ ಪಾದರಸದ ಮಟ್ಟ 40.3 ಡಿಗ್ರಿ ಸೆಲ್ಸಿಯಸ್ ಮುಟ್ಟಿದಾಗ ಜನರು ಬೆವರಿನಿಂದ ತೊಯ್ದು ಹೋದರು. ಅದು ಇಂಗ್ಲೆಂಡ್‌ನಲ್ಲಿ ದಾಖಲಾದ ಅತಿ ಹೆಚ್ಚಿನ ತಾಪಮಾನವಾಗಿತ್ತು. 2019ರ ಜುಲೈ 19ರಂದು ಪ್ಯಾರಿಸ್‌ನಲ್ಲಿ ತಾಪಮಾನವು 45.9 ಡಿಗ್ರಿಯನ್ನು ಮುಟ್ಟಿದ್ದರೆ, ಇತ್ತೀಚೆಗೆ ದೆಹಲಿಯಲ್ಲಿ 50.5 ಡಿಗ್ರಿ ಸೆಲ್ಸಿಯಸ್‌ಗೆ ಏರಿತ್ತು. ಕಳೆದ ಮೇನಲ್ಲಿ ರಾಜಸ್ಥಾನದ ಚುರು ಪ್ರದೇಶದಲ್ಲಿ ತಾಪಮಾನವು 50.5 ಡಿಗ್ರಿ ಸೆಲ್ಸಿಯಸ್‌ನ್ನು ಮುಟ್ಟಿತ್ತು. ತಾಪಮಾನವು ಈ ಪ್ರಮಾಣದಲ್ಲಿ ಹಿಂದೆಂದೂ ಏರಿರಲಿಲ್ಲ. ಗುಡ್ಡಗಾಡುಗಳಿಂದ ತುಂಬಿರುವ ಹಿಮಾಚಲ ಪ್ರದೇಶದಲ್ಲಿಯೂ ಸಹ ತಾಪಮಾನವು 44 ಡಿಗ್ರಿ ಸೆಲ್ಸಿಯಸ್ ಮುಟ್ಟಿದ್ದು ಆಶ್ಚರ್ಯಜನಕ ವಿದ್ಯಮಾನವೇ ಆಗಿದೆ! ನೆರೆಯ ಬಾಂಗ್ಲಾದೇಶದಲ್ಲಿ 43 ಡಿಗ್ರಿ, ಮ್ಯಾನ್ಮಾರ್‌ನಲ್ಲಿ 48.2 ಡಿಗ್ರಿ ತಾಪಮಾನ ದಾಖಲಾಗಿತ್ತು. ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ಏಪ್ರಿಲ್ 1ರಿಂದ ಏಪ್ರಿಲ್ 5ರವರೆಗೆ ತಾಪಮಾನವು 45 ಡಿಗ್ರಿ ಸೆಲ್ಸಿಯಸ್ ತಲುಪಿ ವಿಪರೀತ ಉಷ್ಣಹವೆಯನ್ನು ಜನರು ಅನುಭವಿಸಬೇಕಾಯಿತು. ಜನರು ಅನಾರೋಗ್ಯ ಪೀಡಿತರಾದರು ಮತ್ತು ಹಲವರು ಜೀವ ಕಳೆದುಕೊಂಡರು. ಇನ್ನೊಂದು ಕಡೆಯಲ್ಲಿ, ದುಬೈನಂತಹ ಮರಳುಗಾಡಿನಲ್ಲಿ ಕಳೆದ ಏಪ್ರಿಲ್ 19ರಂದು ಹಿಂದೆಂದೂ ಕಂಡರಿಯದಿದ್ದ ರೀತಿಯಲ್ಲಿ ಧಾರಾಕಾರ ಮಳೆ ಸುರಿಯಿತು. ಅದರ ನೆರೆ ರಾಷ್ಟ್ರ ಒಮಾನ್‌ನಲ್ಲಿ ಕೂಡ ಮುಸಲಧಾರೆಯಾಯಿತು. ಅಲ್ಲಿ ಉಂಟಾದ ಪ್ರವಾಹಕ್ಕೆ ಸಿಲುಕಿ 20 ಮಂದಿ ಬಲಿಯಾದರು. ಹಿಂದೆಯೂ ಕೂಡ ಚೆನ್ನೈ, ಮುಂಬೈ ಹಾಗೂ ಕೇರಳದ ವಿವಿದೆಡೆಗಳಲ್ಲಿ ಎಡೆಬಿಡದೆ ಮಳೆ ಸುರಿದಿತ್ತು.

ಸಮುದ್ರದ ಮೈಲ್ಮೈ ತಾಪಮಾನವು ತೀವ್ರಗತಿಯಲ್ಲಿ ಏರುತ್ತಿರುವುದೇ ಇದಕ್ಕೆ ಬಹುಮುಖ್ಯ ಕಾರಣವಾಗಿದೆ. ನೀರು ಆವಿಯಾಗುವ ಪ್ರಮಾಣವು ಇದರಿಂದ ಹೆಚ್ಚಾಗುತ್ತಾ ವಾತಾವರಣದಲ್ಲಿನ ನೀರಾವಿಯ ಅಂಶವನ್ನು ಹೆಚ್ಚಿಸುತ್ತದೆ. ಹೆಚ್ಚು ಬಿಸಿಯಾಗಿರುವ ವಾತಾವರಣವು ಹೆಚ್ಚು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವುದರಿಂದ ಧಾರಾಕಾರ ಮಳೆಯಾಗಬಹುದು. ಇತ್ತೀಚೆಗೆ ಪ್ರಚಂಡ ಮಳೆ ಮತ್ತು ಚಂಡಮಾರುತಗಳು ಅರಬ್ಬಿ ಪರ್ಯಾಯ ದ್ವೀಪ ಮತ್ತು ಭಾರತದ ಪಶ್ಚಿಮ ಹಾಗೂ ಪೂರ್ವ ಕರಾವಳಿಗಳಲ್ಲಿ ಹೆಚ್ಚಾಗಿವೆ. ಕಳೆದ 70 ವರ್ಷಗಳಲ್ಲಿ ಶಾಖದ ಒತ್ತಡವು ಉಂಟಾಗುವ ಪ್ರದೇಶದ ಪ್ರಮಾಣವು ಶೇ.30 ರಿಂದ ಶೇ.40ರಷ್ಟಕ್ಕೆ ಏರಿದೆ. ವಿಶ್ವದೆಲ್ಲೆಡೆ, ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟಿರುವವರು, ನಗರಗಳ ಕೊಳೆಗೇರಿಯ ಜನ ಮತ್ತು ದಟ್ಟ ಜನಸಂದಣಿಯಲ್ಲಿ ಬದುಕುವವರು ಇವೆಲ್ಲದರ ಪರಿಣಾಮವನ್ನು ಹೆಚ್ಚೆಚ್ಚು ಎದುರಿಸುತ್ತಿದ್ದಾರೆ.

ಆಸ್ಟ್ರೇಲಿಯಾ, ಕೆನಡಾ, ನೈಋತ್ಯ ಅಮೇರಿಕ, ಸ್ಪೇನ್, ಪೋರ್ಚುಗಲ್, ಗ್ರೀಸ್ ಮತ್ತು ಇನ್ನೂ ಹಲವು ದೇಶಗಳಲ್ಲಿ ವಿಧ್ವಂಸಕ ಕಾಡ್ಗಿಚ್ಚಿಗೆ ತಾಪಮಾನದಲ್ಲಿನ ವಿಪರೀತ ಏರಿಕೆ ಕಾರಣವಾಗಿದೆ. ಭಾರತದಲ್ಲೂ ಸಹ ಬಿಸಿಗಾಳಿಯ ಅಲೆಯ ವಾತಾವರಣದಿಂದ ಕಾಡ್ಗಿಚ್ಚಿನ ಪ್ರಕರಣಗಳು ಹೆಚ್ಚಾಗಿವೆ. ಕಾಡುಗಳಲ್ಲಿ ವಾಸಿಸುವ ಬುಡಕಟ್ಟಿನ ಜನರು ಇದಕ್ಕೆ ನೇರ ಬಲಿಪಶುಗಳು. ಹೀಗಾಗಿಯೇ, ವಾತಾವರಣದ ಬದಲಾವಣೆಯು ನಮ್ಮ ಕಾಲದ ಬಹುಮುಖ್ಯವಾದ ಸಮಸ್ಯೆಗಳಲ್ಲಿ ಒಂದಾಗಿದೆ.

### ಜಾಗತಿಕ ತಾಪಮಾನ

ಜಾಗತಿಕ ತಾಪಮಾನ ಒಂದು ತಾಂತ್ರಿಕ ವಿಷಯವೆನಿಸಿದರೂ ಸಹ, ಅದರ ಹಿಂದಿರುವ ವೈಜ್ಞಾನಿಕ ವಿಚಾರಗಳನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಜಾಗತಿಕ ತಾಪಮಾನ ಏರಿಕೆಯನ್ನು ಹವಾಮಾನ ಬದಲಾವಣೆ ಎನ್ನುವುದಕ್ಕೆ ಪರ್ಯಾಯವಾಗಿ ಬಳಸಲಾಗುತ್ತದೆ. ಜಾಗತಿಕ ತಾಪಮಾನ ಏರಿಕೆಯು ಹವಾಮಾನ ಬದಲಾವಣೆಯ ಒಂದಂಶ ಮಾತ್ರ. ಆದರೆ, ಅದು ಬಹಳ ಮುಖ್ಯವಾದ ಅಂಶ. ಹವಾಮಾನ ಬದಲಾವಣೆಯನ್ನು ಸರಿಯಾಗಿ ವ್ಯಾಖ್ಯಾನಿಸಲು ಸುಮಾರು 30 ವರ್ಷಗಳ ಕಾಲಾವಧಿಯಲ್ಲಿ ನಡೆಸಲಾಗುವ ಅಧ್ಯಯನದ ಬೆಂಬಲ ಬೇಕು. ತಾಪಮಾನ, ತೇವಾಂಶ ಮತ್ತು ಮಳೆಯಂತಹ ಹವಾಮಾನದ ಅಳತೆಗೋಲನ್ನು ವಿಶ್ವಾಸಾರ್ಹ ಸಾಧನಗಳಿಂದ ದಾಖಲಿಸುವ ಕ್ರಮವು 19ನೇ ಶತಮಾನದ ಆರಂಭದಿಂದಲೂ ಸತತವಾಗಿ ನಡೆದಿದೆ. ಈಗ ಪ್ರಪಂಚದೆಲ್ಲೆಡೆ, ದಿನದ 24 ಗಂಟೆಗಳ ಕಾಲವೂ ಸ್ವಯಂ ದಾಖಲಿಸುವ ಸಾವಿರಾರು ಹವಾಮಾನ ಕೇಂದ್ರಗಳು ನಿರಂತರವಾಗಿ ಕಾರ್ಯಪ್ರವೃತ್ತವಾಗಿವೆ. ಎಲ್ಲೆಡೆಯಿಂದಲೂ ಅಂಕಿಅಂಶಗಳನ್ನು ಸಂಗ್ರಹಿಸಿ ಜಾಗತಿಕವಾಗಿ ಅಥವಾ ಒಂದು ನಿರ್ದಿಷ್ಟ ಪ್ರದೇಶದ ತಾಪಮಾನದ ಸರಾಸರಿಯನ್ನು ತಜ್ಞರು ಕಂಡುಹಿಡಿಯುತ್ತಾರೆ. 1850–1900ರಿಂದ ಹಿಡಿದು 2011–2020ರ ಕಾಲಾವಧಿಯಲ್ಲಿ ಸರಾಸರಿ ಜಾಗತಿಕ ತಾಪಮಾನವು 1.09 ಡಿಗ್ರಿಯಷ್ಟು ಏರಿದೆ. ಒಟ್ಟಾರೆಯಾಗಿ, ಸಣ್ಣಸಣ್ಣ ಕಾಲಾವಧಿಗಳಲ್ಲಿ, ಉದಾಹರಣೆಗೆ, 1876–1900ರ ನಡುವೆ ತಾಪಮಾನವು ಸ್ವಲ್ಪ ಕಡಿಮೆಯೂ ಆಗಿತ್ತು. ಆದರೆ ಕಳೆದ 30 ವರ್ಷಗಳಲ್ಲಿ ತಾಪಮಾನ ಏರಿಕೆಯ ಪ್ರಮಾಣ ಹಿಂದಿಗಿಂತಲೂ ವಿಪರೀತ ಹೆಚ್ಚಾಗಿದೆ.

ಕಳೆದ 2000 ವರ್ಷಗಳ ಕಾಲಾವಧಿಯಲ್ಲಿ 2023ರಲ್ಲಿಯೇ ಅತಿ ಹೆಚ್ಚು ಸರಾಸರಿ ಜಾಗತಿಕ ತಾಪಮಾನವು ದಾಖಲಾಗಿದ್ದು. ಅದು 1859–1900 ನಡುವಿನ ಸರಾಸರಿ ತಾಪಮಾನಕ್ಕಿಂತ 1.48 ಡಿಗ್ರಿ ಸೆಲ್ಸಿಯಸ್ ಹೆಚ್ಚು ಇತ್ತು. ಇದನ್ನು ಕೈಗಾರಿಕಾಪೂರ್ವದ ಆರಂಭ ಕಾಲ ಎಂದು ಪರಿಗಣಿಸಲಾಗಿದೆ. 2023ರಲ್ಲಿ ಜೂನ್‌ನಿಂದ ಡಿಸೆಂಬರ್‌ವರೆಗೆ ತಾಪಮಾನದಲ್ಲಿ ಪ್ರತಿ ತಿಂಗಳು ಹಿಂದಿನ ವರ್ಷದ ಅದೇ ತಿಂಗಳಿಗಿಂತ ಏರಿಕೆ ಕಂಡುಬಂದಿದೆ. ಕಳೆದ 9 ವರ್ಷಗಳು 'ಅತ್ಯಧಿಕ ತಾಪಮಾನದ ನವವರ್ಷ'ಗಳೆಂದು ದಾಖಲಾಗಿವೆ. ಭಾರತದಲ್ಲಿ 1850ಕ್ಕೆ ಹೋಲಿಸಿದರೆ ತಾಪಮಾನವು 2023ರಲ್ಲಿ 1.18 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಇದೆಲ್ಲವೂ, ಜಾಗತಿಕ ಹವಾಮಾನದ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತವೆ. ಆದ್ದರಿಂದ ಮಾಪನಗಳು ಸೂಚಿಸುವ ಜಾಗತಿಕ ತಾಪಮಾನದ ವಾಸ್ತವವನ್ನು ಇಂದು ಅಲಕ್ಷಿಸಲು ಸಾಧ್ಯವೇ ಇಲ್ಲ.

### ಹವಾಮಾನ ವೈಪರೀತ್ಯಕ್ಕೆ ಕಾರಣಗಳು

ಪುರಾತನ ಕಾಲದಿಂದಲೂ ಭೂಮಿಯ ಹವಾಮಾನದಲ್ಲಿ ವಿಪರೀತ ಬದಲಾವಣೆಗಳು ಕಾಲಕಾಲಕ್ಕೆ ಕಂಡು ಬಂದಿದೆ. ಮಾನವನ ವಿಕಾಸವಾಗಿರದ್ದಿದ್ದ ಕಾಲದಲ್ಲಿ ಆ ವೈಪರೀತ್ಯವು ಪ್ರಕೃತಿ ಸಹಜವಾಗಿ ನಡೆದಿತ್ತು. ಆಗ ಅದು ಸಾವಿರಾರು ಅಥವಾ ಲಕ್ಷಾಂತರ ವರ್ಷಗಳ ಕಾಲಾವಧಿಯಲ್ಲಿ ನಡೆದರೆ, ಮಾನವನು ಸೃಷ್ಟಿಸಿದ ವೈಪರೀತ್ಯಗಳು ಕಳೆದ 2–3 ಶತಮಾನಗಳಿಂದ ವಿಧ್ವಂಸಕ ನರ್ತನವನ್ನು ನಡೆಸಿವೆ. ಇಂದಿನ ಹವಾಮಾನ ವೈಪರೀತ್ಯಕ್ಕೆ ಕಾರ್ಬನ್ ಡೈಆಕ್ಸೈಡ್, ಮಿಥೇನ್ ಮತ್ತು ನೈಟ್ರಸ್ ಆಕ್ಸೈಡ್ ಹಾಗೂ ಇನ್ನಿತರ ಸಣ್ಣಪುಟ್ಟ ಅನಿಲಗಳನ್ನು ಒಳಗೊಂಡ ಹಸಿರುಮನೆ ಅನಿಲಗಳೇ ಕಾರಣ ಎಂಬುದು ತಿಳಿದುಬಂದಿದೆ. ಕಲ್ಲಿದ್ದಲು, ನೈಸರ್ಗಿಕ ಅನಿಲ ಹಾಗೂ ತೈಲಗಳಂತಹ ಪಳೆಯುಳಿಕೆ ಇಂಧನಗಳನ್ನು ಸುಡುವ ಮಾನವನ ಅತಿಯಾದ ಚಟುವಟಿಕೆಗಳಿಂದ ಹಸಿರುಮನೆ ಅನಿಲಗಳು ಹೊರಹೊಮ್ಮುತ್ತವೆ. ಈ ಹಸಿರುಮನೆ ಅನಿಲಗಳು ಭೂಮಿಯ ಮೇಲೆ ಪದರವೊಂದನ್ನು ಕಟ್ಟುತ್ತವೆ. ಆ ಮೂಲಕ, ಭೂಮಿಯನ್ನು ಪ್ರವೇಶಿಸುವ ಸೂರ್ಯನ ಶಾಖವನ್ನು ಅವು ಹಿಡಿದಿಟ್ಟುಕೊಳ್ಳುತ್ತವೆ ಮತ್ತು ಈ ಅನಿಲಗಳ ಸಾಂದ್ರತೆ ಹೆಚ್ಚಿದಂತೆಲ್ಲಾ ವಾತಾವರಣದಲ್ಲಿ ಹಾಗೂ ಮೇಲ್ಮೈ ಕ್ಷೇತ್ರದಲ್ಲಿ ತಾಪಮಾನವೂ ಹೆಚ್ಚಾಗುತ್ತದೆ. ಹಸಿರುಮನೆ ಅನಿಲಗಳಲ್ಲಿ ಅತಿಹೆಚ್ಚು ಅಂದರೆ, ಕಾರ್ಬನ್ ಡೈಆಕ್ಸೈಡ್ ಶೇ.76ರಷ್ಟು ಇದ್ದರೆ, ಮಿಥೇನ್ ಶೇ.16ರಷ್ಟು ಮತ್ತು ನೈಟ್ರಸ್ ಆಕ್ಸೈಡ್ ಶೇ.6ರ ಪ್ರಮಾಣದಲ್ಲಿ ಇವೆ. ಮಿಥೇನ್ ಅನಿಲವು ಕಾರ್ಬನ್ ಡೈಆಕ್ಸೈಡ್‌ಗಿಂತ 30 ಪಟ್ಟು ಹೆಚ್ಚು ಮತ್ತು ನೈಟ್ರಸ್ ಆಕ್ಸೈಡ್ 270 ಪಟ್ಟು ಹೆಚ್ಚು ಜಾಗತಿಕ ತಾಪಮಾನದ ಏರಿಕೆಗೆ ಕಾರಣವಾಗುತ್ತವೆ.

ದ್ಯುತಿಸಂಶ್ಲೇಷಣೆ ಕ್ರಿಯೆಗಾಗಿ ಮರಗಳು ವಾತಾವರಣದಲ್ಲಿರುವ ಕಾರ್ಬನ್ ಡೈಆಕ್ಸೈಡ್‌ನ್ನು ಹೀರಿಕೊಳ್ಳುತ್ತವೆ. ಆದರೆ, ಅರಣ್ಯ ನಾಶ ಮತ್ತು ಭೂಬಳಕೆಯ ಸ್ತರದಲ್ಲಿ ಏರುಪೇರುಗಳಾಗುವುದರಿಂದ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಭೂಮಿಯ ಮೇಲ್ಪದರದ ಪ್ರತಿಫಲನ ಸಾಮರ್ಥ್ಯವು ಕುಗ್ಗುವ ಹಾಗೂ ಭೂಮಿಯ ಹಿಮಚ್ಛಾದಿತ ಪ್ರದೇಶವು ನಷ್ಟವಾಗುವುದರಿಂದ ಕೂಡ ಜಾಗತಿಕ ತಾಪಮಾನವು ಏರಿಕೆಯನ್ನು ಕಾಣುತ್ತಿದೆ. ಕೈಗಾರಿಕೆಗಳು ಕಕ್ಕುವ ವಿಷಕಾರಿ ಅನಿಲ ಮತ್ತು ಕೈಗಾರಿಕಾ ತ್ಯಾಜ್ಯಗಳ ವಿಲೇವಾರಿಯಲ್ಲಿನ ದಿವ್ಯ ನಿರ್ಲಕ್ಷವೂ ಈ ಪ್ರಕ್ರಿಯೆನ್ನು ತೀವ್ರಗೊಳಿಸಿದೆ. ಇದಕ್ಕೆ ಕೈಗಾರಿಕೋದ್ಯಮಿಗಳು ಮತ್ತು ಕಾರ್ಪೊರೆಟ್ ಕಂಪೆನಿಗಳು ಅತಿಲಾಭದ ದುರಾಸೆಯಿಂದಾಗಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡದಿರುವುದೂ ಸಹ (ಭೂಮಿಯ)ಗಾಯದ ಮೇಲೆ ಬರೆ ಎಳೆದಿದೆ. ಇವನ್ನು ನೋಡಿಕೊಂಡು ಸರ್ಕಾರಗಳು ಮುಗುಮ್ಮಾಗಿ ಕುಳಿತಿವೆ. ಕಾಡಿನ ಧ್ವಂಸ, ದೂರಾಲೋಚನೆಯಿಲ್ಲದ ನಗರೀಕರಣದಿಂದ ಉಂಟಾಗಿರುವ ನೀರಿನ ಸೆಲೆಗಳ ನಾಶ, ಅರ್ಥಹೀನ ಪ್ರವಾಸೋದ್ಯಮಕ್ಕೆ ಉತ್ತೇಜನ ಮತ್ತು ಇನ್ನಿತರ ಲಾಭಕೋರ ಯೋಜನೆಗಳಿಂದಾಗಿ, ಕಾರ್ಪೊರೆಟ್ ಕಂಪೆನಿಗಳ ಜೊತೆಗೂಡಿ ಬಂಡವಾಳಶಾಹಿ ಸರ್ಕಾರಗಳು ಪರಿಸರದ ಸಮತೋಲನಕ್ಕೆ ವಿಪರೀತ ಧಕ್ಕೆಯನ್ನು ತಂದಿವೆ.

### ಹವಾಮಾನ ವೈಪರೀತ್ಯದ ಪರಿಣಾಮಗಳು

ಹವಾಮಾನ ವೈಪರೀತ್ಯದಿಂದಾಗಿ ಜಗತ್ತಿನೆಲ್ಲೆಡೆ ಸಾಗರದ ಮಟ್ಟ ಏರುತ್ತಿದೆ. ಇದಕ್ಕೆ ಕಾರಣ: (1) ಉಷ್ಣತೆಯಿಂದ ಸಮುದ್ರದ ನೀರು ಹಿಗ್ಗುತ್ತದೆ (2) ಪರ್ವತಗಳ ಹಿಮನದಿ ಹಾಗೂ ಅಂಟಾರ್ಟಿಕಾ ಮತ್ತು ಗ್ರೀನ್‌ಲ್ಯಾಂಡ್ ಮೇಲಿನ ಹಿಮಹಾಳೆಗಳು ಕರಗಿ ಕೆಳಗೆ ಇಳಿಯುತ್ತವೆ. 1980ರಿಂದೀಚೆಗೆ ಜಾಗತಿಕವಾಗಿ ಸಮುದ್ರ ಮಟ್ಟವು ಸರಾಸರಿ 250ಮಿ.ಮಿ.ನಷ್ಟು ಮೇಲಕ್ಕೇರಿದೆ. ಏಷ್ಯಾ ಖಂಡದ ಸಮುದ್ರ ಮಟ್ಟವು ಜಾಗತಿಕ ಸರಾಸರಿಗಿಂತ ಹೆಚ್ಚಿನ ವೇಗದಲ್ಲಿ ಏರುತ್ತಿದೆ. ಸಣ್ಣಸಣ್ಣ ದ್ವೀಪದ ದೇಶಗಳು ಮುಳುಗಡೆಯ ಅಪಾಯವನ್ನು ಎದುರಿಸುತ್ತಿವೆ.

ಜಾಗತಿಕ ಬಿಸಿಯೇರುವಿಕೆಯಿಂದ ಬಿಸಿಗಾಳಿಯ ಅಲೆ, ಚಂಡಮಾರುತಗಳು, ಕುಂಭದ್ರೋಣ ಮಳೆ ಮತ್ತು ಪ್ರವಾಹ ಹಾಗೂ ಕೃಷಿ ಬರಗಳಂತಹ ಹವಾಮಾನದ ವಿಪರೀತ ಘಟನೆಗಳು ಹೆಚ್ಚಾಗುತ್ತವೆ. ಯುರೋಪ್‌ನಲ್ಲಿ ಹಿಂದೆಂದೂ ಅನುಭವಿಸದಿದ್ದಂತಹ ಬಿಸಿಗಾಳಿಗೆ ಸಾವಿರಾರು ಜನರು ಬಲಿಯಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಚಂಡಮಾರುತಗಳ ಪುನರಾವರ್ತನೆ ಮತ್ತು ತೀವ್ರತೆಗಳು ಹೆಚ್ಚಾಗಿವೆ. 1999ರಲ್ಲಿ ಒರಿಸ್ಸಾ ಚಂಡಮಾರುತ, 2008ರಲ್ಲಿ ನರ್ಗಿಸ್ ಚಂಡಮಾರುತ, 2009ರಲ್ಲಿ ಆಲಿಯಾ ಚಂಡಮಾರುತ, 2019ರಲ್ಲಿ ಫನಿ ಚಂಡಮಾರುತ, 2020ರಲ್ಲಿ ಆಂಫಾನ್ ಚಂಡಮಾರುತಗಳು ಬಹಳ ವಿನಾಶಕಾರಿಯಾಗಿ ಬಂದೆರಗಿದ್ದವು.




**ಕಳೆದ 2000 ವರ್ಷಗಳ ಕಾಲಾವಧಿಯಲ್ಲಿ 2023ರಲ್ಲಿಯೇ ಅತಿ ಹೆಚ್ಚು ಸರಾಸರಿ ಜಾಗತಿಕ ತಾಪಮಾನವು ದಾಖಲಾಗಿದ್ದು**

ಹವಾಮಾನ ವೈಪರೀತ್ಯವು ಮಾನವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಬಿಸಿಗಾಳಿಯ ಅಲೆಯು ಶಾಖಾಘಾತ ಮತ್ತು ಸಾವುಗಳಿಗೆ ಕಾರಣವಾಗುತ್ತದೆ. ಪ್ರವಾಹಗಳು ಸಾಂಕ್ರಾಮಿಕ ರೋಗಗಳನ್ನು ಹರಡಿದರೆ, ದೀರ್ಘಕಾಲದ ಬರಗಳು ಅಪೌಷ್ಟಿಕತೆಯನ್ನುಂಟು ಮಾಡುತ್ತವೆ. ಹವಾಮಾನ ವೈಪರೀತ್ಯದಿಂದ ಎಲೆ ಉದುರುವಿಕೆ, ಪಕ್ಷಿಗಳ ವಲಸೆ ಹಾಗೂ ಮೊಟ್ಟೆಯಿಡುವ ಪ್ರಕ್ರಿಯೆಗಳು ಬೇಗನೆ ಆರಂಭವಾಗಿ, ಜೀವಿಗಳ ನಶಿಸುವಿಕೆಯುಂಟಾಗಿ ಜೀವ ವೈವಿಧ್ಯತೆಗೆ ಧಕ್ಕೆ ಬರುತ್ತಿದೆ ಹಾಗೂ ಹೊಸ ಜೀವಿಗಳ ಸೃಷ್ಟಿಗೂ ಪೆಟ್ಟು ಬೀಳುತ್ತದೆ. ಹವಾಮಾನ ವೈಪರೀತ್ಯವು ಸಂಪನ್ಮೂಲ ಕ್ರೋಢೀಕರಣ ಹಾಗೂ ಉತ್ಪಾದಕತೆಯ ಮೇಲೂ ದುಷ್ಪರಿಣಾಮವನ್ನು ಬೀರುವುದರಿಂದ ಆರ್ಥಿಕತೆಗೂ ಹೊಡೆತ ಬೀಳುತ್ತದೆ. ಇತ್ತೀಚಿನ ಒಂದು ಅಧ್ಯಯನವು ಭಾರತದಲ್ಲಿ, 'ಒಂದು ಡಿಗ್ರಿ ಸೆಲ್ಸಿಯಸ್ ತಾಪಮಾನದ ಏರಿಕೆಯಿಂದ ಆರ್ಥಿಕ ಬೆಳವಣಿಗೆಯು ಶೇ.3.89ರಷ್ಟು ಕುಂಠಿತವನ್ನು ಅನುಭವಿಸಿದೆ' ಎಂದು ತೋರಿಸಿದೆ.

ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಹವಾಮಾನ ವೈಪರೀತ್ಯವನ್ನು ಕುರಿತು ನಡೆಸಿಕೊಟ್ಟ ಚರ್ಚೆಯೊಂದು ಇತ್ತೀಚೆಗೆ ಪುಸ್ತಕ ರೂಪದಲ್ಲಿ ಹೊರಬಂತು. ನಮ್ಮ ಪಕ್ಷದ ಸ್ಥಾಪಕರು ಹಾಗೂ ಕಾರ್ಮಿಕವರ್ಗದ ಮಹಾನ್ ನಾಯಕರಾದ ಕಾಮ್ರೇಡ್ ಶಿವದಾಸ್ ಘೋಷರ ಚಿಂತನೆಗಳನ್ನು ಆಧರಿಸಿ ನಡೆಸಿದ್ದ ಆ ಚರ್ಚೆಯಲ್ಲಿ ಕಾಮ್ರೇಡ್ ಪ್ರವಾಶ್ ಘೋಷ್‌ರವರು, ಇಂದಿನ ವಿಪರೀತ ಹವಾಮಾನ ವೈಪರೀತ್ಯಕ್ಕೆ ಕಾರಣಗಳೇನು ಎಂಬ ತಲೆಬರಹದ ಪ್ಯಾರಾದಲ್ಲಿ ಅದರ ಕಾರಣಗಳನ್ನು ಹೀಗೆ ವಿವರಿಸಿದ್ದಾರೆ: "ಹವಾಮಾನ ವೈಪರೀತ್ಯವೇಕೆ? ಪ್ರವಾಹ ಮತ್ತು ಚಂಡಮಾರುತಗಳು ಹೆಚ್ಚಾಗಲು ಕಾರಣವೇನು? ಇದಕ್ಕೆ ಜಾಗತಿಕ ತಾಪಮಾನ ಹೆಚ್ಚಳವೇ ಕಾರಣವೆಂದಿದ್ದಾರೆ ವಿಜ್ಞಾನಿಗಳು. ಹಸಿರುಮನೆ ಅನಿಲಗಳ ಸಾಂದ್ರತೆಯು ಹೆಚ್ಚಾಗುತ್ತಿರುವುದರ ಬಗ್ಗೆ ಅವರು ಆತಂಕ ವ್ಯಕ್ತಪಡಿಸಿದ್ದಾರೆ....ಈ ಜಾಗತಿಕ ಬಿಸಿಯೇರುವಿಕೆಯಿಂದ ಧ್ರುವಗಳ ಹಿಮ ಕರಗುತ್ತಿದೆ. ಹಿಮಾಲಯದ ಹಿಮನದಿಗಳು ಕರಗುತ್ತಿವೆ. ಸಮುದ್ರ ಮಟ್ಟ ಏರುತ್ತಿದೆ ಮತ್ತು ವಿಶಾಲ ಕರಾವಳಿ ಪ್ರದೇಶಗಳು ಸಮುದ್ರದ ಆಳಕ್ಕೆ ಸೇರುತ್ತಿವೆ. ಕೆಲವು ಪ್ರದೇಶಗಳಲ್ಲಿ ವಿಪರೀತ ಮಳೆ ಹಾಗೂ ಪ್ರವಾಹಗಳಾದರೆ, ಬೇರೆ ಪ್ರದೇಶಗಳಲ್ಲಿ ಭಯಂಕರ ಬರ ಕಾಣಿಸಿಕೊಂಡು ಮಳೆಯ ಲಕ್ಷಣವೇ ಇಲ್ಲ......ಬಂಡವಾಳಿಗರು

12 ನೇ ಪುಟಕ್ಕೆ

Registered Newspaper

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಬೀದಿಬದಿ ವ್ಯಾಪಾರಸ್ಥರ ಹೋರಾಟ - ದಾವಣಗೆರೆ




ಇದೇ ಜುಲೈ 18ರಂದು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಬೀದಿಬದಿ ವ್ಯಾಪಾರಸ್ಥರಿಗೆ ಏಕಾಏಕಿಯಾಗಿ ಅಂಗಡಿ ಮುಗ್ಗಟ್ಟು ತೆರವುಗೊಳಿಸುವ ಸಲುವಾಗಿ ಪೊಲೀಸರು ನೋಟಿಸ್ ನೀಡಿದ್ದನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ನಗರ ಸಭೆಯ ಆಯುಕ್ತರು ವ್ಯಾಪಾರಸ್ಥರ ಕುಂದುಕೊರತೆ ಸಭೆಯನ್ನು ಕರೆದು ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.

## ಬಳ್ಳಾರಿ:
# ನಗರದ ಮೂಲಭೂತ ನಾಗರಿಕ ಸೌಲಭ್ಯಗಳಿಗೆ ಆಗ್ರಹ




ಜೂನ್ 30ರಂದು ಬಳ್ಳಾರಿ ನಾಗರಿಕ ಹೋರಾಟ ಸಮಿತಿಯ ನೇತೃತ್ವದಲ್ಲಿ ಬಳ್ಳಾರಿ ಮಹಾನಗರಪಾಲಿಕೆಯ ಮುಂಭಾಗದಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಿ, ಪಾಲಿಕೆಯ ಮೇಯರ್‌ಗೆ ಮನವಿ ಪತ್ರ ಸಲ್ಲಿಸಲಾಯಿತು. ಆ ಸಂದರ್ಭದಲ್ಲಿ, ಬಳ್ಳಾರಿ ನಾಗರಿಕ ಹೋರಾಟ ಸಮಿತಿಯ ಸಂಚಾಲಕರಾದ ಕಾಮ್ರೇಡ್ ಸೋಮಶೇಖರ ಗೌಡ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ವರ್ತುಲ ರಸ್ತೆ, ಒಳಚರಂಡಿ, ಮೇಲ್ಸೇತುವೆ ಅಗಲೀಕರಣ, ರಸ್ತೆಗುಂಡಿ, ಬೀದಿನಾಯಿ ಕಾಟ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಒತ್ತಾಯಿಸಲಾಯಿತು.

# ಹವಾಮಾನ ವೈಪರೀತ್ಯದೊಂದಿಗೆ ಬಂಡವಾಳಶಾಹಿ ರಾಜಕಾರಣದ ಚೆಲ್ಲಾಟ

11ನೇ ಪುಟದಿಂದ.......

ಹಸಿರುಮನೆ ಅನಿಲ ಹೊರಸೂಸುವಿಕೆ ಪ್ರಮಾಣವನ್ನು ತಗ್ಗಿಸಲು ಯಾವುದೇ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಈಶಾನ್ಯ ಭಾರತ, ಉತ್ತರಾಖಂಡ ಹಾಗೂ ಕಾಶ್ಮೀರಗಳಲ್ಲಿ 'ಅಭಿವೃದ್ಧಿ'ಯ ಹೆಸರಿನಲ್ಲಿ ಪ್ರಾಕೃತಿಕ ಸಮತೋಲನವನ್ನು ಹಾಳುಗೆಡವಲಾಗಿದೆ....... ಕಾಡುಗಳನ್ನು ನಾಶ ಮಾಡಿ ಆದಿವಾಸಿಗಳನ್ನು ಅವರ ಹಾಡಿಗಳಿಂದ ಹೊರದಬ್ಬಲಾಗುತ್ತಿದೆ. ಅಂಡಮಾನ್ ಆಗಲೀ ಅಥವಾ ಸುಂದರಬನವಾಗಲೀ ಅಲ್ಲಿ ಜೀವವೈವಿಧ್ಯತೆಯನ್ನು ನಾಶ ಮಾಡಲಾಗಿದೆ. ಅರಣ್ಯ ಭೂಮಿಯಲ್ಲಿ ಹೆದ್ದಾರಿ, ಕೈಗಾರಿಕೆ ಹಾಗೂ ಗಣಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇದೆಲ್ಲವನ್ನೂ ಬಂಡವಾಳಿಗರ ಲಾಭ ದೃಷ್ಟಿಯಿಂದ ಮಾಡಲಾಗಿದೆ. ಪ್ರಪಂಚವೇ ಹಾಳಾಗಲಿ, ನಾಗರೀಕತೆಯೇ ಅಳಿಸಿ ಹೋಗಲಿ, ಬಂಡವಾಳಿಗರಿಗೆ ತಮ್ಮ ಗರಿಷ್ಠ ಲಾಭ ಬೇಕು. ಅವರು ಮಾನವ ನಾಗರೀಕತೆಯನ್ನೇ ನಾಶ ಮಾಡುತ್ತಿದ್ದಾರೆ."

### ಹವಾಮಾನ ವೈಪರೀತ್ಯವನ್ನು ಹೇಗೆ ತಡೆಗಟ್ಟಬಹುದು

ಹವಾಮಾನ ವೈಪರೀತ್ಯವನ್ನು ಹತೋಟಿಯಲ್ಲಿಡಬೇಕೆಂದರೆ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಬೇಕು. ಅಂದರೆ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಕಾರ್ಬನ್ ಡೈಆಕ್ಸೈಡ್ ಹೊರಸೂಸುವಿಕೆಯನ್ನು ಕಡಿಮೆ ಮಾಡಬೇಕು. ಸೌರಶಕ್ತಿ, ವಾಯುಶಕ್ತಿ ಹಾಗೂ ಸಣ್ಣ ಜಲವಿದ್ಯುತ್ ಉತ್ಪಾದನೆಯ ಪರ್ಯಾಯ ಶಕ್ತಿ ಉತ್ಪಾದನೆಯ ಮಾರ್ಗಗಳನ್ನು ವ್ಯಾಪಕವಾಗಿ ಬಳಕೆ ಮಾಡಬೇಕು. ವಿದ್ಯುತ್ ಚಾಲಿತ ವಾಹನಗಳನ್ನು ಬಳಸಬೇಕು ಮತ್ತು ಜನರ ಓಡಾಟ ಕಡಿಮೆ ಇರುವಂತೆ ಯೋಜನೆ ರೂಪಿಸಬೇಕು.

ಹವಾಮಾನ ವೈಪರೀತ್ಯವು ಇಂದು ಜಾಗತಿಕ ವಿದ್ಯಮಾನವಾಗಿದ್ದು, ಅದನ್ನು ಮತ್ತು ಅದರ ವ್ಯತಿರಿಕ್ತ ಪರಿಣಾಮಗಳನ್ನು ತಡೆಯುವುದೂ ಸಹ ಜಾಗತಿಕ ಪ್ರಯತ್ನವಾಗಬೇಕು. ಹಿಂದಿನಿಂದಲೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕೈಗಾರೀಕರಣದ ಎಲ್ಲಾ ಅನುಕೂಲಗಳನ್ನು ಪಡೆದುಕೊಂಡವು. ಇಂದು ಅದರಿಂದಾಗಿರುವ ಹವಾಮಾನ ವೈಪರೀತ್ಯದ ಸಮಸ್ಯೆಯನ್ನು ಬಗೆಹರಿಸಲು ಅವುಗಳೇ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕು; ಆದರೆ, ಅಭಿವೃದ್ಧಿಯ ಗತಿಯಲ್ಲಿರುವ ರಾಷ್ಟ್ರಗಳು ಇದರ ನೋವನ್ನು ಅನುಭವಿಸುತ್ತಿವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಆರ್ಥಿಕ ಸಹಾಯ, ತಂತ್ರಜ್ಞಾನ ವರ್ಗಾವಣೆ ಮಾಡಿ ಹಸಿರುಮನೆ ಅನಿಲಗಳು ಹೊರಸೂಸುವಿಕೆಯನ್ನು ಕಡಿಮೆ ಮಾಡುವಂತೆ ನೋಡಿಕೊಳ್ಳಬೇಕಿತ್ತು. ಆದರೆ ಹಾಗಾಗಲಿಲ್ಲ.

### ಭಾರತದ ಸ್ಥಿತಿ ಮತ್ತು ಮುಂದಿನ ಗುರಿ

ಭಾರತವು ಹವಾಮಾನ ವೈಪರೀತ್ಯದಿಂದ ಹೆಚ್ಚು ನಲುಗಿರುವ 7ನೇ ರಾಷ್ಟ್ರವಾಗಿದೆ. ಹವಾಮಾನ ವೈಪರೀತ್ಯದ ಸಮಸ್ಯೆಯನ್ನು ಬಗೆಹರಿಸಲು 2008ರ ಜೂನ್ 30ರಂದು ರಾಷ್ಟ್ರೀಯ ಕ್ರಿಯಾ ಯೋಜನೆಯು ಬಿಡುಗಡೆಯಾಯಿತು. 2030ರ ಹೊತ್ತಿಗೆ 10 ಕೋಟಿ ಟನ್‌ನಷ್ಟು ಕಾರ್ಬನ್ ಹೊರಸೂಸುವಿಕೆಯನ್ನು ತಡೆಯಬಹುದು ಮತ್ತು ಶೇ.50ರಷ್ಟು ಅಗತ್ಯ ವಿದ್ಯುಚ್ಛಕ್ತಿಯನ್ನು ನವೀಕರಿಸಬಹುದಾದ ಮೂಲಗಳಿಂದ ನಿರ್ವಹಿಸಬಹುದು ಎಂದು 2021ರ ಗ್ಲಾಸ್‌ಗೊ ಸಮ್ಮೇಳನದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದರು. ಆದರೆ ಮಾತಿಗೂ ಮತ್ತು ವಾಸ್ತವಕ್ಕೂ ಅಜಗಜಾಂತರ ಅಂತರವಿದೆ. ಆದ್ದರಿಂದಲೇ, ಇದೇ ಕಾಲಾವಧಿಯಲ್ಲಿ ಕಲ್ಲಿದ್ದಲಿನ ಆಮದು ಮಾತ್ರ ಹೆಚ್ಚಾಯಿತು!

ಆದ್ದರಿಂದ, ಹವಾಮಾನ ವೈಪರೀತ್ಯದಿಂದ ಪಾರಾಗಲು ಜಾಗತಿಕ ತಾಪಮಾನವನ್ನು ಇಳಿಸುವಂತೆ ಮಾಡಲು ಎಲ್ಲಾ ದೇಶಗಳಲ್ಲೂ, ಯಾವುದೇ ಸರ್ಕಾರವಿದ್ದರೂ ಸರಿಯೇ, ಪ್ರಬಲವಾದ ಜನ ಚಳುವಳಿಯನ್ನು ಸಂಘಟಿಸುವುದು, ಜನಾಭಿಪ್ರಾಯವನ್ನು ಮೂಡಿಸುವುದು ಅತ್ಯಂತ ತುರ್ತು ಅಗತ್ಯವಾಗಿದೆ. ಅಂತಹ ಜನಚಳುವಳಿಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಹವಾಮಾನ ವೈಪರೀತ್ಯದ ಅಪಾಯವನ್ನು ಪರಿಣಾಮಕಾರಿಯಾಗಿ ನಮ್ಮ ಸರ್ಕಾರಗಳು ಎದುರಿಸಬೇಕೆಂದು ಆಗ್ರಹಿಸಬೇಕು. ಈ ನಿಟ್ಟಿನಲ್ಲಿ, ಪ್ರಬಲ ಜನಾಂದೋಲನವನ್ನು ಹರಿಬಿಡಬೇಕೆಂದು ನಮ್ಮ ಪಕ್ಷ ಎಸ್‌ಯುಸಿಐ(ಕಮ್ಯುನಿಸ್ಟ್) ಕರೆ ನೀಡುತ್ತದೆ.

# ಮತ್ತೊಂದು ರೈಲು ಅಪಘಾತ ಮತ್ತಷ್ಟು ಸಾವುನೋವು

ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ 10 ವರ್ಷಗಳ ಆಡಳಿತದಲ್ಲಿ 23ನೇ ದೊಡ್ಡ ರೈಲ್ವೆ ಅಪಘಾತವು ಪಶ್ಚಿಮ ಬಂಗಾಳದ, ನ್ಯೂ ಜಲ್ಪೈಗುರಿ ಬಳಿ ಸಂಭವಿಸಿದೆ. ಕಳೆದ ಜೂನ್ 17 ರಂದು ವೇಗವಾಗಿ ಚಲಿಸುತ್ತಿದ್ದ ಗೂಡ್ಸ್ ರೈಲು ನಿಂತಿದ್ದ ಕಾಂಚನಜುಂಗ ಎಕ್ಸ್‌ಪ್ರೆಸ್ ಗಾಡಿಗೆ ಡಿಕ್ಕಿ ಹೊಡೆದಿದೆ. ಈ ಅಪಘಾತದಲ್ಲಿ 10 ಮಂದಿ ಮೃತಪಟ್ಟಿದ್ದಾರೆ ಮತ್ತು ಹಲವರು ತೀವ್ರವಾಗಿ ಗಾಯಗೊಂಡಿದ್ದಾರೆ. ಪ್ಯಾಸೆಂಜರ್ ರೈಲು ಗಾಡಿಗಳ ಟಿಕೆಟ್ ದರವನ್ನು ಸತತವಾಗಿ ಏರಿಸುತ್ತಲೇ ಬಂದಿರುವ ಕೇಂದ್ರ ಸರ್ಕಾರಕ್ಕೆ, ಜನಗಳ ಸುರಕ್ಷತೆಯ ಬಗ್ಗೆ ಏನೂ ಕಾಳಜಿ ಇಲ್ಲವೆಂಬುದು ಈ ದುರ್ಘಟನೆಯಿಂದ ಸ್ಪಷ್ಟವಾಗುತ್ತದೆ. 2023ರ ಬಾಲಸೋರ್ ರೈಲು ಅಪಘಾತದ ನಂತರ ಎರಡು ರೈಲುಗಳ ನಡುವೆ ಘರ್ಷಣೆಯನ್ನು ತಡೆಯಲು 'ಕವಚ' ವ್ಯವಸ್ಥೆಯನ್ನು ಜಾರಿಗೆ ತರುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಈ ಭರವಸೆ ಇನ್ನು ಹುಸಿಯಾಗಿಯೇ ಉಳಿದಿದೆ.

ಸರಿಯಾದ ಮೂಲಸೌಕರ್ಯಗಳನ್ನು ನಿರ್ಮಿಸುವ ಬದಲು ರೈಲ್ವೆ ಇಲಾಖೆಯು ನೌಕರರನ್ನು ಕಡಿಮೆ ಮಾಡುವ ಮೂಲಕ ಭಾರಿ ಪ್ರಮಾಣದ ಲಾಭವನ್ನು ಗಳಿಸುತ್ತಿದೆ. ರೈಲ್ವೆ ನಿರ್ವಹಣಾ ಇಲಾಖೆಯಲ್ಲಿ ವಿಶೇಷವಾಗಿ ಟ್ರ್ಯಾಕ್ ತಪಾಸಣೆ, ಮಾನಿಟರಿಂಗ್ ಸಿಗ್ನಲ್ ವ್ಯವಸ್ಥೆ, ಇತ್ಯಾದಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಏಕೆ ಭರ್ತಿ ಮಾಡುತ್ತಿಲ್ಲ? ಅಂತಹ ನಿರ್ಣಾಯಕ ಕೆಲಸಗಳನ್ನು ಖಾಸಗಿ ಗುತ್ತಿಗೆದಾರರಿಗೆ ಏಕೆ ಬಿಡಲಾಗಿದೆ? ಅಪಘಾತದ ನಂತರ, ಸರ್ಕಾರ ಮತ್ತು ರೈಲು ಅಧಿಕಾರಿಗಳು ನೀಡುವ ಕೇವಲ ವಿಷಾದ ವ್ಯಕ್ತಪಡಿಸುವ ಹೇಳಿಕೆಗಳು ಅವರ ಬೇಜವಾಬ್ದಾರಿ ವರ್ತನೆಯನ್ನು ತೋರಿಸುತ್ತವೆ. ಜೂನ್ 17 ರಂದು ನಡೆದ ಅಪಘಾತದಲ್ಲೂ ಸಹ ಸರ್ಕಾರದ ಈ ನಿಲುವು ಸ್ಪಷ್ಟವಾಗಿ ಕಾಣಿಸುತ್ತದೆ. ಅವತ್ತಿನ ದುರ್ಘಟನೆಗೆ ಕಾರಣ ಚಾಲಕನ ಬೇಜವಾಬ್ದಾರಿ ಎಂದು ಹೇಳಿ ಎಲ್ಲಾ ಹೊಣೆಯನ್ನು ಚಾಲಕನ ಮೇಲೆ ಹಾಕಿ, ಸರ್ಕಾರವು ಮುಗುಮ್ಮಾಗಿ ಕುಳಿತಿದೆ. ರೈಲ್ವೆಯ ಹಿರಿಯ ಅಧಿಕಾರಿಗಳು ಸರ್ಕಾರದ ಈ ಹೇಳಿಕೆಯನ್ನು ಒಪ್ಪಿಲ್ಲ. ಅಪಘಾತ ನಡೆದ ನಂತರ ಗಾಯಾಳುಗಳಿಗೆ ಸರಿಯಾದ ಪ್ರಥಮ ಚಿಕಿತ್ಸೆ ಕೂಡ ದೊರೆಯಲಿಲ್ಲ. ಕೊನೆಗೆ, ಅಲ್ಲಿರುವ ಸ್ಥಳೀಯ ನಿವಾಸಿಗಳು ನಡೆಯುತ್ತಿರುವ ಈ–ದುಲ್ ಜಹ ಹಬ್ಬವನ್ನು ಕೈ ಬಿಟ್ಟು ಗಾಯಳುಗಳಿಗೆ ಸ್ಪಂದಿಸಿ ಸಹಕರಿಸಿದರು. ನಮ್ಮ ಪಕ್ಷದ ವೈದ್ಯಕೀಯ ಘಟಕ ಮೆಡಿಕಲ್ ಸರ್ವಿಸ್ ಸೆಂಟರ್ ಸಹ ಅಪಘಾತ ನಡೆದ ಸ್ಥಳದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಿ ಬಿಕ್ಕಟ್ಟಿಗೆ ಸ್ಪಂದಿಸಿತು.

ಮಾನ್ಯ ಪ್ರಧಾನ ಮಂತ್ರಿಗಳು ದೇಶಕ್ಕೆ 49 'ವಂದೇ ಭಾರತ್' ರೈಲುಗಳು ಕೊಡುಗೆ ನೀಡಿದ್ದೇವೆ ಎಂದು ಮಾಧ್ಯಮಗಳ ಮುಂದೆ ಹೇಳಿಕೊಂಡು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಆದರೆ, ಈ ಸರಣಿ ಅಪಘಾತಗಳ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳುತ್ತಿಲ್ಲ. ಪ್ರಧಾನಮಂತ್ರಿಗಳು ಕೇವಲ ಪ್ರಚಾರಪ್ರಿಯರೇ ಹೊರತು ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸದೆ ಇರುವುದು ಇದರಿಂದ ಸ್ಪಷ್ಟವಾಗುತ್ತದೆ.

ಕೂಡಲೇ, ಸರ್ಕಾರ ಎಲ್ಲಾ ಗಾಯಾಳುಗಳಿಗೆ ಹಾಗೂ ಅಪಘಾತದಲ್ಲಿ ಮರಣ ಹೊಂದಿದ ಎಲ್ಲರಿಗೂ ಸೂಕ್ತ ಪರಿಹಾರ ನೀಡಬೇಕಾಗಿದೆ. ಅಪಘಾತದ ನಿಖರ ಕಾರಣ ತಿಳಿಯಲು ನ್ಯಾಯಾಂಗ ತನಿಖೆ ನಡೆಸಿ ಕೂಡಲೇ ರೈಲುಗಳ ಮಧ್ಯೆ ಘರ್ಷಣೆ ತಡೆಯಬಲ್ಲ ಸಾಧನವನ್ನು ಅಳವಡಿಸಿ ಭವಿಷ್ಯದಲ್ಲಿ ರೈಲ್ವೆ ಅಪಘಾತಗಳು ಆಗದಿರುವಂತೆ ಕ್ರಮ ಕೈಗೊಳ್ಳಬೇಕೆಂದು ನಮ್ಮ ಪಕ್ಷವು ಆಗ್ರಹಿಸುತ್ತದೆ.

Published by: K.Radhakrishna on behalf of **SOCIALIST UNITY CENTRE OF INDIA-COMMUNIST,** Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA